ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಇಂದಿನ ಹಳ್ಳಿ ಅಥವಾ ದಿಲ್ಲಿಯ ಯುವಸಮೂಹ ಒಂದು ಪದಕದ ಜಯಕ್ಕೆ ಮೈಮರೆಯುವವರಲ್ಲ. ಮತ್ತಷ್ಟು ಸಾಧಿಸಬೇಕೆನ್ನುವ ಮನೋಭಾವದವರು

ಹರಿಯಾಣ– ಲಾಠಿಚಾರ್ಜ್: 10 ರೈತರಿಗೆ ಗಾಯ 7

ದೇಶದಲ್ಲಿ ತೀವ್ರ ಬರಗಾಲದ ಭೀತಿ

ನ್ಯಾಯದಾನ ವಿಳಂಬ ಆಗದಿರಲಿ 4

ಹದಗೆಡುತ್ತಿರುವ ಅಫ್ಗನ್ ಪರಿಸ್ಥಿತಿ 7

ರಾಜ್ಯ ಕೋವಿಡ್ ಅಂಕಿ–ಅಂಶ

29,45,993 ಒಟ್ಟು ಸೋಂಕಿತರು (29,44,764 ನಿನ್ನೆಯ ವಿವರ)

18,897 ಸಕ್ರಿಯ ಪ್ರಕರಣಗಳು

28,89,809 ಗುಣಮುಖರಾದವರು

37,261 ಒಟ್ಟು ಸಾವು

ಪ್ರಜಾವಾಣಿ ಗ್ರಾಫಿಕ್ಸ್

ದಿನದ ಏರಿಕೆ

ಹೊಸ ಪ್ರಕರಣ	1,229
ಗುಣಮುಖ	1,289
ಸಾವು	13

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಒಳ ಪುಟಗಳು

ಕಪ್ಪು ಶಿಲೀಂಧ್ರ: 10 ದಿನಗಳಲ್ಲಿ 10 ಸಾವು 7

ಕೇರಳ: ಮುಂದಿನ ವಾರದಿಂದ ರಾತ್ರಿ ಕರ್ಫ್ಯೂ ಜಾರಿ 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಲಾಕ್‌ಡೌನ್ ಸಂದರ್ಭ: ರಾಜ್ಯದಲ್ಲಿ ಹೆಚ್ಚಿದ ಬಾಲ್ಯವಿವಾಹ

ಬಾಲ್ಯಕ್ಕೆ ಮದುವೆ ಸಂಕೋಲೆ

• ವೆಂಕಟೇಶ ಜಿ.ಎಚ್

ಬಾಗಲಕೋಟೆ: ಮಕ್ಕಳ ಗುಂಪಿನ (ಚಿಲ್ಡ್ರನ್ಸ್ ಕ್ಲಬ್) ಫೋನ್ ಕರೆಗೆ ಓಗೊಟ್ಟಿದ್ದ ಇಲ್ಲಿನ ಮಕ್ಕಳ ಸಹಾಯವಾಣಿ ಸದಸ್ಯರು ಸಮೀಪದ ಮುರನಾಳ ಗ್ರಾಮದ ಮನೆಯೊಂದಕ್ಕೆ ಈಚೆಗೆ ತಡ ರಾತ್ರಿ ತೆರಳಿದ್ದರು. ನಸುಕಿನಲ್ಲಿ ಹಸೆಮಣೆ ಏರಬೇಕಿದ್ದ 16ರ ಹರೆಯದ ಬಾಲಕಿಯನ್ನು ಬಾಲ್ಯವಿವಾಹದ ಸಂಕೋಲೆಯಿಂದ ರಕ್ಷಿಸಿದ್ದರು.

ಬಾಲಕಿ ಮೂಡುಬಿದಿರೆಯ ವಸತಿ ಶಾಲೆಯೊಂದರ ವಿದ್ಯಾರ್ಥಿನಿ. ಪೋಷಕರು ದುಡಿಯಲು (ಗುಳೇ) ಅಲ್ಲಿಗೆ ಹೋಗಿದ್ದರು. ಕೋವಿಡ್ ಲಾಕ್‌ಡೌನ್ ಕಾರಣ ಊರಿಗೆ ಮರಳಿದ್ದರು. ಈ ಅವಧಿಯಲ್ಲೇ ಮಗಳ ಮದುವೆ ಮಾಡುವ ತರಾತುರಿಯಲ್ಲಿ ಇದ್ದರು. ಅಧಿಕಾರಿಗಳು ಮನೆಬಾಗಿಲು ಬಡಿದಾಗ, ಪೋಷಕರು ಹುಡುಗಿಯನ್ನು ಕಂಬಳಿಯಲ್ಲಿ ಸುತ್ತಿ ಮಂಚದ ಕೆಳಗೆ ಮುಚ್ಚಿಟ್ಟಿದ್ದರು.

ಪಕ್ಕದ ವೀರಾಪುರದಲ್ಲಿ, 30 ವರ್ಷದ ವ್ಯಕ್ತಿಗೆ ಎರಡನೇ ಮದುವೆ ಮಾಡಲು ಹೊರಟಿದ್ದ ಮುಧೋಳ ತಾಲ್ಲೂಕಿನ ಚಿಚಖಂಡಿಯ 12 ವರ್ಷದ ಬಾಲಕಿಯನ್ನು ರಕ್ಷಿಸಿ ಎಫ್‌ಐಆರ್ ದಾಖಲಿಸಲಾಯಿತು. ಬಂದವರಿಗೆ ತೋರಿಸಲೆಂದೇ ವಿವಾಹಿತೆಯೊಬ್ಬರನ್ನು ಮದುಮಗಳ ದಿರಿಸಿನಲ್ಲಿ ಅಲ್ಲಿ ಕೂರಿಸಿದ್ದರು..

ಮುರನಾಳ, ವೀರಾಪುರದ ಬಾಲೆಯರು ಸಂಬಂಧಿಸಿದವರ ಸಕಾಲಿಕ ಮಧ್ಯಪ್ರವೇಶದಿಂದ ತಪ್ಪಿಸಿಕೊಂಡರು. ಆದರೆ, ಕೋವಿಡ್ ಲಾಕ್‌ಡೌನ್ ವೇಳೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಬಾಲಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಬಾಲ್ಯವಿವಾಹದ ಸಂಕೋಲೆಗೆ ಕೊರಳೊಡ್ಡಿದ್ದಾರೆ. ಇದನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಕಿ–ಅಂಶವೇ ಪುಷ್ಟೀಕರಿಸುತ್ತದೆ.

ಒಳನೋಟ

ಹಸೆಮಣೆ ಏರುತ್ತಿರುವ ಬಾಲೆಯರು

ಪ್ರತಿಕ್ರಿಯಿಸಿ: 9606038256

feedback@prajavani.co.in

> **ಲಾಕ್‌ಡೌನ್ ಸಮಯದಲ್ಲಿ ಬಾಲ್ಯ ವಿವಾಹಗಳು ನಡೆದಿವೆ ಎನ್ನಲಾಗುತ್ತಿದೆ. ಸದ್ಯದಲ್ಲಿಯೇ ಸಭೆ ಕರೆದು ಈ ಬಗ್ಗೆ ಚರ್ಚಿಸಿ, ಪರಿಣಾಮಕಾರಿಯಾದ ಪರಿಹಾರ ಹುಡುಕಲಾಗುವುದು**
>
> **ಹಾಲಪ್ಪ ಆಚಾರ್**
> ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ

ಕೋವಿಡ್ ತಂದಿತ್ತ ಅಭದ್ರತೆ: ಕೋವಿಡ್ ಸಾಂಕ್ರಾಮಿಕವು ಬದುಕನ್ನು ಅನಿಶ್ಚಿತಗೊಳಿಸಿದೆ. ಸಾವಿನ ಆತಂಕ, ಲಾಕ್‌ಡೌನ್‌ನಿಂದ ಆರ್ಥಿಕ ಸಂಕಷ್ಟಕ್ಕೀಡಾದವರು ಬಾಲ್ಯವಿವಾಹ ಮಾಡಲು ಮುಂದಾಗುತ್ತಿದ್ದಾರೆ. ಸೋಂಕಿನಿಂದ ಅಪ್ಪ–ಅಮ್ಮ ಇಬ್ಬರಲ್ಲಿ ಒಬ್ಬರು ಸಾವಿಗೀಡಾದರೂ ಹದಿಹರೆಯದ ಮಕ್ಕಳು ಹಸೆಮಣೆ ಏರಬೇಕಾಗಿದೆ.

‘ಈ ಮೊದಲು ಶಾಲೆಗೆ ಬಾಲಕಿ ಗೈರುಹಾಜರಾದರೆ ಆಕೆಯ ಗೆಳತಿಯರು ಗಮನಿಸುತ್ತಿದ್ದರು. ಶಿಕ್ಷಕರು ಪ್ರಶ್ನಿಸುತ್ತಿದ್ದರು. ಮದುವೆ ಸಂಗತಿ ಗೊತ್ತಾದರಂತೂ ಮಕ್ಕಳ ಕ್ಲಬ್‌ಗಳು ಕಾರ್ಯೋನ್ಮುಖವಾಗುತ್ತಿದ್ದವು. ಶಾಲೆಗಳಿಲ್ಲದೆ ನಿಗಾವಣೆ ಮಾಡುವುದು ಕಷ್ಟವಾಗಿದೆ’ ಎಂದು ರೀಚ್ ಸ್ವಯಂ ಸೇವಾ ಸಂಸ್ಥೆ ಸಂಯೋಜಕ ಜಿ.ಎನ್.ಕುಮಾರ್ ಹೇಳುತ್ತಾರೆ.

6ನೇ ಪುಟ ನೋಡಿ

ಬಾಲೆಯರ ರಕ್ಷಣೆಗೆ ‘ಸುರಕ್ಷಿಣಿ’ ಪೋರ್ಟಲ್

ಟಿ.ಭೂಬಾಲನ್

ಬಾಲ್ಯವಿವಾಹದಿಂದ ರಕ್ಷಣೆಗೊಳಗಾದ ಬಾಲಕಿಯರಿಗೆ 18 ವರ್ಷದವರೆಗೆ ಮದುವೆ ಮಾಡದಂತೆ ನಿಗಾ ವಹಿಸಲು ಬಾಗಲಕೋಟೆ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಟಿ.ಭೂಬಾಲನ್ ‘ಸುರಕ್ಷಿಣಿ’ ಹೆಸರಿನ ವೆಬ್ ಪೋರ್ಟಲ್ ಆರಂಭಿಸಿದ್ದಾರೆ. ಇದು ರಾಜ್ಯದಲ್ಲಿಯೇ ಮೊದಲ ಪ್ರಯೋಗ.

ಬಾಲ್ಯ ವಿವಾಹ ತಡೆದಾಗ, ಸಂಬಂಧಿಸಿದ ಬಾಲಕಿಯರ ವಿವರ ಪೋರ್ಟಲ್‌ನಲ್ಲಿ ದಾಖಲಾಗಲಿದೆ. ನಂತರ ಅಂಗನವಾಡಿ ಕಾರ್ಯಕರ್ತೆಯಿಂದ ಮೊದಲುಗೊಂಡು ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿವರೆಗಿನ ಅಧಿಕಾರಿ, ಸಿಬ್ಬಂದಿ ಆ ಬಾಲಕಿಯರ ಮನೆಗೆ ಆಗಾಗ ಭೇಟಿ ನೀಡಿ ಫೋಟೊ ಸಮೇತ ಆಕೆಯ ಸದ್ಯದ ಸ್ಥಿತಿಗತಿ ವಿವರವನ್ನು ಅದರಲ್ಲಿ ದಾಖಲಿಸಲಿದ್ದಾರೆ. ಇದು ಸಂಪೂರ್ಣ ಆಂತರಿಕ ವಿಚಾರ, ಹೊರಗಿನವರಿಗೆ ಮಾಹಿತಿ ನೀಡುವುದಿಲ್ಲ ಎಂದು ಪೋರ್ಟಲ್ ನಿರ್ವಹಣೆ ಮಾಡುವ ಅಧಿಕಾರಿ ಗಿರಿಯಾಚಾರ್ ಹೇಳುತ್ತಾರೆ.

1098ಗೆ ಕರೆ ಮಾಡಲು ಜಾಗೃತಿ

ಬಾಲ್ಯ ವಿವಾಹ ನಡೆದ ಗ್ರಾಮಗಳಿಗೆ ಮಕ್ಕಳ ಕಲ್ಯಾಣ ಸಮಿತಿ, ಆಶಾ, ಅಂಗನವಾಡಿ ಕಾರ್ಯಕರ್ತೆಯರು ತೆರಳಿ, ಬಾಲ್ಯ ವಿವಾಹ ನಡೆಯುವ ಬಗ್ಗೆ ಮಾಹಿತಿ ದೊರೆತರೆ ಮಕ್ಕಳ ಸಹಾಯವಾಣಿ 1098ಕ್ಕೆ ಕರೆ ಮಾಡುವಂತೆ ಜನರಿಗೆ ಕರಪತ್ರ ವಿತರಿಸಿ ಜಾಗೃತಿ ಮೂಡಿಸುತ್ತಿದ್ದಾರೆ ಎಂದು ಹಾಸನದ ಮಕ್ಕಳ ಕಲ್ಯಾಣ ಸಮಿತಿಯ ಮಂಜುನಾಥ್ ಹೇಳುತ್ತಾರೆ.

ಒಂದು ಕಾಲದಲ್ಲಿ ಹೆಚ್ಚು ಬಾಲ್ಯ ವಿವಾಹ ನಡೆಯುತ್ತಿದ್ದ ಚಾಮರಾಜನಗರದಲ್ಲಿ ಈಗ ಸಂಖ್ಯೆ ಕೊಂಚ ಇಳಿಮುಖವಾಗಿದೆ. ಹೆಚ್ಚು ಹೆಚ್ಚು ಜಾಗೃತಿ ಕಾರ್ಯಕ್ರಮಗಳ ಆಯೋಜನೆಯಿಂದ ಮಕ್ಕಳ ಸಹಾಯವಾಣಿಗೆ ಹೆಚ್ಚಿನ ಕರೆಗಳು ಬರುತ್ತಿವೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಇನ್ನಷ್ಟು ಸುದ್ದಿಗಳು 6

ಅತ್ಯಾಚಾರ ಪ್ರಕರಣ: ಐವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ‘ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ಐವರು ಆರೋಪಿಗಳನ್ನು ವಿಶೇಷ ಪೊಲೀಸ್ ತಂಡ ತಮಿಳುನಾಡಿನಲ್ಲಿ ಶನಿವಾರ ಬಂಧಿಸಿದೆ. ಮತ್ತೊಬ್ಬ ಆರೋಪಿಗಾಗಿ ಶೋಧ ಕಾರ್ಯ ನಡೆಯುತ್ತಿದೆ’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ತಿಳಿಸಿದರು.

4ನೇ ಪುಟ ನೋಡಿ

ನಿಮ್ಮ ಪರಿಪೂರ್ಣ ಸಂಗಾತಿಯ ಜೊತೆ ಹೊಸ ಕುಟುಂಬವನ್ನು m4marry.com ನೊಂದಿಗೆ ಹುಡುಕಿ.

Register for free

m4marry.com
Where families find each other

Call: 79949 10999 9048112340

ತಾಜಾ ಹಣ್ಣು ಮತ್ತು ತರಕಾರಿಗಳು ಆನ್‌ಲೈನ್‌ನಲ್ಲಿ ಸಿಗುವುದಿಲ್ಲ ಎಂದು ಯಾರು ಹೇಳುತ್ತಾರೆ?

pickily
Your Supermarket App

ಪಿಕಿಲಿ ಆ್ಯಪ್‌ನಲ್ಲಿ ಆರ್ಡರ್ ಮಾಡಿ. ಬೆಂಗಳೂರಿನ ಅತ್ಯಂತ ಮೆಚ್ಚಿನ ಹಣ್ಣು ಮತ್ತು ತರಕಾರಿಗಳ ಡೆಲಿವರಿ ಆ್ಯಪ್.

ಟ್ರಯಲ್ ಕೊಡುಗೆ
ಸೊಪ್ಪು ತರಕಾರಿಗಳು* ₹1/100 ಗ್ರಾಂ

* ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ.

30 ನಿಮಿಷಗಳಲ್ಲಿ ಉಚಿತ ಡೆಲಿವರಿ* | ಕನಿಷ್ಠ ಆರ್ಡರ್ ಮೌಲ್ಯ ಇಲ್ಲ | ಬೆಂಗಳೂರಿನಲ್ಲಿ 1 ಲಕ್ಷಕ್ಕೂ ಹೆಚ್ಚು ಬಳಕೆದಾರರು ಮತ್ತು ಪ್ಲೇಸ್ಟೋರ್‌ನಲ್ಲಿ 4+ ಸ್ಟಾರ್ ರೇಟಿಂಗ್

ಪಿಕಿಲಿ ಆ್ಯಪ್‌ನಲ್ಲಿ ಲಭ್ಯವಿರುವುದು: ತರಕಾರಿಗಳು | ಹಣ್ಣುಗಳು | ಡೈರಿ | ಮೊಟ್ಟೆ ಮತ್ತು ಬ್ರೆಡ್‌ಗಳು | ಹಿಟ್ಟು

GET IT ON Google Play | Download on the App Store

ರಿಯಲ್ ಎಸ್ಟೇಟ್ ಯೋಜನೆಗಳ ಪೂರ್ಣಗೊಳಿಸುವಿಕೆ ಅವಧಿ 6 ತಿಂಗಳು ವಿಸ್ತರಣೆ

ಅಸ್ಪಷ್ಟ ಅಧಿಸೂಚನೆ: ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಯೋಜನೆಗಳನ್ನು ಪೂರ್ಣಗೊಳಿಸುವ ಅವಧಿಯನ್ನು 2021ರ ಅಕ್ಟೋಬರ್‌ವರೆಗೆ ವಿಸ್ತರಿಸಿರುವ ರಾಜ್ಯ ಸರ್ಕಾರದ ಕ್ರಮಕ್ಕೆ ಅಸಮಾಧಾನ ವ್ಯಕ್ತವಾಗಿದೆ.

ಕೋವಿಡ್‌ನಿಂದ ಉಂಟಾದ ಆರ್ಥಿಕ ಬಿಕ್ಕಟ್ಟಿನ ಕಾರಣ ಯೋಜನೆಗಳ ಪೂರ್ಣಗೊಳಿಸುವ ಅವಧಿಯನ್ನು ಅ.1ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಶುಕ್ರವಾರ ಅಧಿಸೂಚನೆ ಹೊರಡಿಸಿದೆ. 2021ರ ಏ.1 ಮತ್ತು ಆನಂತರ ಕೊನೆಗೊಳ್ಳುವಂತಹ ಪ್ರಕರಣಗಳಿಗೆ ಮಾತ್ರ ಈ ವಿಸ್ತರಣೆ ಅನ್ವಯವಾಗಲಿದೆ ಎಂದು ಸರ್ಕಾರ ಹೇಳಿದೆ.

'ಸರ್ಕಾರದ ಸುತ್ತೋಲೆಯಲ್ಲಿ ಯಾವುದೇ ಸ್ಪಷ್ಟತೆಯಿಲ್ಲ. ಎಲ್ಲ ಯೋಜನೆಗಳ ಅವಧಿಯನ್ನೂ ವಿಸ್ತರಿಸಿದರೆ ಮನೆ ಖರೀದಿದಾರರಿಗೆ ಅಥವಾ ಗ್ರಾಹಕರಿಗೆ ತೊಂದರೆಯಾಗಲಿದೆ' ಎಂದು ಫೋರಂ ಫಾರ್ ಕಲೆಕ್ಟಿವ್ ಎಫರ್ಟ್ಸ್ (ಎಫ್‌ಪಿಸಿಇ) ಹೇಳಿದೆ.

'ಯೋಜನೆಗಳ ಅವಧಿ ವಿಸ್ತರಣೆಗೆ ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತದೆಯೇ ಮತ್ತು ಅದರಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವ ಯಾವ ವ್ಯವಸ್ಥೆ ಮಾಡಲಾಗಿದೆ ಎಂಬ ಸ್ಪಷ್ಟತೆಯೂ ಅಧಿಸೂಚನೆಯಲ್ಲಿ ಇಲ್ಲ' ಎಂದು ಎಫ್‌ಪಿಸಿಇ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಶಂಕರ್ ಹೇಳಿದರು.

'ಅಧಿಸೂಚನೆಯಲ್ಲಿ ಸ್ಪಷ್ಟತೆ ಇದ್ದರೆ, ಮನೆ ಖರೀದಿದಾರರಿಗೂ ಅನುಕೂಲವಾಗುತ್ತದೆ. ಯಾವುದೇ ಅವಶ್ಯಕತೆ ಇಲ್ಲದೆ, ಸ್ಪಷ್ಟ ಕಾರಣವೂ ಇಲ್ಲದೆ ಎಲ್ಲ ಯೋಜನೆಗಳ ಅವಧಿ ವಿಸ್ತರಿಸಿದರೆ, ಸಾಲ ಮಾಡಿ ನಿವೇಶನ ಅಥವಾ ಮನೆ ಖರೀದಿಸಿದ ಗ್ರಾಹಕರಿಗೆ ತೊಂದರೆಯಾಗಲಿದೆ. ಸಾಲದ ಬಡ್ಡಿ, ಮಾಸಿಕ ಕಂತು (ಇಎಂಐ), ಇರುವ ಮನೆಗೆ ಬಾಡಿಗೆ ಕಟ್ಟುವ ಹೊರೆಯೂ ಗ್ರಾಹಕರ ಮೇಲೆ ಬೀಳಲಿದೆ' ಎಂದು ಹೇಳಿದರು.

'ಕಳೆದ ವರ್ಷ ಕೋವಿಡ್ ಬಿಕ್ಕಟ್ಟು ನೆಪದಲ್ಲಿಯೇ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ರೇರಾ) ಅಧಿಕಾರಿಗಳು ವಿವಿಧ ಯೋಜನೆಗಳ ಅವಧಿಯನ್ನು ಅಕ್ರಮವಾಗಿ ವಿಸ್ತರಿಸಿದ್ದರು. ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದ ಮಾರ್ಗಸೂಚಿಗಳನ್ನೂ ಪಾಲಿಸಿರಲಿಲ್ಲ. ಒಂದೇ ಯೋಜನೆಗೆ ಎರಡೆರಡು ಬಾರಿ ಅವಧಿ ವಿಸ್ತರಿಸಿದ ಉದಾಹರಣೆಗಳೂ ಇವೆ. ಈಗ ಮತ್ತೆ ಅವಧಿ ವಿಸ್ತರಣೆ ಮಾಡಿರುವುದರಿಂದ, ಅವಶ್ಯಕತೆ ಇಲ್ಲದಿದ್ದರೂ ಕೆಲವು ಬಿಲ್ಡರ್‌ಗಳು ಕಾಲಾವಕಾಶ ಪಡೆಯುವ ಸಾಧ್ಯತೆ ಇದೆ' ಎಂದೂ ಕಳವಳ ವ್ಯಕ್ತಪಡಿಸಿದರು.

'ಆರು ತಿಂಗಳು ವಿಸ್ತರಿಸಲೇಬೇಕೆಂದಿಲ್ಲ'

'ಕಾಲಾವಧಿ ವಿಸ್ತರಿಸಿ ಅಧಿಸೂಚನೆ ಹೊರಡಿಸಿರುವುದು ರಾಜ್ಯ ಸರ್ಕಾರ. ಸರ್ಕಾರದ ಆದೇಶದನ್ವಯವೇ ಯೋಜನೆಗಳ ಪೂರ್ಣಗೊಳಿಸುವಿಕೆ ಅವಧಿಯನ್ನು ವಿಸ್ತರಿಸಲಾಗುತ್ತದೆ' ಎಂದು ರೇರಾ ಮುಖ್ಯಸ್ಥ ಕಿಶೋರ್ ಚಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಏ.1 ಮತ್ತು ಆನಂತರ ಕೊನೆಗೊಳ್ಳುವ ಪ್ರಕರಣಗಳಿಗೆ ಮಾತ್ರ ಇದು ಅನ್ವಯಿಸಲಿದೆ ಎಂಬ ಅಂಶವನ್ನೂ ಸ್ಪಷ್ಟವಾಗಿ ಹೇಳಲಾಗಿದೆ. ಅಲ್ಲದೆ, ನಿರ್ದಿಷ್ಟವಾಗಿ ಆರು ತಿಂಗಳ ಕಾಲಾವಕಾಶ ತೆಗೆದುಕೊಳ್ಳಲೇಬೇಕು ಎಂದೂ ಅಲ್ಲ. ಯೋಜನೆ ಪೂರ್ಣಗೊಂಡಂತೆ ಡೆವಲಪರ್‌ಗಳು ಖರೀದಿದಾರರಿಗೆ ಮನೆ ಅಥವಾ ನಿವೇಶನ ಒದಗಿಸಲಿದ್ದಾರೆ' ಎಂದೂ ಅವರು ಹೇಳಿದರು. 'ಕೋವಿಡ್ ಬಿಕ್ಕಟ್ಟಿನ ಕಾರಣ ರಿಯಲ್ ಎಸ್ಟೇಟ್ ಉದ್ಯಮವು ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿರುವುದರಿಂದ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ' ಎಂದರು.

ತೆರವುಗೊಳಿಸಿದವರೇ ಹೊಸ ತಂಗುದಾಣ ನಿರ್ಮಿಸಲಿ: ಸ್ಥಳೀಯರ ಒತ್ತಾಯ

ಪ್ರಯಾಣಿಕರ ತಂಗುದಾಣ ರಾತ್ರೋರಾತ್ರಿ ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ವಾರ್ಡ್‌ನ ಮಂಜುನಾಥ ಬಡಾವಣೆ ಬಳಿ ಟಿ.ಸಿ. ಪಾಳ್ಯ ಮುಖ್ಯರಸ್ತೆಯ ಪಕ್ಕದಲ್ಲಿದ್ದ ಪ್ರಯಾಣಿಕರ ತಂಗುದಾಣ ಶುಕ್ರವಾರ ರಾತ್ರೋರಾತ್ರಿ ನಾಪತ್ತೆಯಾಗಿದೆ!

'ಬಿಬಿಎಂಪಿ ವಾಹನ' ಎಂಬ ಫಲಕ ಹಾಕಿಕೊಂಡಿದ್ದ ವಾಹನದಲ್ಲಿ ಬಂದಿದ್ದವರು ತಂಗುದಾಣವನ್ನು ವ್ಯವಸ್ಥಿತವಾಗಿ ತೆರವುಗೊಳಿಸಿದ್ದಾರೆ. ಆದರೆ, ಈ ತಂಗುದಾಣವನ್ನು ನಾವು ತೆರವುಗೊಳಿಸಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

'ಶುಕ್ರವಾರ ರಾತ್ರಿ 11ರ ವರೆಗೂ ಪ್ರಯಾಣಿಕರ ತಂಗುದಾಣ ಇತ್ತು. ಶನಿವಾರ ಬೆಳಿಗ್ಗೆ ನೋಡಿದಾಗ, ಅಲ್ಲಿ ಒಂದು ತಂಗುದಾಣ ಇತ್ತು ಎಂಬ ಸುಳಿವೂ ಸಿಗದಂತೆ ಅದನ್ನು ತೆರವುಗೊಳಿಸಲಾಗಿದೆ. ಬಿಬಿಎಂಪಿಯ ಅಧಿಕಾರಿಗಳನ್ನು ಕೇಳಿದರೆ, ತಮಗೆ ಈ ವಿಚಾರ ತಿಳಿದೇ ಇಲ್ಲ ಎನ್ನುತ್ತಾರೆ' ಎಂದು ಸ್ಥಳೀಯ ನಿವಾಸಿ ಪುರುಷೋತ್ತಮ್ 'ಪ್ರಜಾವಾಣಿ'ಗೆ ತಿಳಿಸಿದರು.

ಬಸ್ ನಿಲ್ದಾಣ ನಿರ್ಮಾಣವಾದ ಬಳಿಕ ಅದರ ಹಿಂದಿನ ನಿವೇಶನದಲ್ಲಿ ಆರ್.ಎನ್.ಎಸ್ ಕಾಂಪ್ಲೆಕ್ಸ್ ನಿರ್ಮಾಣವಾಗಿತ್ತು. ಆ ಕಟ್ಟಡದಲ್ಲಿ 'ರೂಟ್ ಆ್ಯಂಡ್ ಶೂಟ್ಸ್ ' ಫ್ರೂಟ್ಸ್ ಮಳಿಗೆ ಹಾಗೂ ಮಂಜುನಾಥ ನೇತ್ರಾಲಯ ಆಸ್ಪತ್ರೆಗಳಿವೆ. ಆನಂದಪುರ ಮುಖ್ಯರಸ್ತೆಯಲ್ಲಿನ ಈ ಕಾಂಪ್ಲೆಕ್ಸ್ ಗೆ ಬಸ್ ನಿಲ್ದಾಣ ಅಡ್ಡಲಾಗಿತ್ತು.

'ಹೊಯ್ಸಳ ನಗರದ ಲಯನ್ಸ್ ಕ್ಲಬ್‌ನವರು ಇಲ್ಲಿ 2016–17ರಲ್ಲಿ ಸುಮಾರು ₹ 1.5 ಲಕ್ಷ ವೆಚ್ಚದಲ್ಲಿ ಈ ತಂಗುದಾಣವನ್ನು ನಿರ್ಮಿಸಿಕೊಟ್ಟಿದ್ದರು. ಬಿಬಿಎಂಪಿಯಿಂದ ಎಲ್ಲ ರೀತಿಯ ಮಂಜೂರಾತಿಗಳನ್ನು ಪಡೆದ ಬಳಿಕ ಸಾರ್ವಜನಿಕ ಸ್ಥಳದಲ್ಲೇ ಅದನ್ನು ನಿರ್ಮಿಸಲಾಗಿತ್ತು. ವರ್ಷದ ಹಿಂದೆ ಈ ತಂಗುದಾಣದ ಹಿಂಭಾಗದಲ್ಲೊಂದು ಬಹುಮಹಡಿ ಕಟ್ಟಡ ನಿರ್ಮಾಣವಾಗಿದೆ. ಅದಕ್ಕೆ ಅಡ್ಡಿಯಾಗುತ್ತದೆ ಎಂಬ ಕಾರಣಕ್ಕೆ ತಂಗುದಾಣವನ್ನು ತೆರವುಗೊಳಿಸಿರುವ ಸಾಧ್ಯತೆ ಇದೆ' ಎಂದು ಕೆಲವು ಸ್ಥಳೀಯರು ಸಂದೇಹ ವ್ಯಕ್ತಪಡಿಸಿದ್ದಾರೆ' ಎಂದರು.

'ಮಂಜುನಾಥ ಬಡಾವಣೆ ಇತ್ತೀಚಿನ ವರ್ಷದಲ್ಲಿ ತ್ವರಿತಗತಿಯಲ್ಲಿ ಬೆಳವಣಿಗೆಯಾಗುತ್ತಿದೆ. ಈ ಪ್ರಯಾಣಿಕರ ತಂಗುದಾಣದಿಂದ ಸ್ಥಳೀಯರಿಗೆ ಅದರಲ್ಲೂ ವಯಸ್ಸಾದವರಿಗೆ, ಮಹಿಳೆಯರಿಗೆ ಹಾಗೂ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗುತ್ತಿತ್ತು. ಯಾವುದೋ ಒಂದು ಕಟ್ಟಡಕ್ಕೆ ಇದರಿಂದ ಸಮಸ್ಯೆಯಾಗುತ್ತಿದೆ ಎಂದು ಅದನ್ನು ಅಕ್ರಮವಾಗಿ ತೆರವುಗೊಳಿಸುವುದು ಎಷ್ಟು ಸರಿ' ಎಂದು ರತ್ನಭಾರತ ರೈತ ಸಮಾಜದ ಅಧ್ಯಕ್ಷ ಎಲ್.ಲಕ್ಷಣ್ ಪ್ರಶ್ನಿಸಿದರು.

'ತಂಗುದಾಣವನ್ನು ಅಕ್ರಮವಾಗಿ ತೆರವುಗೊಳಿಸಿರುವ ದುಷ್ಕರ್ಮಿಗಳನ್ನು ಪತ್ತೆ ಹಚ್ಚುವಂತೆ ಒತ್ತಾಯಿಸಿ ನಾವು ರಾಮಮೂರ್ತಿ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದೇವೆ' ಎಂದು ಅವರು ತಿಳಿಸಿದರು.

'ತಂಗುದಾಣವನ್ನು ತೆರವುಗೊಳಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅವರು ಸ್ವಂತ ವೆಚ್ಚದಲ್ಲಿ ಈ ನಿಲ್ದಾಣವನ್ನು ಮತ್ತೆ ನಿರ್ಮಿಸಿಕೊಡಬೇಕು' ಎಂದು ಸ್ಥಳೀಯ ನಿವಾಸಿ ಬಾಲಾಜಿ ರಘೋತ್ತಮ್ ಬಾಲಿ ಒತ್ತಾಯಿಸಿದರು.

ಪ್ರಯಾಣಿಕರ ತಂಗುದಾಣವಿದ್ದ ಜಾಗದಲ್ಲಿ ಸ್ಥಳೀಯರು ಶನಿವಾರ ಧರಣಿ ನಡೆಸಿದರು

ಬಿಬಿಎಂಪಿಯಿಂದಲೂ ದೂರು

ಬಸ್ ನಿಲ್ದಾಣ ಮಾಯವಾಗಿರುವ ಕುರಿತು ಮಾಹಿತಿ ತಿಳಿದು ಬಿಬಿಎಂಪಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು ಕೆಆರ್ ಪುರ ಪೊಲೀಸ್ ಠಾಣೆಗೆ ದೂರು ನೀಡಿದರು.

'ಬಿಬಿಎಂಪಿ ವತಿಯಿಂದ ಈ ತಂಗುದಾಣವನ್ನು ತೆರವುಗೊಳಿಸಿಲ್ಲ. ಯಾರು ಇದನ್ನು ತೆರವುಗೊಳಿಸಿದ್ದಾರೆ ಎಂದು ಖಚಿತವಾಗಿ ತಿಳಿದಿಲ್ಲ. ತಂಗುದಾಣ ತೆರವುಗೊಳಿಸಿದವರನ್ನು ಪತ್ತೆ ಹಚ್ಚುವಂತೆ ಕೋರಿ ಕೆ.ಆರ್.ಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದೇವೆ' ಎಂದು ಪಾಲಿಕೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಎಚ್.ಎಂ.ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು. ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದಾರೆ. ಈ ಕಾಂಪ್ಲೆಕ್ಸ್ ನಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದ ಡಿವಿಆರ್ ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರತಿಭಟನೆ

ಪ್ರಯಾಣಿಕರ ತಂಗುದಾಣವನ್ನು ರಾತ್ರೋ ರಾತ್ರಿ ತೆರವುಗೊಳಿಸಿದ್ದನ್ನು ವಿರೋಧಿಸಿ ಸ್ಥಳೀಯರು ಶನಿವಾರ ಪ್ರತಿಭಟನೆ ನಡೆಸಿದರು. ತಂಗುದಾಣ ಇದ್ದ ಸ್ಥಳದಲ್ಲಿ ಧರಣಿ ನಡೆಸಿದ ಸ್ಥಳೀಯರು, ಅದೇ ಸ್ಥಳದಲ್ಲಿ ಹೊಸ ತಂಗುದಾಣ ನಿರ್ಮಿಸುವಂತೆ ಒತ್ತಾಯಿಸಿದರು.

'ಸದಾಶಿವ ಆಯೋಗದ ವರದಿಗೆ ವಿರೋಧವಿದೆ'

ಚಿತ್ರದುರ್ಗ: 'ಸದಾಶಿವ ಆಯೋಗದ ವರದಿ ಜಾರಿ ಕುರಿತು ಈ ಹಿಂದೆಯೂ ವಿರೋಧಿಸಿದ್ದೇನೆ. ಈಗಲೂ ವಿರೋಧಿಸುತ್ತೇನೆ' ಎಂದು ಪಶುಸಂಗೋಪನೆ ಸಚಿವ ಪ್ರಭು ಬಿ. ಚವಾಣ್ ಹೇಳಿದರು.

ಶನಿವಾರ ಇಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಅಂಬೇಡ್ಕರ್ ರಚಿಸಿದ ಸಂವಿಧಾನದ ಚೌಕಟ್ಟಿನೊಳಗೆ ನಮ್ಮ ಸಮುದಾಯಕ್ಕೆ ಮೀಸಲಾತಿ ಸೌಲಭ್ಯ ಸಿಕ್ಕಿದೆ. ಕೇಂದ್ರ ಸಚಿವ ನಾರಾಯಣಸ್ವಾಮಿ ಅವರು ಯಾವ ಅರ್ಥದಲ್ಲಿ ಹೇಳಿಕೆ ನೀಡಿದ್ದಾರೋ ಗೊತ್ತಿಲ್ಲ. ವರದಿಗೆ ಯಾವಾಗಲೂ ವಿರೋಧಿಸುತ್ತೇನೆ' ಎಂದರು.

'ಕೊರಚ, ಕೊರಮ, ಭೋವಿ ಸಮುದಾಯಕ್ಕೆ ಮೀಸಲಾತಿ ವಿಚಾರದಲ್ಲಿ ಅನ್ಯಾಯವಾಗಲು ಬಿಡುವುದಿಲ್ಲ. ಕೇಂದ್ರ ಮತ್ತು ರಾಜ್ಯದಲ್ಲಿ ನಮ್ಮದೇ ಸರ್ಕಾರವಿದ್ದು, ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತೇನೆ' ಎಂದು ಹೇಳಿದರು.

ಜನಸಂಪರ್ಕ ಸಭೆ 31ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಅಭಿವೃದ್ಧಿಪಡಿಸಲಿರುವ ಡಾ.ಕೆ.ಶಿವರಾಮ ಕಾರಂತ ಬಡಾವಣೆಗೆ ಸಂಬಂಧಿಸಿದಂತೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿಯು ಇದೇ 31ರಂದು ಬೆಳಿಗ್ಗೆ 11 ಗಂಟೆಗೆ ಸೋಮಶೆಟ್ಟಿಹಳ್ಳಿಯ ಸಮುದಾಯ ಭವನದಲ್ಲಿ ಜನ ಸಂಪರ್ಕ ಸಭೆಯನ್ನು ಏರ್ಪಡಿಸಿದೆ.

ಪ್ರಾಧಿಕಾರವು ಈ ಬಡಾವಣೆಗಾಗಿ 17 ಹಳ್ಳಿಗಳಲ್ಲಿ 3,546 ಎಕರೆ 12 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಹೊರಡಿಸಿದೆ. ಈ ಬಡಾವಣೆಯ ಅಧಿಸೂಚಿತ ಪ್ರದೇಶದ ಆಸ್ತಿ ಮಾಲೀಕರಲ್ಲಿ ತಪ್ಪು ತಿಳಿವಳಿಕೆ ಮತ್ತು ಗೊಂದಲಗಳಿರುವುದನ್ನು ಸುಪ್ರೀಂ ಕೋರ್ಟ್ 2020ರ ಡಿ. 3ರಂದು ನೀಡಿದ್ದ ಆದೇಶದ ಅನುಸಾರ ರಚನೆಯಾಗಿರುವ ಸಮಿತಿಯು ಗಮನಿಸಿದೆ. ಸಮಿತಿ ಅಧ್ಯಕ್ಷ ನ್ಯಾ. ಎ.ವಿ. ಚಂದ್ರಶೇಖರ್, ಸಮಿತಿಯ ಸದಸ್ಯರಾಗಿರುವ ನಿವೃತ್ತ ಐಎಎಸ್ ಅಧಿಕಾರಿ ಜಯಕರ್ ಜೆರೋಮ್, ನಿವೃತ್ತ ಐಪಿಎಸ್ ಅಧಿಕಾರಿ ಎಸ್. ಟಿ. ರಮೇಶ್ ಅವರು ಜನಸಂಪರ್ಕ ಸಭೆಯಲ್ಲಿ ಈ ಪ್ರದೇಶದ ಆಸ್ತಿ ಮಾಲೀಕರ ಗೊಂದಲ ಹಾಗೂ ತಪ್ಪು ತಿಳುವಳಿಕೆಯನ್ನು ನಿವಾರಿಸಲು ಪ್ರಯತ್ನಿಸಲಿದ್ದಾರೆ. ಸುಪ್ರೀಂ ಕೋರ್ಟ್‌ನ ಆದೇಶಗಳ ವಾಸ್ತವ ಉದ್ದೇಶ ಹಾಗೂ ಪರಿಣಾಮಗಳನ್ನು ನೇರವಾಗಿ ಮಾಲೀಕರಿಗೆ ವಿವರಿಸಲಿದ್ದಾರೆ.

ಸುಪ್ರೀಂ ಕೋರ್ಟ್‌ನ ನಿರ್ದೇಶನಗಳ ಮತ್ತು ನ್ಯಾ.ಎ.ವಿ. ಚಂದ್ರಶೇಖರ್ ಸಮಿತಿ ನಡೆಸುತ್ತಿರುವ ಕಾರ್ಯಗಳ ಸರಿಯಾದ ಚಿತ್ರಣವನ್ನು ಪಡೆಯಲು ಎಲ್ಲಾ ಆಸ್ತಿ ಮಾಲೀಕರು ಮತ್ತು ಉತ್ತರದಾಯಿಗಳು ಮೇಲಿನ ಸಭೆ ಭಾಗವಹಿಸುವಂತೆ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.



ಕಠಿಣ ಕಾನೂನು ರೂಪಿಸುವುದರ ಜೊತೆಗೆ ಮಹಿಳೆಯರ ರಕ್ಷಣೆಗೆ ಹಲವು ಸಂಘಟನೆಗಳ ಆಗ್ರಹ

‘ಸಾಮೂಹಿಕ ಅತ್ಯಾಚಾರ’ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮೈಸೂರಿನಲ್ಲಿ ನಡೆದ ವಿದ್ಯಾರ್ಥಿನಿ ಮೇಲಿನ ಸಾಮೂಹಿಕ ಅತ್ಯಾಚಾರ ಕೃತ್ಯವನ್ನು ಖಂಡಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸದಸ್ಯರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು. (ಎಡಚಿತ್ರ) ಎಐಡಿಎಸ್‌ಒ ಸದಸ್ಯರು ನಗರದ ಗಾಂಧಿ ಪ್ರತಿಮೆ ಎದುರು ಶನಿವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಮೈಸೂರಿನಲ್ಲಿ ವಿದ್ಯಾರ್ಥಿನಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಕೃತ್ಯವನ್ನು ಖಂಡಿಸಿ ಹಲವು ಸಂಘಟನೆಗಳ ಸದಸ್ಯರು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸದಸ್ಯರು ಸಂಘಟನೆಯ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ನೇತೃತ್ವದಲ್ಲಿ ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿ ಪ್ರತಿಭಟಿಸಿದರು.

‘ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ದೇಶದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿವೆ. ಇದಕ್ಕೆ ಕಡಿವಾಣ ಹಾಕಲು ಕಾನೂನು ಕಠಿಣಗೊಳಿಸಬೇಕು. ಮಹಿಳೆಯರಿಗೆ ಸೂಕ್ತ ರಕ್ಷಣೆ ಒದಗಿಸಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಎಐಡಿಎಸ್‌ಒ ಪ್ರತಿಭಟನೆ: ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ಸದಸ್ಯರು ನಗರದ ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಬಳಿ ಶನಿವಾರ ಪ್ರತಿಭಟನೆ ನಡೆಸಿದರು.

‘ಅತ್ಯಾಚಾರ ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು. ವಿದ್ಯಾರ್ಥಿನಿಯರಿಗೆ ಸೂಕ್ತ ಭದ್ರತೆ ಒದಗಿಸಬೇಕು. ಅಗತ್ಯವಿರುವ ಪ್ರದೇಶಗಳಲ್ಲಿ ಪೊಲೀಸ್ ವಾಹನಗಳ ಗಸ್ತು ಹೆಚ್ಚಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ತ್ವರಿತ ವಿಚಾರಣೆಗೆ ಆಗ್ರಹ: ಆನಂದರಾವ್ ವೃತ್ತದ ಕಾಂಗ್ರೆಸ್ ಕಚೇರಿ ಎದುರು ಪ್ರತಿಭಟನೆ ನಡೆಸಿದ ಪಕ್ಷದ ಕಾರ್ಯಕರ್ತರು, ‘ಅತ್ಯಾಚಾರ ಪ್ರಕರಣದಲ್ಲಿ ಬಂಧಿಸಿರುವ ಆರೋಪಿಗಳ ವಿರುದ್ಧ ಬೇಗನೇ ದೋಷಾರೋಪ ಪಟ್ಟಿ ಸಲ್ಲಿಸಬೇಕು. ತ್ವರಿತವಾಗಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು’ ಎಂದು ಒತ್ತಾಯಿಸಿದರು.

‘ಪ್ರಕರಣದ ಬಗ್ಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಬೇಜವಾಬ್ದಾರಿ ಹೇಳಿಕೆ ನೀಡಿರುವುದು ಖಂಡನೀಯ’ ಎಂದೂ ಕಾರ್ಯಕರ್ತರು ಹೇಳಿದರು.

ಪ್ರಜಾವಾಣಿ DH EXAM ಪರಿಚಯಿಸುತ್ತಿದ್ದೇವೆ MASTERMIND

ಪ್ರಿಯ ಸ್ಪರ್ಧಾರ್ಥಿಗಳೇ,

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದೀರಾ? ರ‍್ಯಾಂಕ್, ಅತ್ಯುತ್ತಮ ಅಂಕ ಗಳಿಸಿ ಸರ್ಕಾರಿ ಉದ್ಯೋಗ ಗಿಟ್ಟಿಸುವ ಕನಸು ಕಂಡಿದ್ದೀರಾ? ಹಾಗಾದರೆ ನಿಮ್ಮ ಕನಸನ್ನು ನನಸಾಗಿಸಲು ನಿಮ್ಮ ಹೆಮ್ಮೆಯ ‘ಪ್ರಜಾವಾಣಿ –ಡೆಕ್ಕನ್ ಹೆರಾಲ್ಡ್’ ಇನ್ನೊಂದು ಮಹತ್ವದ ಹೆಜ್ಜೆ ಇಟ್ಟಿವೆ. ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್, ರೈಲ್ವೆ, ಸಬ್ ಇನ್‌ಸ್ಪೆಕ್ಟರ್, ಪೊಲೀಸ್ ಕಾನ್‌ಸ್ಟೆಬಲ್, ಎಫ್‌ಡಿಎ... ಹೀಗೆ ಎಲ್ಲ ಬಗೆಯ ಸ್ಪರ್ಧಾತ್ಮಕ ಪರೀಕ್ಷೆಗಳ ಓದಿಗೆ ನೆರವು ನೀಡಲು ‘ಎಕ್ಸಾಂ ಮಾಸ್ಟರ್‌ಮೈಂಡ್’ ಇ–ಪೇಪರ್ ಹೊರತಂದಿವೆ.

ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಯಲ್ಲಿರುವ ಮತ್ತು ವಾರದ ಐದು ದಿನ ಲಭ್ಯವಿರುವ ‘ಎಕ್ಸಾಂ ಮಾಸ್ಟರ್‌ಮೈಂಡ್’ ಈ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಸೂಕ್ತ ಅಧ್ಯಯನ ಸಾಮಗ್ರಿಯನ್ನು ಒಳಗೊಂಡಿದೆ. ಜನರಲ್ ಸ್ಟಡೀಸ್, ಸ್ಟ್ಯಾಟಿಕ್, ಕರೆಂಟ್ ಅಫೇರ್ಸ್, ರೀಸನಿಂಗ್ ಎಬಿಲಿಟಿ, ಇಂಗ್ಲಿಷ್ ಲ್ಯಾಂಗ್ವೇಜ್ ಅಂಡ್ ವರ್ಬಲ್ ಎಬಿಲಿಟಿ, ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್, ಪ್ರಬಂಧಗಳು, ಉಪಯುಕ್ತ ಸಲಹೆಗಳು ಮುಂತಾದವುಗಳ ಜೊತೆಗೆ ಮಾದರಿ ಪ್ರಶ್ನೋತ್ತರಗಳನ್ನು ಹಾಗೂ ಪೂರಕವಾದ ಆಡಿಯೊ ಮತ್ತು ವಿಡಿಯೊಗಳನ್ನು ನೀಡಲಿದೆ.

ಚಂದಾದಾರರಾಗಲು ಸಂಪರ್ಕಿಸಿ
ಎಕ್ಸಿಕ್ಯೂಟಿವ್ ಹೆಸರು: ಅರುಣ್ ಸ್ಟ್ಯಾನ್ಲಿ
ಮೊಬೈಲ್: 98454 42703
bit.ly/emmstudent

ಪೊಲೀಸರಿಗೆ ₹1 ಲಕ್ಷ ಬಹುಮಾನ ಘೋಷಿಸಿದ ಜಗ್ಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನಲ್ಲಿ ವಿದ್ಯಾರ್ಥಿನಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ತಕ್ಷಣದಲ್ಲೇ ಕಾರ್ಯಾಚರಣೆ ನಡೆಸಿ ಐವರು ಆರೋಪಿಗಳನ್ನು ಬಂಧಿಸಿದ ಪೊಲೀಸರಿಗೆ, ನಟ ಜಗ್ಗೇಶ್ ₹1 ಲಕ್ಷ ಬಹುಮಾನ ಘೋಷಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಜಗ್ಗೇಶ್, ‘ಅತ್ಯಾಚಾರ ಮಾಡಿದ ಕಾಮಪಿಪಾಸುಗಳನ್ನು ಬಂಧಿಸಿದ ನನ್ನ ಕರುನಾಡಿನ ಹೆಮ್ಮೆಯ ಆರಕ್ಷಕರಿಗೆ ನನ್ನ ವೈಯಕ್ತಿಕ ಅಭಿನಂದನೆಗಳು. ರಾಜ್ಯದ ಪೊಲೀಸರ ಬಗ್ಗೆ ನನಗೆ ಹೆಮ್ಮೆ ಇದೆ. ಪ್ರಕರಣದ ಆರೋಪಗಳನ್ನು ಪತ್ತೆ ಹಚ್ಚಿದ ನನ್ನ ನಲ್ಮೆಯ ಪೋಲಿಸರಿಗೆ 1 ಲಕ್ಷ ಬಹುಮಾನ. ನಿಮ್ಮ ಸಾರ್ಥಕ ಸೇವೆ ಹೀಗೆ ಮುಂದುವರಿಯಲಿ. ರಾಷ್ಟ್ರಕ್ಕೆ ಮಾದರಿ ನಮ್ಮ ಪೋಲಿಸ್’ ಎಂದಿದ್ದಾರೆ.

ಅತ್ಯಾಚಾರ ಘಟನೆ ಖಂಡಿಸಿದ್ದ ಜಗ್ಗೇಶ್, ‘ಎಂಥ ಕ್ರೂರಿಗಳು...ತಾಯಿ ಹೆಣ್ಣಲ್ಲವೆ? ಅಕ್ಕತಂಗಿ ಹೆಣ್ಣಲ್ಲವೆ? ಮಡದಿ ಹೆಣ್ಣಲ್ಲವೆ? ಹೆಣ್ಣು ಗೌರವಿಸದವರು ರಕ್ಕಸರು! ಈ ಕೃತ್ಯ ಎಸಗಿದ ಕ್ರೂರಿಗಳುಗಲ್ಲು ಶಿಕ್ಷೆಗೆ ಅರ್ಹರು. ಈ ಕ್ರೂರ ಕೃತ್ಯಕ್ಕೆ ಖಂಡನೆ..’ ಎಂದು ಆ.26ರಂದು ಟ್ವೀಟ್ ಮಾಡಿದ್ದರು.

‘ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಗಸ್ತು ಹೆಚ್ಚಳ’

ಬೆಂಗಳೂರು: ‘ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಗಸ್ತು ಹೆಚ್ಚಿಸಲಾಗುವುದು’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಬೆಟ್ಟದ ತಪ್ಪಲಿನಲ್ಲಿ ಸಂಜೆ 7 ಗಂಟೆಯ ಬಳಿಕ ಹೆಚ್ಚಿನ ಭದ್ರತೆ ಒದಗಿಸಲಾಗುವುದು. ಜನರಿಗೆ ತೊಂದರೆ ಆಗದಂತೆ ವ್ಯವಸ್ಥೆ ಮಾಡಲಾಗುವುದು’ ಎಂದರು.

‘ಮೈಸೂರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಅದರಲ್ಲೂ ತಮಿಳುನಾಡು, ಕೇರಳ ರಾಜ್ಯದಿಂದ ಬರುವವರ ಸಂಖ್ಯೆ ಜಾಸ್ತಿ ಇದೆ. ಗಡಿಭಾಗದಿಂದ ಬರುವವರು, ಹೋಗುವವರನ್ನು ತಡೆಯಲು ಸಾಧ್ಯವಿಲ್ಲ’ ಎಂದರು.

‘ಚಾಮುಂಡಿಬೆಟ್ಟದ ತಪ್ಪಲಿನ ಲಲಿತಾದ್ರಿಪುರ ಗುಡ್ಡದಲ್ಲಿ ನಡೆದ ಅತ್ಯಾಚಾರ ಪ್ರಕರಣ ಅಮಾನವೀಯ ಕೃತ್ಯ. ಈ ಕೃತ್ಯದ ಬಳಿಕ ಸಾಕಷ್ಟು ಆತಂಕ ವ್ಯಕ್ತವಾಗಿತ್ತು. ಲಭ್ಯ ತಾಂತ್ರಿಕ ಸಾಕ್ಷ್ಯಗಳ ಆಧಾರದಲ್ಲಿ ಆರೋಪಿಗಳನ್ನು ಬಂಧಿಸುವ ಮೂಲಕ, ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂಬ ಸಂದೇಶವನ್ನು ಪೊಲೀಸರು ಕೊಟ್ಟಿದ್ದಾರೆ’ ಎಂದರು.

‘ಸಂತ್ರಸ್ತೆ ಇನ್ನೂ ಆಘಾತದಲ್ಲಿ ಇದ್ದಾರೆ. ಹೀಗಾಗಿ, ಆಕೆಯಿಂದ ಹೇಳಿಕೆ ಪಡೆಯಲು ಸಾಧ್ಯವಾಗಿಲ್ಲ. ಸಂತ್ರಸ್ತೆಯ ಹೇಳಿಕೆ ಪಡೆಯುವ ಸಂಬಂಧ ಆಕೆಯ ಕುಟುಂಬದ ಸದಸ್ಯರನ್ನು ಮನವೊಲಿಸಲಾಗುತ್ತಿದೆ’ ಎಂದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.65 ಕೋಟಿ ▲	3.26 ಕೋಟಿ
ಸಕ್ರಿಯ ಪ್ರಕರಣ	1.85 ಕೋಟಿ ▼	3.52 ಲಕ್ಷ ▼
ಗುಣಮುಖ	19.35 ಕೋಟಿ ▲	3.18 ಕೋಟಿ
ಸಾವು	45.04 ಲಕ್ಷ ▲	4.37 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	7.11 ಲಕ್ಷ ▼	13,769 ▼
ಗುಣಮುಖ	5.30 ಲಕ್ಷ ▼	14,313 ▼
ಸಾವು	9,969 ▼	304 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 1.90 ಲಕ್ಷ ಅಮೆರಿಕ ▲ | 37,929 ಬ್ರಿಟನ್ ▼ | 36,279 ಇರಾನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 81.00 ಅಮೆರಿಕ ▲ | 12.35 ಬ್ರಿಟನ್ ▼ | 6.79 ಇರಾನ್

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): 1.37 ಲಕ್ಷ ಮಹಾರಾಷ್ಟ್ರ ▲ | 34,856 ತಮಿಳುನಾಡು ▲ | 25,080 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 64.52 ಮಹಾರಾಷ್ಟ್ರ ▲ | 39.46 ಕೇರಳ | 26.10 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ವಿಶ್ವ ಹಿಂದೂ ಪರಿಷತ್ ಯೋಜನೆ

ಭಗವದ್ಗೀತೆ ಕಲಿಕೆ: ಎಲ್ಲ ಧರ್ಮೀಯರಿಗೂ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿನಕ್ಕೆ 5 ಶ್ಲೋಕಗಳಂತೆ 140 ದಿನಗಳಲ್ಲಿ ಭಗವದ್ಗೀತೆಯ ಎಲ್ಲ 700 ಶ್ಲೋಕಗಳನ್ನು ಕಲಿಸುವ ಯೋಜನೆಯನ್ನು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಹಮ್ಮಿಕೊಂಡಿದೆ. ‘ಹಿಂದು ಧರ್ಮದ ಜೊತೆಗೆ ಅನ್ಯ ಧರ್ಮೀಯರಿಗೂ ಕಲಿಯುವ ಅವಕಾಶ ಇರಲಿದೆ’ ಎಂದು ಪರಿಷತ್ ತಿಳಿಸಿದೆ.

ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ವಿಎಚ್‌ಪಿಯ ಕೇಂದ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ ಮಾತನಾಡಿ, ‘ಶ್ರೀಕೃಷ್ಣ ಜನ್ಮಾಷ್ಟಮಿ ಹಾಗೂ ವಿಎಚ್‌ಪಿಯ ಸಂಸ್ಥಾಪನಾ ದಿನವಾದ ಸೋಮವಾರ (ಆ.30) ಮಧ್ಯಾಹ್ನ 3 ಗಂಟೆಗೆ ನೆಲಮಂಗಲದಲ್ಲಿರುವ ವಿಶ್ವ ಶಾಂತಿ ಆಶ್ರಮದ ಭಗವದ್ಗೀತಾ ಮಂದಿರದಲ್ಲಿ ಕಲಿಕಾ ಯೋಜನೆಗೆ ಚಾಲನೆ ಸಿಗಲಿದೆ. ಕಲಿಕಾ ತರಗತಿಗಳನ್ನು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಉದ್ಘಾಟಿಸಲಿದ್ದಾರೆ’ ಎಂದು ತಿಳಿಸಿದರು.

‘ಪ್ರಾಚೀನ ಗುರುಕುಲ ಪದ್ಧತಿಯ ಪಾಠದ ರೂಪದಲ್ಲಿ ಶ್ಲೋಕಗಳನ್ನು ವಿಡಿಯೊ ಚಿತ್ರೀಕರಣ ಮಾಡಿ, ಪರಿಷತ್ತಿನ ವೆಬ್‌ಸೈಟ್‌ನಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರ ಮಾಡಲಾಗುತ್ತದೆ. ಈ ಕಲಿಕೆಯಲ್ಲಿ ಎಲ್ಲರೂ ಪಾಲ್ಗೊಳ್ಳಬಹುದು’ ಎಂದರು.

ವಿಎಚ್‌ಪಿ ಪ್ರಾಂತ ಕಾರ್ಯದರ್ಶಿ ಜಗನ್ನಾಥ ಶಾಸ್ತ್ರಿ, ‘ಭಗವದ್ಗೀತೆಯು ವೇದಕ್ಕೆ ಸಮಾನ. ವೇದಗಳನ್ನು ಉಚ್ಚರಿಸುವಾಗ ಬಳಸಲಾಗುವ ಶಿಕ್ಷಾ ನಿಯಮಗಳನ್ನು ಬಳಸಿ ಕಲಿಸಲಾಗುತ್ತದೆ. ಬಹುತೇಕ ಶ್ಲೋಕಗಳು ಅನುಷ್ಟುಪ್ ಛಂದಸ್ಸಿನಲ್ಲಿವೆ. ಪ್ರತಿ ಶ್ಲೋಕದಲ್ಲಿ 32 ಅಕ್ಷರಗಳಿವೆ. ಸಂಸ್ಕೃತ ಭಾಷೆಯಲ್ಲಿರುವ ಶ್ಲೋಕಗಳನ್ನು ಸುಲಭವಾಗಿ ಉಚ್ಚರಿಸಲು ಸಹಾಯವಾಗುವಂತೆ ಆರಂಭದಲ್ಲಿ ಪ್ರತಿ ಶ್ಲೋಕವನ್ನು ನಾಲ್ಕು ಪಾದವಾಗಿ ವಿಂಗಡಿಸಿ ಹೇಳಿಕೊಡಲಾಗುತ್ತದೆ’ ಎಂದು ವಿವರಿಸಿದರು.

‘ಉಚ್ಚಾರಣೆಗೆ ಹೆಚ್ಚು ಒತ್ತು ಕೊಡಲಾಗಿದ್ದು, ಪ್ರತಿ ಶ್ಲೋಕವನ್ನು ಮೂರು ಸಲ ಹೇಳಿಕೊಡಲಾಗುವುದು. ಭಗವದ್ಗೀತೆಯನ್ನು ವಿಶ್ವದಾದ್ಯಂತ ಪ್ರಚಾರ ಮಾಡುವ ಉದ್ದೇಶದಿಂದ ಎಲ್ಲ ಭಾಷೆಗಳಲ್ಲಿಯೂ ಆನ್‌ಲೈನ್ ತರಗತಿ ನಡೆಸಲಾಗುತ್ತದೆ’ ಎಂದರು.

‘ಗಣೇಶೋತ್ಸವಕ್ಕೆ ಅವಕಾಶ ನೀಡಿ’

‘ಸರ್ಕಾರವು ಸಾರ್ವಜನಿಕ ಗಣೇಶೋತ್ಸವ ಆಚರಿಸಲು ಅವಕಾಶ ನೀಡಬೇಕು. ಕೋವಿಡ್ ನಿರ್ಬಂಧಗಳೊಂದಿಗೆ ಕಳೆದ ಬಾರಿ ಅವಕಾಶ ನೀಡಲಾಗಿತ್ತು. ಹೀಗಾಗಿ, ಈ ಬಾರಿಯೂ 40ರಿಂದ 50 ಜನ ಸೇರಿ ಹಬ್ಬ ಆಚರಿಸಲು ಅನುಮತಿ ನೀಡಬೇಕು’ ಎಂದು ವಿಎಚ್‌ಪಿ ಪ್ರಾಂತ ಕಾರ್ಯದರ್ಶಿ ಜಗನ್ನಾಥ ಶಾಸ್ತ್ರಿ ಒತ್ತಾಯಿಸಿದರು.

‘ಮಸೀದಿ, ಚರ್ಚ್‌ಗಳಲ್ಲಿ ಸಾಮೂಹಿಕ ಪ್ರಾರ್ಥನೆಗೆ ಅವಕಾಶ ನೀಡಲಾಗಿದೆ. ಅದರಂತೆ ಹಿಂದೂಗಳ ಹಬ್ಬಕ್ಕೂ ಅವಕಾಶ ನೀಡಬೇಕು. ಇಲ್ಲವಾದಲ್ಲಿ ಸರ್ಕಾರದ ವಿರುದ್ಧ ಹೋರಾಟ ಮಾಡಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,36,925 ▲ ಒಟ್ಟು ಸೋಂಕಿತರು (12,36,615 ನಿನ್ನೆಯ ವಿವರ)

7,322 ▼ ಸಕ್ರಿಯ ಪ್ರಕರಣ	12,13,625 ▲ ಗುಣಮುಖ ಆದವರು	15,977 ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	310 ▼
ಗುಣಮುಖ	329 ▼
ಸಾವು	00 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

PUBLIC NOTICE

A. Mohandas Rai purchased the lands in Sy. Nos. 89/1 and 89/2A of Rachenahalli Village, K.R. Puram Hobli, Bangalore East Taluk (**Schedule Properties** for short) under two registered Sale Deeds both dated 30.05.1992. He later got them converted for residential purposes vide order dated 09.02.2015 and presently coming within BBMP limits and bearing Khatha Nos. 2693/89/1 and 2692/89/2A. After his demise on 16.07.2018 the Schedule Properties were partitioned among the legal heirs vide registered Partition Deed dated 13.03.2019 whereunder they fell to the share of Rajesh Mohandas Rai (**Land Owner**). The land owner has represented to be the absolute owner in possession and enjoyment of the Schedule Properties.

They are represented to be free from encumbrances, acquisitions, claims, etc. The Land Owner has negotiated to offer the Schedule Properties to our Client subject to clear marketable title and vacant possession.

Any person/s who may have any right or interest in the Schedule Properties or otherwise objecting to the transaction may do so in writing to the undersigned within **10 days** of this publication along with documentary proof failing which our Client will proceed with the proposed offer whereafter no further claims will be entertained and / or the same will be deemed to have been waived or abandoned.

SCHEDULE PROPERTIES

Residentially Converted Lands vide Conversion Orders No. ALN(KRPH)SR/41 & 40/2014-15 dated 09.02.2015, situated at Rachenahalli Village, K.R. Puram Hobli, Bangalore East Taluk, Bangalore, now falling within BBMP limits and bearing Khatha Nos. 2693/89/1 and 2692/89/2A.

Sy. No.	Extent		Boundaries			
	Acre	Gunta	East by	West by	North by	South by
89/1	1	20	Land in Sy. No. 89/4	Remaining land in Sy. No. 89/1	Village Boundary of Srirampura	Land in Sy. No. 89/2A
89/2A	1	34	Land in Sy. No. 89/4	Remaining land in Sy. No. 89/2A	Land in Sy. No. 89/1	Land in Sy. Nos. 89/5 & 89/2B
Total	3	14				

Vishwanath & Manasa, **Advocates,**
 # 11/1, I Cross, CSI Compound,
Bangalore – 560 027
Ph. Nos. 41246256/22291266/22121899
E-mail: vishwanathandmanasa@gmail.com

ಮಗು ಅಪಹರಿಸಿ, ಮಾರಾಟ– ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿ ಮಗುವನ್ನು ಅಪಹರಿಸಿ ಹೊಸೂರಿನಲ್ಲಿ ಮಾರಾಟ ಮಾಡಿದ್ದ ಆರೋಪದಡಿ ಕಾರ್ತಿಕ್ (24) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಹೊಸೂರು ನಿವಾಸಿ ಕಾರ್ತಿಕ್, ತಮ್ಮೂರಿನಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದ. 2020ರ ನವೆಂಬರ್ 11ರಂದು ಮೂರು ವರ್ಷದ ಮಗುವನ್ನು ಅಪಹರಿಸಿದ್ದ. ಇತ್ತೀಚೆಗೆ ಆರೋಪಿ ನಮ್ಮ ಕೈಗೆ ಸಿಕ್ಕಿಬಿದ್ದ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಮಗುವಿನ ತಂದೆ–ತಾಯಿ, ಶಾಮಣ್ಣ ಗಾರ್ಡನ್‌ನಲ್ಲಿ ವಾಸವಿದ್ದರು. ಅವರ ಪಕ್ಕದ ಮನೆಯವರ ಜೊತೆ ಒಡನಾಟ ಹೊಂದಿದ್ದ ಆರೋಪಿ ಕಾರ್ತಿಕ್, ಆಗಾಗ ಮನೆಗೂ ಬಂದು ಹೋಗುತ್ತಿದ್ದ’

‘ಕಳೆದ ವರ್ಷ ಲಾಕ್‌ಡೌನ್ ವೇಳೆ ತರಕಾರಿ ಮಾರಲೆಂದು ಆರೋಪಿ ಹೊಸೂರಿನಲ್ಲಿ ಸುತ್ತಾಡಿದ್ದ. ಅಲ್ಲಿಯೇ ಮಹಿಳೆಯೊಬ್ಬರ ಪರಿಚಯವಾಗಿತ್ತು. ‘ನನ್ನ ಸಂಬಂಧಿಕರಿಗೆ ಮಗು ಬೇಕಾಗಿದೆ. ಕೇಳಿದಷ್ಟು ಹಣ ಕೊಡುತ್ತಾರೆ’ ಎಂದು ಮಹಿಳೆ ಹೇಳಿದ್ದಳು. ಆಗ ಆತ ಮಗುವಿನ ಅಪಹರಣಕ್ಕೆ ಸಂಚು ರೂಪಿಸಿದ್ದ’ ಎಂದೂ ಅಧಿಕಾರಿ ತಿಳಿಸಿದರು.

‘ಶಾಮಣ್ಣ ಗಾರ್ಡನ್‌ಗೆ ಬಂದಿದ್ದ ಆರೋಪಿ, ಮನೆ ಬಾಗಿಲಿನ ಬಳಿ ಆಡುತ್ತಿದ್ದ ಮಗುವನ್ನು ಅಪಹರಿಸಿಕೊಂಡು ಹೊಸೂರಿನ ಮಹಿಳೆ ಬಳಿ ಹೋಗಿದ್ದ. ‘ನನಗೆ ನಾಲ್ಕು ಮಕ್ಕಳು. ಎಲ್ಲರನ್ನೂ ಸಾಕಲು ಆಗುತ್ತಿಲ್ಲ. ಹಣ ಕೊಟ್ಟರೆ, ಒಂದು ಮಗುವನ್ನು ದತ್ತು ಕೊಡುತ್ತೇನೆ’ ಎಂದಿದ್ದ. ಅದನ್ನು ನಂಬಿದ್ದ ಮಹಿಳೆ, ಮಗುವನ್ನು ಪಡೆದು ₹ 60 ಸಾವಿರ ಕೊಟ್ಟಿದ್ದಳು. ದತ್ತು ದಾಖಲೆಗಳನ್ನು ಸಿದ್ಧಪಡಿಸುವಂತೆ ಹೇಳಿದ್ದಳು.’

‘ಮಗು ಕೊಟ್ಟ ಬಳಿಕ ಆರೋಪಿ, ಮಹಿಳೆ ಬಳಿಯೇ ಹೋಗಿರಲಿಲ್ಲ. ಕೆಲ ಸುಳಿವು ಆಧರಿಸಿ ಇತ್ತೀಚೆಗೆ ಮಗುವನ್ನು ಪತ್ತೆ ಮಾಡಲಾಯಿತು. ಬಾಲ ನ್ಯಾಯ ಮಂಡಳಿ ಎದುರು ಮಗುವನ್ನು ಹಾಜರುಪಡಿಸಲಾಯಿತು. ವೈದ್ಯಕೀಯ ಪರೀಕ್ಷೆ ನಡೆಸಿ ಮಗುವನ್ನು ತಂದೆ–ತಾಯಿ ಸುಪರ್ದಿಗೆ ನೀಡಲಾಗಿದೆ’ ಎಂದೂ ಅಧಿಕಾರಿ ಹೇಳಿದರು.

ಕಸದ ಭಕ್ಷೀಸು’ ಅನ್ಯರ ಪಾಲು: ಕೊಲೆಗೆ ಸಜ್ಜಾದವರ ಸೆರೆ

ಬೆಂಗಳೂರು: ತಮ್ಮ ಕಸ ನಿರ್ವಹಣೆ ಸೇವೆಗೆ ‘ಖುಷಿ’ಗೊಂಡು ಪ್ರತಿಷ್ಠಿತ ಬಡಾವಣೆಗಳ ನಿವಾಸಿಗಳು ನೀಡುತ್ತಿದ್ದ ಹಣ (ಟಿಪ್ಸ್) ಅನ್ಯರ ಪಾಲಾಗುವುದನ್ನು ಸಹಿಸದೇ, ಪ್ರತಿಸ್ಪರ್ಧಿಗಳ ಕೊಲೆಗೆ ಸಜ್ಜಾಗಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಬಂಧಿತ ಆರೋಪಿಗಳು, ಬಿಬಿಎಂಪಿ ವಾಹನಗಳಲ್ಲಿ ಕಸ ಸಂಗ್ರಹಿಸುವ ಕೆಲಸ ಮಾಡುತ್ತಿದ್ದರು. ಹಲವು ನಿವಾಸಿಗಳು, ಕಸ ಸಂಗ್ರಹಕ್ಕಾಗಿ ಆರೋಪಿಗಳಿಗೆ ಖುಷಿಯಿಂದ ಹಣ ನೀಡುತ್ತಿದ್ದರು. ಅವರ ಪ್ರದೇಶಗಳಿಗೆ ಬೇರೆಯವರು ಬರಲಾರಂಭಿಸಿದ್ದರು. ತಮಗೆ ಬರುತ್ತಿದ್ದ ಹಣಕ್ಕೆ ಕತ್ತರಿ ಬಿದ್ದಿದ್ದರಿಂದ ಸಿಟ್ಟಾದ ಆರೋಪಿಗಳು, ಪ್ರತಿಸ್ಪರ್ಧಿಗಳ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಲು ಸಜ್ಜಾಗಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಆರೋಪಿಗಳ ವಾಹನ ತಡೆದಿದ್ದ ಸಿಬ್ಬಂದಿ, ತಪಾಸಣೆ ನಡೆಸಿದ್ದರು. ವಾಹನದಲ್ಲಿ ಮಾರಕಾಸ್ತ್ರ ಇರುವುದನ್ನು ನೋಡಿ ವಶಕ್ಕೆ ಪಡೆದಿದ್ದರು. ವಿಚಾರಣೆ ನಡೆಸಿದಾಗ, ಕೊಲೆ ಸಂಚಿನ ಬಗ್ಗೆ ಆರೋಪಿಗಳು ಬಾಯ್ಬಿಟ್ಟರು. ತನಿಖೆ ದೃಷ್ಟಿಯಿಂದ ಆರೋಪಿಗಳ ಹೆಸರು ಗೋಪ್ಯವಾಗಿಡಲಾಗಿದೆ’ ಎಂದರು.

ವಿದ್ಯುತ್ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 30ರಂದು ಬೆಳಿಗ್ಗೆ 10ರಿಂದ ಸಂಜೆ 5ರ ತನಕ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಪ್ರದೇಶಗಳು: ಮಂಜುನಾಥ ನಗರ, ತಿಮ್ಮಯ್ಯ ರಸ್ತೆ, ಭೋವಿ ಕಾಲೊನಿ, ಮಹಾಗಣಪತಿ ನಗರ, ಪುಷ್ಪಾಂಜಲಿ ಅಪಾರ್ಟ್‌ಮೆಂಟ್ಸ್, ಶಿವನಹಳ್ಳಿ ಉದ್ಯಾನ, ಆದರ್ಶ ನಗರ, ಆದರ್ಶ ಬಡಾವಣೆ, ಯುನಿಕ್ಸ್ ಕಾಲೊನಿ, ಇಂದಿರಾ ನಗರ, ಮಂಜುನಾಥ ನಗರ, ಲಕ್ಷ್ಮಿ ನಗರ, ಎಚ್.ವಿ.ಕೆ. ಬಡಾವಣೆ, ಕಿರ್ಲೋಸ್ಕರ್ ಕಾಲೊನಿ, ಕರ್ನಾಟಕ ಬಡಾವಣೆ, ಕಮಲಾ ನಗರ, ವಿ.ಜೆ. ಎಸ್.ಎಸ್. ಬಡಾವಣೆ, ವಾರ್ಡ್ ಕಚೇರಿ ಸುತ್ತಮುತ್ತ, ಕರ್ನಾಟಕ ಬಡಾವಣೆ, ಗೃಹಲಕ್ಷ್ಮಿ ಬಡಾವಣೆ, ನಾಗಪುರ, ಮಹಾಲಕ್ಷ್ಮಿ ಪುರ, ಮೋದಿ ಆಸ್ಪತ್ರೆ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಶಂಕರಮಠ, ಪೈಪ್‌ಲೈನ್ ರಸ್ತೆ, ಜೆ.ಸಿ. ನಗರ, ಕುರುಬರಹಳ್ಳಿ, ರಾಜಾಜಿನಗರ, ಇಎಸ್‌ಐ ಆಸ್ಪತ್ರೆ, ಗೆಳೆಯರ ಬಳಗ, ಮೈಕೊ ಬಡಾವಣೆ, ಜಿ.ಡಿ. ನಾಯ್ಡು ಹಳ್ಳಿ, ಪಶ್ಚಿಮ ಕಾರ್ಡ್ ರಸ್ತೆ, ಮಹಾಲಕ್ಷ್ಮಿ ಬಡಾವಣೆ, ಬಿಎನ್‌ಇಎಸ್ ಕಾಲೇಜು, ಬಿಇಎಲ್ ಅಪಾರ್ಟ್‌ಮೆಂಟ್ಸ್, ಸ್ಯಾಂಡಲ್ ಸೋಪ್ ಕಾರ್ಖಾನೆ, ಯಶವಂತಪುರ ಕೈಗಾರಿಕಾ ಪ್ರದೇಶ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

‘20 ದಿನದಲ್ಲಿ ಸಿಇಟಿ ಫಲಿತಾಂಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶವನ್ನು 20 ದಿನಗಳಲ್ಲಿ ಪ್ರಕಟಿಸಿ, ಅಕ್ಟೋಬರ್‌ನಲ್ಲಿ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಪರೀಕ್ಷೆಗೆ ಒಟ್ಟು 2,01,834 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಶನಿವಾರ (ಆ. 28) ಬೆಳಿಗ್ಗೆ ನಡೆದ ಜೀವ ವಿಜ್ಞಾನ ಪರೀಕ್ಷೆಗೆ 1,62,439 (ಶೇ 80.48) ಅಭ್ಯರ್ಥಿಗಳು ಮತ್ತು ಮಧ್ಯಾಹ್ನ ನಡೆದ ಗಣಿತ ವಿಷಯಕ್ಕೆ 1,89,522 (ಶೇ 92.90) ಅಭ್ಯರ್ಥಿಗಳು ಹಾಜರಾದರು.

ಜೀವವಿಜ್ಞಾನ ವಿಷಯಕ್ಕೆ 9 ಮತ್ತು ಗಣಿತ ವಿಷಯಕ್ಕೆ 12 ಕೋವಿಡ್ ಪಾಸಿಟಿವ್ ಅಭ್ಯರ್ಥಿಗಳು ಹಾಜರಾಗಿದ್ದರು. ಭೌತವಿಜ್ಞಾನ ಮತ್ತು ರಸಾಯನವಿಜ್ಞಾನ ವಿಷಯಗಳ ಪರೀಕ್ಷೆ ಭಾನುವಾರ ನಡೆಯಲಿದೆ.

‘ಬೆಂಗಳೂರಿನ 86 ಕೇಂದ್ರಗಳು ಸೇರಿ ರಾಜ್ಯದ 530 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಕೋವಿಡ್ ನಿಯಮಗಳ ಅನ್ವಯ ಪರೀಕ್ಷೆ ನಡೆಸಲಾಗಿದೆ. ಕೇರಳದ ಗಡಿ ಜಿಲ್ಲೆಗಳಲ್ಲಿ ಲಾಕ್‌ಡೌನ್ ಮತ್ತು ವಾರಾಂತ್ಯ ಕರ್ಫ್ಯೂ ಇದ್ದರೂ ಆ ಜಿಲ್ಲೆಗಳಲ್ಲೂ ಯಾವುದೇ ತೊಂದರೆ ಆಗಿಲ್ಲ’ ಎಂದು ಸಚಿವರು ವಿವರಿಸಿದರು.

ಅಷ್ಟಮಿಗೆ ಡಾರ್ಕ್ ಒನ್ ಎಲೈಟ್ ವೇಷ

ಪ್ರಜಾವಾಣಿ ವಾರ್ತೆ

ಉಡುಪಿ: ಅಷ್ಟಮಿಯ ಸಂದರ್ಭ ವಿಭಿನ್ನ ವೇಷ ಧರಿಸಿ ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಿ ಬಡ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುತ್ತಾ ಬಂದಿರುವ ಸಮಾಜ ಸೇವಕ ರವಿ ಕಟಪಾಡಿ ಈ ವರ್ಷ ಡಾರ್ಕ್ ಒನ್ ಎಲೈಟ್ ವೇಷ ಹಾಕಲು ನಿರ್ಧರಿಸಿದ್ದಾರೆ ಎಂದು ರವಿ ಫ್ರೆಂಡ್ಸ್ ಕಟಪಾಡಿ ಸಂಸ್ಥೆಯ ಮಹೇಶ್ ಶೆಣೈ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 6 ವರ್ಷಗಳಿಂದ ಅಷ್ಟಮಿಗೆ ವೇಷ ಹಾಕುತ್ತಿರುವ ರವಿ ಕಟಪಾಡಿ ಇದುವರೆಗೂ ₹72 ಲಕ್ಷ ದೇಣಿಗೆ ಸಂಗ್ರಹಿಸಿ ಎಲ್ಲ ಹಣವನ್ನು ಬಡ ಮಕ್ಕಳ ವೈದ್ಯಕೀಯ ವೆಚ್ಚಕ್ಕೆ ವಿನಿಯೋಗಿದ್ದಾರೆ. ಈ ವರ್ಷ ಕೂಡ 6 ಮಕ್ಕಳ ವೈದ್ಯಕೀಯ ವೆಚ್ಚ ಭರಿಸಲು ನಿರ್ಧರಿಸಿದ್ದಾರೆ ಎಂದರು.

ಫೇಸ್‌ಬುಕ್ ಲೈವ್‌ನಲ್ಲಿ ವಿಷ ಸೇವಿಸಿದ ರೈತ

ಪ್ರಜಾವಾಣಿ ವಾರ್ತೆ

ಗೋಕಾಕ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಮಕ್ಕಳಗೇರಿ ಗ್ರಾಮದ ರೈತ ಲಕ್ಷ್ಮಣ ಬೀರಪ್ಪ ಈಳಿಗೇರ (34) ಎನ್ನುವವರು ಸಾಲಗಾರರ ಕಾಟ ತಾಳಲಾರದೆ ಫೇಸ್‌ಬುಕ್ ಲೈವ್ ಮಾಡುತ್ತಲೇ ಮನೆಯಲ್ಲಿ ಕೀಟನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಶುಕ್ರವಾರ ನಡೆದಿದೆ. ಶನಿವಾರ ಗೊತ್ತಾಗಿದೆ.

ಅವರನ್ನು ಗೋಕಾಕ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅವರು ಮಾಡಿದ್ದ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ.

‘₹ 1.25 ಲಕ್ಷ ಸಾಲ ಕಟ್ಟಿದ್ದೆ. ₹ 3.5 ಲಕ್ಷ ಸಾಲವನ್ನು ಬಡ್ಡಿ ಸಮೇತ ಮಾರುಪಾವತಿಸಲು ಆಗಿರಲಿಲ್ಲ. ಹೀಗಾಗಿ, ಟ್ರ್ಯಾಕ್ಟರ್ ತೆಗೆದುಕೊಂಡು ಹೋಗಿದ್ದಾರೆ. ಇದಕ್ಕೆ ಅರುಣ ಪವಾರ, ಅಶೋಕ ಅಂಕಲಗಿ ಮತ್ತು ಯಲ್ಲಪ್ಪ ಗಸ್ತಿ ಎನ್ನುವವರು ಕಾರಣ ಎಂದು ಆರೋಪಿಸಿದ್ದಾರೆ. ನನಗೆ ಕಿರುಕುಳ ನೀಡಿದ್ದಾರೆ’ ಎಂದು ದೂರಿದ್ದಾರೆ.

ಇದೇ 31 ರಂದು ನೀರು ಪೂರೈಕೆಯಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನ್ನೇರುಘಟ್ಟ ರಸ್ತೆಯ ಬಳಿ 900 ಮಿ.ಮೀ. ವ್ಯಾಸದ ಕೊಳವೆ ಜೋಡಣೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 31ರಂದು ಬೆಳಿಗ್ಗೆ 6ರಿಂದ ಮಧ್ಯರಾತ್ರಿ 2ರವರೆಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಹೇಳಿದೆ.

ಶಾಂತಲಾ ನಗರ, ಶಾಂತಿ ನಗರ, ವಿನಾಯಕ ನಗರ, ಆನೆಪಾಳ್ಯ, ಎಲ್.ಆರ್. ನಗರ, ಅಂಬೇಡ್ಕರ್ ನಗರ, ನೀಲಸಂದ್ರ, ಆಸ್ಟಿನ್‌ಟೌನ್, ಈಜಿಪುರ, ವಿವೇಕನಗರ, ಅಶೋಕ ನಗರ, ರಿಚ್ಮಂಡ್ ಟೌನ್, ಎಂ.ಜಿ. ರಸ್ತೆ, ಜೆ.ಕೆ.ಪುರ, ಎಂ.ಬಿ.ಗಾರ್ಡನ್, ವಿಕ್ಟೋರಿಯಾ ಬಡಾವಣೆ, ಜೀವನ್ ಬಿಮಾನಗರ, ಎಚ್.ಎ.ಎಲ್3ನೇ ಹಂತ, ದೊಮ್ಮಲೂರು, ಅಮರಜ್ಯೋತಿ ಬಡಾವಣೆ, ಕೋಡಿಹಳ್ಳಿ, ಹನುಮಂತಪ್ಪ ಬಡಾವಣೆ, ಹಲಸೂರು, ಜೋಗುಪಾಳ್ಯ, ಕೇಂಬ್ರಿಜ್ ಬಡಾವಣೆ, ಗೌತಮ ಪುರ, ದೀನಬಂಧು ನಗರ, ರಾಜೇಂದ್ರ ನಗರ.

ನಂಜಪ್ಪ ರೆಡ್ಡಿ ಬಡಾವಣೆ, ಕೆ.ಆರ್. ನಂಜಪ್ಪ ಬಡಾವಣೆ, ಆಡುಗೋಡಿ, ಕೋರಮಂಗಲ, ಕೆ.ಎಚ್.ಬಿ ಬ್ಲಾಕ್, ಕತ್ತಳಿ ಪಾಳ್ಯ, ಕೆ.ಎಚ್.ಬಿ. ಕಾಲೊನಿ, ಜಾನ್ ನಗರ, ಎನ್‌ಜಿವಿ, ಜಯನಗರ, ತಿಲಕ ನಗರ, ಎಸ್.ಆರ್.ನಗರ, ಚಂದ್ರಪ್ಪ ನಗರ, ಈರಮ್ಮ ಬಡಾವಣೆ, ವೆಂಕಟೇಶ್ವರ ಬಡಾವಣೆ, ಭುವನಪ್ಪ ಬಡಾವಣೆ, ಜೋಗಿ ಕಾಲೊನಿ, ಚಿಕ್ಕ ಆಡುಗೋಡಿ, ಬೃಂದಾವನ ನಗರ, ಮಾರುತಿ ನಗರ, ನೇತಾಜಿ ನಗರ, ನಾಗಮ್ಮ ನಗರ, ಕೇಶವನಗರ, ಕೆ.ಪಿ. ಅಗ್ರಹಾರ, ನ್ಯೂ ಬಿನ್ನಿ ಬಡಾವಣೆ, ಶ್ರೀನಗರ, ಚಾಮರಾಜಪೇಟೆ, ಪಾದರಾಯನಪುರ ವಿದ್ಯಾಪೀಠ, ಶ್ರೀನಿವಾಸ ನಗರ, ಬ್ಯಾಂಕ್ ಕಾಲೊನಿ, ಐ.ಟಿ.ಐ ಬಡಾವಣೆ, ಗುರುರಾಜ ಬಡಾವಣೆ, ಕತ್ರಿಗುಪ್ಪೆ, ಬಸವನಗುಡಿ, ಎನ್.ಆರ್. ಕಾಲೊನಿ, ಕುಮಾರ ಸ್ವಾಮಿ ಬಡಾವಣೆ, ವಿಠ್ಠಲ ನಗರ, ಬನಶಂಕರಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ನಗರದಲ್ಲಿ ಇಂದು

ರಾಷ್ಟ್ರೀಯ ಕ್ರೀಡಾ ದಿನ–2021: ಅಧ್ಯಕ್ಷತೆ: ಕೆ.ಸಿ. ನಾರಾಯಣ ಗೌಡ, ಮುಖ್ಯ ಅತಿಥಿ: ಕೆ. ಗೋವಿಂದರಾಜ್, ಉಪಸ್ಥಿತಿ: ಚಂದ್ರಶೇಖರ ಜಹಗೀರ್‌ದಾರ್, ಲಕ್ಷ್ಮೀಶ ವೈ.ಎಸ್., ಆಯೋಜನೆ: ಕ್ರೀಡಾ ಭಾರತಿ, ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 8

ವಿಚಾರ ಸಂಕಿರಣ: ‘ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ–ಸವಾಲು ಮತ್ತು ಸಾಧ್ಯತೆಗಳು, ಉದ್ಘಾಟನೆ: ಆರ್.ಕೆ. ನಲ್ಲೂರು ಪ್ರಸಾದ್, ವಿಚಾರ ಮಂಡನೆ: ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಸಂತೋಷ ಹಾನಗಲ್ಲ, ಆಶಯ ನುಡಿ: ಟಿ. ಸತೀಶ್ ಜವರೇಗೌಡ, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ಚಿತ್ರಕಲಾ ಗ್ಯಾಲರಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಪುಸ್ತಕ ಬಿಡುಗಡೆ: ಶ್ರೀಹರ್ಷ ಸಾಲಿಮಠ ಅವರ ‘ಉದಕ ಉರಿದು’ ಕಥಾ ಸಂಕಲನ, ಹನುಮಂತ ಹಾಲಿಗೇರಿ ಅವರ ‘ಅಲ್ಲೆದೇವ್ರು ಮತ್ತು ಇತರ ನಾಟಕಗಳು’, ಬಿಡುಗಡೆ: ಕೇಶವ ಮಳಗಿ, ಉಪಸ್ಥಿತಿ: ಆನಂದ ಕುಂಚನೂರು, ರಾಮಲಿಂಗಪ್ಪ ಟಿ. ಬೇಗೂರು, ಆಯೋಜನೆ: ಆಲಿಸಿರಿ ಮೀಡಿಯಾ, ಸ್ಥಳ: ಆಲಿಸಿರಿ ಸ್ಟುಡಿಯೊ, ಪುಷ್ಪಗಿರಿನಗರ, ಕೆರಿಕೋಡಿ ಸರ್ಕಲ್, ಹೊಸಕೆರೆಹಳ್ಳಿ, ಬೆಳಿಗ್ಗೆ 10

ಡಾ.ಎಚ್. ಗಿರಿಜಮ್ಮ ಅವರ ನೆನಪು: ಭಾಗವಹಿಸುವವರು: ಆರ್.ಕೆ. ಸರೋಜ, ಸಿ.ಆರ್. ಚಂದ್ರಶೇಖರ್, ಆರ್. ಪೂರ್ಣಿಮಾ, ಕುಂ. ವೀರಭದ್ರಪ್ಪ, ಕೆ.ಎಸ್. ಚೈತ್ರಾ, ರಜನಿ, ರುದ್ರಪ್ಪ ಹನಗವಾಡಿ, ವೀಣಾ ಎನ್. ಸುಳ್ಯ, ಪಿ.ಎಸ್. ಶಂಕರ್, ಎಸ್.ಜಿ. ಸಿದ್ಧರಾಮಯ್ಯ, ನಾಗತಿಹಳ್ಳಿ ಚಂದ್ರಶೇಖರ್, ನಾ. ಸೋಮೇಶ್ವರ, ಎಸ್.ಎಸ್. ಹಿರೇಮಠ, ಸುರೇಶ ಸಗರದ, ಮಂಜುನಾಥ ಕುರ್ಕಿ, ವಸುಂಧರಾ ಭೂಪತಿ, ಆಯೋಜನೆ: ಡಾ.ಎಚ್. ಗಿರಿಜಮ್ಮ ಸ್ನೇಹ ಬಳಗ, (ಆನ್‌ಲೈನ್ ಕಾರ್ಯಕ್ರಮ) ಸಂಜೆ 4

ಡಾ.ಎಚ್.ಗಿರಿಜಮ್ಮ

ಪುಸ್ತಕ ಬಿಡುಗಡೆ: ಪ್ರೊ.ಕೆ.ಈ. ರಾಧಾಕೃಷ್ಣ ಅವರ ‘ಒಂದು + ಮತ್ತು ನೂರು ಕಥೆಗಳು’ ಕಥಾ ಸಂಕಲನ ಬಿಡುಗಡೆ, ಅಧ್ಯಕ್ಷತೆ: ಕೆ.ಆರ್. ರಮೇಶ್ ಕುಮಾರ್, ಉಪಸ್ಥಿತಿ: ಎಂ. ರಘುಪತಿ, ಆಶಾ ರಾಜೀವ್, ಬಿಡುಗಡೆ: ವಿಜಯರಾಘವೇಂದ್ರ, ಆಯೋಜನೆ: ದೇಸಿ ಪುಸ್ತಕ, ಸ್ಥಳ: ಜೈನ್ ವಿಶ್ವವಿದ್ಯಾಲಯ, ಸಂಪಂಗಿರಾಮನಗರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ವಿಜಯ ರಾಘವೇಂದ್ರ

ರಾಮಕೃಷ್ಣ ಹೆಗಡೆ ಅವರ 95ನೇ ಜನ್ಮದಿನ ಹಾಗೂ ‘ರಾಮಕೃಷ್ಣ ಹೆಗಡೆ ಪ್ರಶಸ್ತಿ’ ಪ್ರದಾನ: ಕೆ.ಆರ್. ರಮೇಶ್ ಕುಮಾರ್, ಅಧ್ಯಕ್ಷತೆ: ಬಿ.ಎಲ್. ಶಂಕರ್, ಉಪಸ್ಥಿತಿ: ಯು.ಬಿ. ವೆಂಕಟೇಶ್, ಎಂ.ಪಿ. ನಾಡಗೌಡ, ಪಿ.ಎಸ್. ಪ್ರಕಾಶ್, ಮಹಿಮ ಪಟೇಲ್, ಟಿ. ಪ್ರಭಾಕರ್, ಮಮತಾ ನಿಚ್ಚಾನಿ, ಪ್ರಶಸ್ತಿ ಪುರಸ್ಕೃತರು: ಗೊ.ರು. ಚನ್ನಬಸಪ್ಪ, ಆಯೋಜನೆ: ರಾಷ್ಟ್ರೀಯ ನವನಿರ್ಮಾಣ ವೇದಿಕೆ, ಭಾರತ ಯಾತ್ರ ಕೇಂದ್ರ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11

ಡಾ. ಚಂದ್ರಶೇಖರ ಕಂಬಾರರ ನಾಟಕೋತ್ಸವ: ಉದ್ಘಾಟನೆ: ಅನಂತ ಕುಮಾರ್, ಅತಿಥಿಗಳು: ಚಿಕ್ಕಹೆಜ್ಜಾಜಿ ಮಹದೇವ್, ಟಿಪ್ಪುವರ್ಧನ್, ಅಮೀತ್ ಗೋವಿಂದ್, ತಿಮ್ಮಯ್ಯ, ದೊಡ್ಡಮನೆ ವೆಂಕಟೇಶ್, ವೆಂಕಟೇಶ್, ನಾಟಕ ಪ್ರದರ್ಶನ: ಜೋಕುಮಾರ ಸ್ವಾಮಿ, ಆಯೋಜನೆ: ಮೀನಾಕ್ಷಿ ಕಲಾವೃಂದ, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡ ನಗರ, ಮಧ್ಯಾಹ್ನ 3

ಮೈಸೂರು ರಸ್ತೆ–ಕೆಂಗೇರಿ ವಿಸ್ತರಿತ ಮಾರ್ಗವು ಭಾನುವಾರ ಉದ್ಘಾಟನೆಗೊಳ್ಳಲಿದ್ದು, ಬೆಂಗಳೂರು ವಿಶ್ವವಿದ್ಯಾಲಯ ಮೆಟ್ರೊ ನಿಲ್ದಾಣದ ಬಳಿ ಶನಿವಾರ ಕಂಡ ನೋಟ -ಪ್ರಜಾವಾಣಿ ಚಿತ್ರ/ ರಂಜು ಪಿ

‘ನಮ್ಮ ಮೆಟ್ರೊ’ 2ನೇ ಹಂತದಲ್ಲಿನ ಮೈಸೂರು ರಸ್ತೆ– ಕೆಂಗೇರಿ ಮಾರ್ಗ

ವಿಸ್ತರಿತ ಮಾರ್ಗಕ್ಕೆ ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಎರಡನೇ ಹಂತದಲ್ಲಿನ ಮೈಸೂರು ರಸ್ತೆ– ಕೆಂಗೇರಿ ವಿಸ್ತರಿತ ಮಾರ್ಗದ ಉದ್ಘಾಟನಾ ಕಾರ್ಯಕ್ರಮ ಭಾನುವಾರ ಬೆಳಿಗ್ಗೆ 10.30ಕ್ಕೆ ನಡೆಯಲಿದೆ.

7.5 ಕಿ.ಮೀ. ಉದ್ದದ ಈ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರ್‌ದೀಪ್‌ಸಿಂಗ್ ಪುರಿ ಹಸಿರು ನಿಶಾನೆ ತೋರಲಿದ್ದಾರೆ. ನಂತರ, ಕೆಂಗೇರಿ ಬಸ್ ಟರ್ಮಿನಲ್ ನಿಲ್ದಾಣದಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ.

ನಾಯಂಡಹಳ್ಳಿ ಮೆಟ್ರೊ ನಿಲ್ದಾಣವನ್ನು ಶನಿವಾರ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು

ನೇರಳೆ ಮಾರ್ಗದ ಬಹುನಿರೀಕ್ಷಿತ ವಿಸ್ತರಿತ ಮಾರ್ಗ ಇದಾಗಿದೆ. ಈ ಮಾರ್ಗದಲ್ಲಿ ಏಳು ನಿಲ್ದಾಣಗಳಿವೆ. ಕಾರ್ಯಕ್ರಮ ನಿಮಿತ್ತ ಎಲ್ಲ ನಿಲ್ದಾಣಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ.

ಫೀಡರ್ ಬಸ್: ಪ್ರಯಾಣಿಕರು ಮೆಟ್ರೊ ನಿಲ್ದಾಣ ತಲುಪಲು ಅನುವಾಗುವಂತೆ ಬಿಎಂಟಿಸಿಯು ಫೀಡರ್ ಬಸ್‌ಗಳನ್ನು ಒದಗಿಸಿದೆ.

ರಾಜರಾಜೇಶ್ವರಿ ನಗರ ಪ್ರವೇಶ ದ್ವಾರದಿಂದ ರಾಜರಾಜೇಶ್ವರಿ ನಗರದ ವಿವಿಧ ಪ್ರದೇಶಗಳ ಕಡೆಗೆ 22 ಮಾರ್ಗಗಳಲ್ಲಿ 43 ಬಸ್ಸುಗಳು ದಿನದಲ್ಲಿ 230 ಬಾರಿ ಸಂಚರಿಸಲಿವೆ.

ಬೆಂಗಳೂರು ವಿಶ್ವವಿದ್ಯಾಲಯದ ಕಡೆಗಳಿಂದ ಬರುವ ಪ್ರಯಾಣಿಕರಿಗಾಗಿ 14 ಮಾರ್ಗಗಳಲ್ಲಿ 43 ಬಸ್‌ಗಳು ದಿನದಲ್ಲಿ 264 ಬಾರಿ ಸಂಚರಿಸಲಿವೆ.

ಉತ್ತರಹಳ್ಳಿ ಕಡೆಗೆ 121, ಕೆಂಗೇರಿ ಉಪನಗರದತ್ತ 266 ಕುಂಬಳಗೋಡು ಕಡೆಗೆ 157 ಬಸ್‌ಗಳು ಸಂಚರಿಸಲಿವೆ ಎಂದು ಬಿಎಂಟಿಸಿ ಹೇಳಿದೆ.

ಸಿದ್ದರಾಮಯ್ಯಗೆ ಟ್ವಿಟರ್‌ನಲ್ಲಿ ಬಿಜೆಪಿ ತಿರುಗೇಟು

ಜಾತಿ ಗಣತಿ ವರದಿಗೆ ಆಕ್ಷೇಪಿಸಿದ್ದೇ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನಡೆಸಿದ್ದ ಜಾತಿ ಗಣತಿ ವರದಿಗೆ ಕಾಂಗ್ರೆಸ್ ಪಕ್ಷದ ನಾಯಕರೇ ಆಕ್ಷೇಪ ವ್ಯಕ್ತಪಡಿಸಿದ್ದರು ಎಂದು ಬಿಜೆಪಿ ರಾಜ್ಯ ಘಟಕ ಟೀಕಿಸಿದೆ.

ರಾಷ್ಟ್ರದಾದ್ಯಂತ ಜಾತಿ ಗಣತಿ ನಡೆಸಬೇಕೆಂಬ ಬೇಡಿಕೆ ಕುರಿತು ‘ಪ್ರಜಾವಾಣಿ’ಯ ಶನಿವಾರದ ಸಂಚಿಕೆಯ ‘ಚರ್ಚೆ’ಯಲ್ಲಿ ಪ್ರಕಟವಾಗಿದ್ದ ‘ಜಾತಿ ವಿನಾಶದ ಮೊದಲ ಹೆಜ್ಜೆ ಜಾತಿಗಣತಿ’ ಎಂಬ ತಮ್ಮ ಲೇಖನವನ್ನು ಸಿದ್ದರಾಮಯ್ಯ ಅವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು. ಅಲ್ಲಿಯೇ ಪ್ರತಿಕ್ರಿಯಿಸಿರುವ ಬಿಜೆಪಿ, ‘ಗಣತಿಯ ವರದಿ ಸಲ್ಲಿಕೆಯಾಗುವ ಮುನ್ನವೇ ಅದರ ಆಯ್ದ ಭಾಗಗಳು ಸೋರಿಕೆಯಾದರೆ ಆ ವರದಿಯ ಪಾವಿತ್ರ್ಯದ ಬಗ್ಗೆ ಯಾವ ಭಾವನೆ ಬರಲು ಸಾಧ್ಯ’ ಎಂದು ಪ್ರಶ್ನಿಸಿದೆ.

‘ಜಾತಿ ಗಣತಿ ವರದಿಯ ಆಯ್ದ ಭಾಗಗಳು 2017ರಲ್ಲಿ ಸೋರಿಕೆಯಾಗುವುದರ ಹಿಂದೆ ನಿಮ್ಮ ಪ್ರಗತಿಪರ ಪಟಾಲಂ ಕೈವಾಡ ಇತ್ತಲ್ಲವೆ? ಚುನಾವಣೆ ದೃಷ್ಟಿಯಿಂದ ಜಾತಿ ಸಮೀಕರಣ ಮಾಡುವುದಕ್ಕಾಗಿಯೇ ನೀವು ಈ ಅಸಹ್ಯದ ಕೆಲಸ ಮಾಡಿಸಿದ್ದನ್ನು ಒಪ್ಪಿಕೊಳ್ಳುವಿರಾ’ ಎಂದು ಸವಾಲು ಹಾಕಿದೆ.

‘ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡ 10ರಷ್ಟು ಮೀಸಲಾತಿ ಕಲ್ಪಿಸಲು ಕೇಂದ್ರ ಸರ್ಕಾರ ತರಾತುರಿಯಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದಿದೆ’ ಎಂಬ ಸಿದ್ದರಾಮಯ್ಯ ಆರೋಪಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ, ‘ಕೇಂದ್ರ ಸರ್ಕಾರ ತರಾತುರಿಯಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದಿಲ್ಲ. ಹಿಂದುಳಿದ ವರ್ಗಗಳ ಸರ್ವತೋಮುಖ ಏಳಿಗೆಗಾಗಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಈ ತಿದ್ದುಪಡಿ ಮಸೂದೆ ಮಂಡನೆಯಾದಾಗ ಸಂಸತ್ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದ ಕಾಂಗ್ರೆಸ್ ಸದಸ್ಯರೂ ಕಲಾಪದಲ್ಲಿ ಭಾಗವಹಿಸಿದ್ದು ನೆನಪಿದೆಯೆ’ ಎಂದು ಕೇಳಿದೆ.

ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ದೆಹಲಿಯ ಕರ್ನಾಟಕ ಭವನದಲ್ಲಿ ಖಾಲಿ ಇರುವ 32 ಹುದ್ದೆಗಳ ಭರ್ತಿಗೆ ನಡೆದಿರುವ ನೇರ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತ ತಲುಪಿದ್ದು, ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಲಾಗಿದೆ.

32 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಫೆಬ್ರುವರಿ 20ರಂದು ಅರ್ಜಿ ಆಹ್ವಾನಿಸಲಾಗಿತ್ತು. ಅರ್ಹ ಅಭ್ಯರ್ಥಿಗಳ ದಾಖಲೆ ಪರಿಶೀಲನೆ ಮತ್ತು ಅನ್ವಯಿಸುವ ಹುದ್ದೆಗಳಿಗೆ ಪ್ರಾವೀಣ್ಯ ಪರೀಕ್ಷೆಯನ್ನು ಇದೇ 24ರಂದು ಪೂರ್ಣಗೊಳಿಸಲಾಗಿದೆ. ತಾತ್ಕಾಲಿಕ ಆಯ್ಕೆಪಟ್ಟಿ ಹಾಗೂ ಕಾಯುವಿಕೆ ಪಟ್ಟಿಯನ್ನು www.karnatakabhavan.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆಕ್ಷೇಪಣೆಗಳಿದ್ದಲ್ಲಿ ಸೆ. 5ರೊಳಗೆ ಲಿಖಿತ ಅಥವಾ ಇ-ಮೇಲ್ ಮೂಲಕ ಸಲ್ಲಿಸಬಹುದು ಎಂದು ಆಯ್ಕೆ ಸಮಿತಿ ಅಧ್ಯಕ್ಷರಾಗಿರುವ ದೆಹಲಿ ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತ ಎಚ್. ಪ್ರಸನ್ನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೆಬಿನಾರ್‌ನಲ್ಲಿ ಚಿಂತಕರು, ಹೋರಾಟಗಾರರ ಕಳವಳ

‘ಅಪಾಯದಲ್ಲಿರುವ ಪ್ರಜಾಪ್ರಭುತ್ವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ದೇಶದ ಪ್ರಜಾಪ್ರಭುತ್ವ ಮತ್ತು ಸಂವಿಧಾನ ಅಪಾಯಕ್ಕೆ ಸಿಲುಕಿವೆ. ಬಂಡವಾಳಶಾಹಿ ಹಾಗೂ ಗೂಂಡಾ ರಾಜ್ಯ ನಿರ್ಮಾಣದತ್ತ ಭಾರತ ಸಾಗುತ್ತಿದೆ’ ಎಂಬ ಆತಂಕ ಪ್ರಜಾಪ್ರಭುತ್ವ ಉಳಿವಿಗಾಗಿ ರಾಷ್ಟ್ರೀಯ ಆಂದೋಲನ–ಕರ್ನಾಟಕವು ಶನಿವಾರ ಆಯೋಜಿಸಿದ್ದ ವೆಬಿನಾರ್‌ನಲ್ಲಿ ವ್ಯಕ್ತವಾಯಿತು.

‘ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಧಕ್ಕೆ’ ಎಂಬ ವಿಷಯ ಕುರಿತು ನಡೆದ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಚಿಂತಕರು, ಹೋರಾಟಗಾರರು, ‘ಪ್ರಜಾಪ್ರಭುತ್ವದ ಮೇಲಿನ ದಾಳಿಯ ವಿರುದ್ಧ ಹೋರಾಟಕ್ಕೆ ಇಳಿಯದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ’ ಎಂದು ಹೇಳಿದರು.

ಲೇಖಕ ಡಾ.ಬಂಜಗೆರೆ ಜಯಪ್ರಕಾಶ್, ‘ಕೇಂದ್ರ ಸರ್ಕಾರವು ನಿರಂತರವಾಗಿ ಮಾನವ ಹಕ್ಕುಗಳನ್ನು ದಮನ ಮಾಡುವ ಕಲಸದಲ್ಲಿ ತೊಡಗಿದೆ. ಮಾನವ ಹಕ್ಕುಗಳ ಪರ ಧ್ವನಿ ಎತ್ತುವವರಿಗೆ ದೇಶದ್ರೋಹಿಗಳ ಹಣೆಪಟ್ಟಿ ಕಟ್ಟಿ, ಅವರನ್ನು ಜೈಲಿಗೆ ತಳ್ಳಲಾಗುತ್ತಿದೆ’ ಎಂದರು.

ಸಿಪಿಐ ಮುಖಂಡ ಡಾ.ಸಿದ್ದನಗೌಡ ಪಾಟೀಲ, ‘ನರೇಂದ್ರ ಮೋದಿ ನೇತೃತ್ವದ ಸರ್ಕಾರವು ದೇಶದ ಸಮಾಜೋ–ಸಾಂಸ್ಕೃತಿಕ ಸ್ವರೂಪವನ್ನೂ ಬದಲಿಸಲು ಹೊರಟಿದೆ. ಅಪಾಯಕಾರಿ ಆರ್ಥಿಕ ನೀತಿಗಳನ್ನು ಜಾರಿಗೆ ತರುತ್ತಿದೆ. ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನಿಲುವಿನಿಂದ 45 ಕೋಟಿ ಜನರು ಅಪಾಯಕ್ಕೆ ಸಿಲುಕಿದ್ದಾರೆ’ ಎಂದು ಹೇಳಿದರು.

‘ಸರ್ಕಾರವೇ ದುಡಿಯುವ ವರ್ಗದ ಮೇಲೆ ದಾಳಿ ನಡೆಸುತ್ತಿದೆ. ದೌರ್ಜನ್ಯ ಪ್ರಶ್ನಿಸುವವರನ್ನು ಸಮಾಜಘಾತುಕ ಚಟುವಟಿಕೆ ತಡೆ (ಯುಎಪಿಎ) ಕಾಯ್ದೆಯಡಿ ಬಂಧಿಸಲಾಗುತ್ತಿದೆ. ಎಲ್ಲ ಹೋರಾಟಗಳನ್ನೂ ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ’ ಎಂದು ವಕೀಲ ಕ್ಲಿಫ್ಟನ್ ರೊಜಾರಿಯೊ ಆತಂಕ ವ್ಯಕ್ತಪಡಿಸಿದರು.

ಪಿಯುಸಿಎಲ್ ಮುಖಂಡ ಅಧ್ಯಕ್ಷ ಡಾ. ಲಕ್ಷ್ಮೀನಾರಾಯಣ, ‘ಕಲ್ಯಾಣ ರಾಜ್ಯದ ಸ್ಥಾಪನೆ ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯ. ಆದರೆ, ಬಂಡವಾಳಶಾಹಿ ರಾಜ್ಯ ನಿರ್ಮಾಣಕ್ಕೆ ಕೇಂದ್ರದಲ್ಲಿ ಈಗ ಅಧಿಕಾರ ನಡೆಸುತ್ತಿರುವವರು ಪ್ರಯತ್ನಿಸುತ್ತಿದ್ದಾರೆ’ ಎಂದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ದಲಿತ ಸಂಘರ್ಷ ಸಮಿತಿ (ಭೀಮವಾದ) ರಾಜ್ಯ ಸಂಚಾಲಕ ಮೋಹನ್‌ರಾಜ್, ಪಿಯುಸಿಎಲ್ ರಾಜ್ಯ ಘಟಕದ ಅಧ್ಯಕ್ಷ ರಾಜೇಂದ್ರ ಮಾತನಾಡಿದರು. ರಾಜ್ಯದ ವಿವಿಧೆಡೆಯಿಂದ ನೂರಾರು ಮಂದಿ ವೆಬಿನಾರ್‌ನಲ್ಲಿ ಭಾಗವಹಿಸಿದ್ದರು.

ಆದಿತ್ಯ ಆಳ್ವ ಒಡೆತನದ ‘ಹೌಸ್ ಆಫ್ ಲೈಫ್’ ರೆಸಾರ್ಟ್‌ನಲ್ಲಿ ಬಚ್ಚಿಟ್ಟಿದ್ದ ಡ್ರಗ್ಸ್

ಡ್ರಗ್ಸ್ ಪಾರ್ಟಿ: ಯುವತಿಯರಿಗೆ ಉಚಿತ ಪ್ರವೇಶ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಅಂತರರಾಷ್ಟ್ರೀಯ ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಆರೋಪಿಗಳು, ನಗರದ ‘ಹೌಸ್ ಆಫ್ ಲೈಫ್’ ರೆಸಾರ್ಟ್‌ನಲ್ಲೂ ‘ಡ್ರಗ್ಸ್ ಪಾರ್ಟಿ’ ಆಯೋಜಿಸುತ್ತಿದ್ದರು. ತನಿಖೆಯಲ್ಲಿ ಸಿಕ್ಕ ಸುಳಿವು ಆಧರಿಸಿ ರೆಸಾರ್ಟ್ ಮೇಲೆ ದಾಳಿ ಮಾಡಿದ್ದ ಸಿಸಿಬಿ ಪೊಲೀಸರು, ಭಾರಿ ಪ್ರಮಾಣದ ಡ್ರಗ್ಸ್ ಜಪ್ತಿ ಮಾಡಿದ್ದರು.

ಆದಿತ್ಯ ಆಳ್ವ

ಆರೋಪಿಗಳ ಹೇಳಿಕೆ ಹಾಗೂ ಪಾರ್ಟಿಯಲ್ಲಿ ಪಾಲ್ಗೊಂಡಿದ್ದವರ ಮಾಹಿತಿ ಸಂಗ್ರಹಿಸಿರುವ ಸಿಸಿಬಿ ಪೊಲೀಸರು, ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಎಲ್ಲವನ್ನೂ ಉಲ್ಲೇಖಿಸಿದ್ದಾರೆ. ಅದಕ್ಕೆ ಪುರಾವೆಯಾಗಿರುವ ಫೋಟೊಗಳನ್ನು ಹಾಗೂ ಮಹಜರು ದಾಖಲೆಗಳನ್ನೂ ಲಗತ್ತಿಸಿದ್ದಾರೆ.

‘ಮಾಜಿ ಸಚಿವರೊಬ್ಬರ ಪುತ್ರನಾದ ಆದಿತ್ಯ ಆಳ್ವ, ಡ್ರಗ್ಸ್ ಪ್ರಕರಣದ 6ನೇ ಆರೋಪಿ (ಎ–6). ಹೆಬ್ಬಾಳದ ಮರಿಯಣ್ಣಪಾಳ್ಯದ ಎಂ.ಎಂ. ರೆಡ್ಡಿ ರಸ್ತೆಯಲ್ಲಿರುವ ‘ಹೌಸ್ ಆಫ್ ಲೈಫ್’ ರೆಸಾರ್ಟ್ ಆತನ ಒಡೆತನದಲ್ಲಿದೆ. ಅಲ್ಲೇ ಪಾರ್ಟಿ ಆಯೋಜಿಸುತ್ತಿದ್ದ ಆತ, ಇತರೆ ಆರೋಪಿಗಳ ಜೊತೆ ಸೇರಿ ಡ್ರಗ್ಸ್ ಮಾರುತ್ತಿದ್ದ. ಆತನೂ ಡ್ರಗ್ಸ್ ಸೇವನೆ ಮಾಡಿರುವ ಪುರಾವೆಗಳೂ ಸಿಕ್ಕಿವೆ’ ಎಂಬ ಮಾಹಿತಿ ಆರೋಪ ಪಟ್ಟಿಯಲ್ಲಿದೆ.

‘ನ್ಯಾಯಾಲಯದ ಅನುಮತಿ ಪಡೆದು ‘ಹೌಸ್ ಆಫ್ ಲೈಫ್’ ರೆಸಾರ್ಟ್ ಮೇಲೆ ದಾಳಿ ಮಾಡಲಾಗಿತ್ತು. 55 ಗ್ರಾಂ ಗಾಂಜಾ ಹಾಗೂ 3.50 ಗ್ರಾಂ ಎಕ್ಸ್ಟೆಸಿ ಮಾತ್ರೆಗಳು ಸಿಕ್ಕಿದ್ದವು. ಅಲ್ಲಿ ಡ್ರಗ್ಸ್ ಬಚ್ಚಿಡುತ್ತಿದ್ದ ಆರೋಪಿಗಳು, ಅದನ್ನೇ ಯುವಕ–ಯುವತಿಯರಿಗೆ ಮಾರಾಟ ಮಾಡುತ್ತಿದ್ದರು’ ಎಂಬ ಅಂಶವನ್ನೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

‘ರೆಸಾರ್ಟ್‌ನಲ್ಲಿ 2018ರಿಂದಲೇ ಡಿ.ಜೆ ಕಾರ್ಯಕ್ರಮ ಹಾಗೂ ಪಾರ್ಟಿಗಳನ್ನು ಸಂಘಟಿಸಲಾಗುತ್ತಿತ್ತು. ವಾಟ್ಸ್ ಆ್ಯಪ್, ಫೇಸ್‌ಬುಕ್ ಮೆಸೆಂಜರ್ ಹಾಗೂ ಇತರೆ ಆ್ಯಪ್‌ಗಳ ಮೂಲಕ ಶ್ರೀಮಂತರ ಮಕ್ಕಳನ್ನು ಪಾರ್ಟಿಗೆ ಆಹ್ವಾನಿಸಲಾಗುತ್ತಿತ್ತು. ಪಾರ್ಟಿಗೆ ಬಂದ ಬಹುತೇಕರು ಎಕ್ಸ್ಟೆಸಿ ಮಾತ್ರೆಗಳು, ಕೊಕೇನ್, ಎಂಡಿಎಂಎ, ಗಾಂಜಾ ಸೇವಿಸುತ್ತಿದ್ದರು.’

‘2019ರ ಡಿಸೆಂಬರ್ 24ರಂದು ಕ್ರಿಸ್‌ಮಸ್ ಹಬ್ಬದಂದು ರೆಸಾರ್ಟ್‌ನಲ್ಲಿ ಪಾರ್ಟಿ ಆಯೋಜಿಸಲಾಗಿತ್ತು. ಪಾರ್ಟಿ ಮುಗಿಸಿ ಕೆಲವರು ಹೊರಟು ಹೋಗಿದ್ದರು. ಆಯ್ದ 120 ಜನರನ್ನು ಸೇರಿಸಿಕೊಂಡು ‘ಆಫ್ಟರ್ ಪಾರ್ಟಿ’ ಆಯೋಜಿಸಿ, ಪ್ರತಿಯೊಬ್ಬರಿಗೆ ಎಕ್ಸ್ಟೆಸಿ ಮಾತ್ರೆಗಳನ್ನು ನೀಡಲಾಗಿತ್ತು’ ಎಂಬ ಸಂಗತಿಯೂ ಪಟ್ಟಿಯಲ್ಲಿದೆ. ‘2019ರ ಡಿಸೆಂಬರ್ 31ರಂದು ಹೊಸ ವರ್ಷಾಚರಣೆ ದಿನದಂದು ‘ಬೂಮ್ ಬಾಕ್ಸ್’ ಪಾರ್ಟಿ, 2020ರ ಮಾರ್ಚ್ 7 ಹಾಗೂ 8ರಂದು ‘ಬೂಮ್ ಬಾಕ್ಸ್ ಆ್ಯಂಡ್ ದಿ ಬಿಯರ್’ ಪಾರ್ಟಿ ಆಯೋಜಿಸಲಾಗಿತ್ತು. ಉದ್ಯಮಿಗಳು, ವ್ಯಾಪಾರಿಗಳು, ನಟ–ನಟಿಯರು, ವಿದೇಶಿಗರು, ಶ್ರೀಮಂತರ ಮಕ್ಕಳು ಪಾಲ್ಗೊಂಡಿದ್ದರು. ಅಲ್ಲೆಲ್ಲ ಪ್ರತಿ ಗ್ರಾಂಗೆ ₹3,000–₹5,000 ಬೆಲೆಯಲ್ಲಿ ಕೊಕೇನ್ ಮಾರಲಾಗಿತ್ತು’ ಎಂಬ ಅಂಶವೂ ಪತ್ತೆಯಾಗಿದೆ.

ಯುವತಿಯರಿಗೆ ಉಚಿತ ಪ್ರವೇಶ: ‘ಆರಂಭದಲ್ಲಿ ತಿಂಗಳಿಗೊಂದು ಪಾರ್ಟಿ ಇರುತ್ತಿತ್ತು. ಡ್ರಗ್ಸ್‌ಗೆ ಬೇಡಿಕೆ ಬರುತ್ತಿದ್ದಂತೆ, ಪ್ರತಿ ವಾರದ ಕೊನೆ ದಿನಗಳಂದು ಪಾರ್ಟಿ ಆಯೋಜನೆ ಹೆಚ್ಚಾಯಿತು. ಯುವಕರನ್ನು ಪಾರ್ಟಿಗೆ ಸೆಳೆಯಲೆಂದು, ಯುವತಿಯರಿಗೆ ಉಚಿತ ಪ್ರವೇಶ ನೀಡಲಾಗಿತ್ತು’ ಎಂಬ ವಿಚಾರವೂ ಆರೋಪ ಪಟ್ಟಿಯಲ್ಲಿದೆ.

‘ಆಫ್ಟರ್ ಪಾರ್ಟಿ ಹೆಸರಿನಲ್ಲಿ ರಾತ್ರಿಯಿಂದ ಮರುದಿನ ನಸುಕಿನವರೆಗೂ ಮೋಜು–ಮಸ್ತಿ ಇರುತ್ತಿತ್ತು. 100ರಿಂದ 120 ಜನರು ಪಾರ್ಟಿಯಲ್ಲಿರುತ್ತಿದ್ದರು. ಇಂಥ ಪಾರ್ಟಿಗಳಲ್ಲಿ ನಟಿ ರಾಗಿಣಿ, ಆಕೆಯ ಗೆಳೆಯ ಬಿ.ಕೆ. ರವಿಶಂಕರ್ ಹಾಗೂ ಇತರೆ ಆರೋಪಿಗಳೂ ಪಾಲ್ಗೊಂಡಿದ್ದರು’ ಎಂಬುದನ್ನೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಕೋವಿಡ್–19 ಮಾರ್ಗಸೂಚಿ ಅವಧಿ ಸೆ.30ರವರೆಗೆ ವಿಸ್ತರಿಸಿದ ಕೇಂದ್ರ ಸರ್ಕಾರ

ಹಬ್ಬ ನಿರ್ಬಂಧಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾಲು ಸಾಲಾಗಿ ಹಬ್ಬಗಳು ಬರುತ್ತಿರುವ ಸಂದರ್ಭದಲ್ಲಿ, ಹೆಚ್ಚು ಜನರು ಒಂದೆಡೆ ಸೇರದಂತೆ ನೋಡಿಕೊಳ್ಳಬೇಕು ಹಾಗೂ ಕೊರೊನಾ ಸೋಂಕು ಪ್ರಸರಣವನ್ನು ತಡೆಯಲು ಅಗತ್ಯವಿದ್ದಲ್ಲಿ ಸ್ಥಳೀಯವಾಗಿ ಕಠಿಣ ನಿರ್ಬಂಧಗಳನ್ನು ಹೇರಬೇಕು ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಶನಿವಾರ ಸೂಚಿಸಿದೆ.

ಈ ಬಗ್ಗೆ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಆಡಳಿತಾಧಿಕಾರಿಗಳಿಗೆ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಪತ್ರ ಬರೆದಿದ್ದಾರೆ. ಕೋವಿಡ್‌–19 ನಿರ್ವಹಣೆಗೆ ಸಂಬಂಧಿಸಿ, ಸದ್ಯಕ್ಕೆ ಅನುಷ್ಠಾನದಲ್ಲಿರುವ ಮಾರ್ಗ ಸೂಚಿಯನ್ನು ಸೆ.30ರವರೆಗೆ ವಿಸ್ತರಿಸಿದ್ದಾಗಿಯೂ ತಿಳಿಸಿದ್ದಾರೆ. ಜನರು ಮಾಸ್ಕ್ ಧರಿಸುವುದು ಕಡಿಮೆಯಾಗುತ್ತಿದ್ದು, ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದೂ ಎಚ್ಚರಿಸಿದ್ದಾರೆ.

ಕೆಲವು ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ಸ್ಥಳೀಯವಾಗಿ ಹೆಚ್ಚುತ್ತಿವೆ. ಅದನ್ನು ಹೊರತುಪಡಿಸಿದರೆ, ದೇಶದಲ್ಲಿ ಸಾಂಕ್ರಾಮಿಕದ ಸ್ಥಿತಿ ಸ್ಥಿರವಾಗಿದೆ.

ಆದರೆ, ಕೆಲವು ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣ ಹಾಗೂ ದೃಢಪಡುತ್ತಿರುವ



ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿನ ಹೆಚ್ಚಳವು ಆತಂಕಕಾರಿಯಾಗಿದೆ. ಹೀಗಾಗಿ, ಅಂತಹ ಜಿಲ್ಲೆಗಳಲ್ಲಿ ಸ್ಥಳೀಯವಾಗಿಯೇ ಪರಿಣಾಮಕಾರಿ ನಿರ್ಬಂಧ ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ.

ಹಬ್ಬದ ಸಂದರ್ಭದಲ್ಲಿ ಅದರಲ್ಲೂ ಮಾರುಕಟ್ಟೆ ಪ್ರದೇಶದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ. ಆದ್ದರಿಂದ, ಜನರು ಈ ರೀತಿ ಒಂದೇ ಕಡೆ ಸೇರುವುದನ್ನು ತಪ್ಪಿಸಲು ಸಮರ್ಪಕ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇದರೊಂದಿಗೆ ಕೋವಿಡ್ ಪರೀಕ್ಷೆ, ಪತ್ತೆ, ಚಿಕಿತ್ಸೆ, ಲಸಿಕೆ ತೆಗೆದುಕೊಳ್ಳುವುದು ಹಾಗೂ ಕೋವಿಡ್–19 ಮಾರ್ಗಸೂಚಿಯ ಕಟ್ಟುನಿಟ್ಟಿನ ಪಾಲನೆಯನ್ನು ಮುಂದುವರಿಸಬೇಕು ಎಂದೂ ತಿಳಿಸಿದ್ದಾರೆ.

ಮಾಸ್ಕ್ ಧರಿಸುವುದು, ದೈಹಿಕ ಅಂತರ ಪಾಲನೆ ಹಾಗೂ ತಪ್ಪಿದವರಿಗೆ ದಂಡ ವಿಧಿಸಿದ ಪ್ರಕರಣಗಳು ಸೇರಿದಂತೆ ಮಾರ್ಗಸೂಚಿ ಪಾಲನೆಗೆ ಸಂಬಂಧಿಸಿ, ಪ್ರತೀ ವಾರ ರಾಜ್ಯಗಳು ಕಳುಹಿಸಿರುವ ಮಾಹಿತಿಯನ್ನು ಗಮನಿಸಿದರೆ, ಮಾರ್ಗಸೂಚಿಯ ಪಾಲನೆಯಲ್ಲಿ ನಿರ್ಲಕ್ಷ್ಯ ಕಂಡುಬರುತ್ತಿದೆ. ಆದ್ದರಿಂದ, ರಾಜ್ಯಗಳು ಈ ಬಗ್ಗೆ ಇನ್ನಷ್ಟು ನಿಗಾ ವಹಿಸಬೇಕು ಹಾಗೂ ಎಷ್ಟು ಸಾಧ್ಯವೋ ಅಷ್ಟು ಅರ್ಹ ನಾಗರಿಕರಿಗೆ ಲಸಿಕೆ ನೀಡುವುದಕ್ಕೆ ಒತ್ತು ಕೊಡಬೇಕು ಎಂದಿದ್ದಾರೆ.

ಕೋವಿಡ್ ಶೂನ್ಯ ಪ್ರಕರಣ ಅಥವಾ ಕಡಿಮೆ ಪ್ರಕರಣಗಳಿರುವ ಪ್ರದೇಶದಲ್ಲಿ ಸೋಂಕು ಹರಡದಂತೆ ನೋಡಿಕೊಳ್ಳುವುದು ಅತೀ ಅಗತ್ಯ ಎಂದಿರುವ ಅವರು, ಮಾರ್ಗಸೂಚಿ ಅನುಷ್ಠಾನದಲ್ಲಿ ಲೋಪ ಕಂಡು ಬಂದಲ್ಲಿ, ಸಂಬಂಧಿಸಿದ ಅಧಿಕಾರಿಯನ್ನೇ ವೈಯಕ್ತಿಕವಾಗಿ ಹೊಣೆ ಮಾಡುವಂತೆಯೂ ಸೂಚಿಸಿದ್ದಾರೆ.

ಗಣೇಶ ಚತುರ್ಥಿಗೆ ಸರ್ಕಾರ ಮಾರ್ಗಸೂಚಿ ಹೊರಡಿಸಲಿ: ಡಿಕೆಶಿ

ಬೆಂಗಳೂರು: 'ಗಣೇಶ ಚತುರ್ಥಿ ಆಚರಣೆ ಯಾವ ರೀತಿ ಮಾಡಬೇಕು ಎಂಬುದರ ಬಗ್ಗೆ ರಾಜ್ಯ ಸರ್ಕಾರ ಮಾರ್ಗಸೂಚಿ ಹೊರಡಿಸಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಹಬ್ಬದ ವಿಚಾರವಾಗಿ ಪಕ್ಷದ ನಿಲುವು ಈಗ ಹೇಳುವುದಿಲ್ಲ. ವಿಜಯಕ್ಕೆ ನಾಯಕ ವಿನಾಯಕ. ಎಲ್ಲ ವಿಘ್ನ ನಿವಾರಿಸುವ ವಿನಾಯಕನ ಹಬ್ಬ ಆಚರಣೆ ಪ್ರತಿ ಮನೆಗಳಲ್ಲಿ ಆಗಬೇಕು' ಎಂದರು.

ಸರ್ವಥಾ ಸಮ್ಮತವಲ್ಲ: 'ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲರಿಗೂ ಭದ್ರತೆ ಒದಗಿಸುವುದು ಪೊಲೀಸರ ಕರ್ತವ್ಯ. ಹೀಗಾಗಿ, ಮೈಸೂರು ವಿಶ್ವವಿದ್ಯಾಲಯದ ಆವರಣದಲ್ಲಿ ಸಂಜೆ 6.30ರ ನಂತರ ಯಾರೂ ಓಡಾಡುವಂತಿಲ್ಲ ಎಂದು ನಿರ್ಬಂಧ ಹೇರಿದ್ದು ಸರ್ವಥಾ ಸಮ್ಮತವಲ್ಲ' ಎಂದರು.

'ಈ ಆದೇಶ ಹೊರಡಿಸಿದ್ದ ಕುಲಸಚಿವರನ್ನು ಕರ್ತವ್ಯದಿಂದ ತಕ್ಷಣ ವಜಾಗೊಳಿಸಬೇಕು. ಅವರು ಈ ಹುದ್ದೆಯಲ್ಲಿ ಮುಂದುವರಿಯಲು ಅರ್ಹರಲ್ಲ' ಎಂದರು.

'ಆರ್ಥಿಕತೆ ಪಾತಾಳಕ್ಕೆ ನೂಕುತ್ತಿರುವ ಮೋದಿ'

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: 'ಜನರ ಬೆವರಿನ ಹಣದಿಂದ ಕಟ್ಟಿದ ಸಂಸ್ಥೆಗಳ ಆಸ್ತಿಯನ್ನು ಶ್ರೀಮಂತ ಬಂಡವಾಳದಾರರಿಗೆ ಮಾರಾಟ ಮಾಡುತ್ತಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ದೇಶದ ಆರ್ಥಿಕತೆಯನ್ನು ಪಾತಾಳಕ್ಕೆ ನೂಕುತ್ತಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಆರೋಪಿಸಿದರು.

ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಪಡಿತರ ಕಿಟ್ ವಿತರಣೆ ಹಾಗು ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೊರೊನಾ ಸಂಕಷ್ಟ ಕಾಲದಲ್ಲಿ ಒಂದೆಡೆ ಅಗತ್ಯ ವಸ್ತುಗಳ ಬೆಲೆಗಳು ಏರುತ್ತಿದ್ರೆ, ಜನರ ಆದಾಯ ಕುಸಿಯುತ್ತಿದೆ. ಇದರಿಂದಾಗಿ 23 ಕೋಟಿ ಜನ ಬಡತನ ರೇಖೆಗಿಂತ ಕೆಳಗೆ ತಳ್ಳಲ್ಪಟ್ಟಿದ್ದಾರೆ. ಮೋದಿ ಸರ್ಕಾರ ಇದ್ದಷ್ಟು ದಿನವೂ ಬಡತನ, ನಿರುದ್ಯೋಗ ಹೆಚ್ಚಲಿದೆ' ಎಂದರು.

'ರಾಜ್ಯ ಸರ್ಕಾರ ಘೋಷಿಸಿದ್ದ ಕೋವಿಡ್ ಪರಿಹಾರದ ಹಣ ಅಸಂಘಟಿತ ಕಾರ್ಮಿಕರಿಗೆ ಇನ್ನೂ

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಮಹಿಳಾ ಪದಾಧಿಕಾರಿಗಳ ನೇಮಕಾತಿ ಪತ್ರ ವಿತರಿಸಿದರು.

ತಲುಪಿಯೇ ಇಲ್ಲ. ಸರ್ಕಾರ ಕೇವಲ ಘೋಷಣೆಗಳು, ಜಾಹಿರಾತಿನಲ್ಲೇ ಜನರ ಮೂಗಿಗೆ ತುಪ್ಪ ಸವರುತ್ತಿದೆ. ಸರ್ಕಾರ ಪ್ರಾಮಾಣಿಕವಾಗಿ ಜನರ ನೆರವಿಗೆ ನಿಂತಿದ್ದಲ್ಲಿ, ಕಾಂಗ್ರೆಸ್ ನಿಂದ ಪರಿಹಾರ ನೀಡಬೇಕಾದ ಅಗತ್ಯ ಎದುರಾಗುತ್ತಿರಲಿಲ್ಲ' ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಾಸುದೇವರೆಡ್ಡಿ, 'ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಬಡಜನ ಈ ಅವಧಿಯಲ್ಲಿ ಅತೀವ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾಂಗ್ರೆಸ್ ಪಕ್ಷವು 10 ಸಾವಿರ ಕುಟುಂಬಗಳಿಗೆ ತಲಾ 1 ಸಾವಿರ ರೂಪಾಯಿ, ದಿನಸಿ ಕಿಟ್ ವಿತರಿಸಿದೆ. ಅನ್ನ ದಾಸೋಹ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಸಂಕಷ್ಟದಲ್ಲಿದ್ದ ಜನತೆಗೆ ನೆರವಾಗಿದೆ' ಎಂದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಯುವ ಕಾಂಗ್ರೆಸ್ ಅಧ್ಯಕ್ಷ ಅನಿಲ್ ರೆಡ್ಡಿ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಜಯಶ್ರೀ ಗೌಡ, ಕಾಂಗ್ರೆಸ್ ಮುಖಂಡರಾದ ಬಾಲಕೃಷ್ಣರೆಡ್ಡಿ, ಚಿಕ್ಕಣ್ಣ, ಐಎನ್ ಟಿಯುಸಿ ರಾಜ್ಯಾಧ್ಯಕ್ಷ ಪುಟ್ಟಸ್ವಾಮಿಗೌಡ, ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ದೀಪಿಕಾ ರೆಡ್ಡಿ ಇದ್ದರು.

'ಒಂದು ಪಾದದ ಗುರುತು' ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಲೋಕ ಕಲ್ಯಾಣವೇ ಸಾಹಿತ್ಯದ ಉದ್ದೇಶವಾಗಿರಬೇಕು. ಒಂದು ಸಾಲಿನ ಕವಿತೆಯು ಹತ್ತು ಪುಟಗಳಲ್ಲಿ ಹೇಳುವಷ್ಟನ್ನು ಹೇಳುವುದರ ಜೊತೆ ಓದುಗರ ಹೃದಯವನ್ನೂ ತಟ್ಟುವಂತಿರಬೇಕು' ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಅಭಿಪ್ರಾಯಪಟ್ಟರು.

ಚಿಗುರು ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗು ರಂಗ ಶಿಕ್ಷಣ ಕೇಂದ್ರದ ಸಹಯೋಗದಲ್ಲಿ ಸಾಹಿತಿ ಆನಂದ. ವೈ.ಮೌರ್ಯ ರಚಿಸಿರುವ 'ಒಂದು ಪಾದದ ಗುರುತು' ಕವಿತೆಗಳ ಸಂಕಲನ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕುಮಾರವ್ಯಾಸ ಕವಿಯು ಪ್ರಭುತ್ವದ ಕುರಿತು ಬರೆದ ಪದ್ಯ ಇಂದಿಗೂ ಪ್ರಸ್ತುತ.



ಸಾಹಿತಿ ಆನಂದ ವೈ.ಮೌರ್ಯ ವಿರಚಿತ 'ಒಂದು ಪಾದದ ಗುರುತು' ಕವಿತೆಗಳ ಸಂಕಲನವನ್ನು ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ ಲೋಕಾರ್ಪಣೆ ಮಾಡಿದರು. ರಂಗ ಶಿಕ್ಷಣ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಸಿದ್ದರಾಜು, ಮಣ್ಣೆ ಮೋಹನ್, ಮಾಜಿ ಸಚಿವ ಆಂಜನಮೂರ್ತಿ, ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, ವಿಮರ್ಶಕ ಬೈರಮಂಗಲ ರಾಮೇಗೌಡ ಇದ್ದಾರೆ.

ಜಾನಪದರು, ಶರಣರು ವಿಶ್ವವಿದ್ಯಾಲಯಗಳಿಂದ ಪದವಿ ಪಡೆದವರಲ್ಲ. ಅವರ ಜೀವನಾನುಭವವೇ ಸಾಹಿತ್ಯವಾಗಿದೆ' ಎಂದರು.

'ಆನಂದ ಮೌರ್ಯ ಅವರ ಕವಿತೆಗಳಲ್ಲಿ ವಿಡಂಬನೆ, ಹಾಸ್ಯ, ಶೃಂಗಾರ, ಪರಿಸರ ಪ್ರೇಮ ಎಲ್ಲವೂ ಮಿಶ್ರಿತವಾಗಿದೆ' ಎಂದು ಅಭಿಪ್ರಾಯಪಟ್ಟರು.

ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ ಪುಸ್ತಕ ಲೋಕಾರ್ಪಣೆ ಮಾಡಿ ಕನ್ನಡ ಪುಸ್ತಕಗಳನ್ನು ಖರೀದಿಸಿ ಓದುವುದರಿಂದ ಭಾಷೆಯ ಜೊತೆಗೆ ಕವಿಗಳು ಶ್ರೀಮಂತರಾಗುತ್ತಾರೆ, ಮತ್ತಷ್ಟು ಸಾಹಿತ್ಯ ಹೊರಬರಲು ಪ್ರೇರಣೆ ನೀಡಿದಂತಾಗುತ್ತದೆ ಎಂದರು.

ಕೊರೋನಾ ಸೇನಾನಿಗಳನ್ನು ಅಭಿನಂದಿಸಲಾಯಿತು. ಚಿಕ್ಕಮಾರನಹಳ್ಳಿ ಸಿದ್ದಯ್ಯ ಮತ್ತು ತಂಡ ಗೀತಗಾಯನ ನಡೆಸಿಕೊಟ್ಟರು. ಆಂಜನಮೂರ್ತಿ, ವಿಮರ್ಶಕ ಬೈರಮಂಗಲ ರಾಮೇಗೌಡ, ಮಣ್ಣೆ ಮೋಹನ್ ಮಾತನಾಡಿದರು. ರಂಗಶಿಕ್ಷಣ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಸಿದ್ದರಾಜು, ಪ್ರಾಧ್ಯಾಪಕಿ ಪುಷ್ಪಾ, ಸುಗ್ಗರಾಜು, ಆರ್.ಪ್ರಮೋದ್ ಕುಮಾರ್, ಅಭಿಷೇಕ್, ಚಿಕ್ಕರಾಜು ಇದ್ದರು.

ವಿಜಯನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಎಚ್.ರವೀಂದ್ರ ಅವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಶನಿವಾರ ಭಾಗವಹಿಸಿದ್ದ ಸಚಿವ ಆರ್. ಅಶೋಕ, ರವೀಂದ್ರ ಅವರಿಗೆ ಸಿಹಿ ತಿನಿಸಿ ಶುಭ ಕೋರಿದರು.

'ವಚನಗಳಿಂದ ಮನಸ್ಸಿಗೆ ನೆಮ್ಮದಿ'

ಬೆಂಗಳೂರು: 'ವಚನಗಳು ಮನಸ್ಸಿಗೆ ಸಾಂತ್ವನ ನೀಡುವುದಲ್ಲದೆ ನೆಮ್ಮದಿಯ ಬದುಕಿಗೆ ಪೂರಕವಾಗಿವೆ' ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ಹೇಳಿದರು.

ಜ್ಞಾನಭಾರತಿ ಬಡಾವಣೆಯ ಪರಮಸುಖಿಧಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ 'ವಚನ ಶ್ರಾವಣ' ಕಾರ್ಯಕ್ರಮದಲ್ಲಿ ಅವರು ಶನಿವಾರ ಮಾತನಾಡಿದರು.

'ವಚನಗಳು ಅನುಭಾವ ಮುಕ್ತಕಗಳು. ಇವು ಆಧ್ಯಾತ್ಮಿಕ ಮಾತ್ರವಲ್ಲ, ಸಾಮಾಜಿಕ ಸಮತೆಗೂ ಕಾರಣವಾಗಿವೆ' ಎಂದರು.

ಸಿದ್ದರಾಮ ಕೇಸಾಪುರ, ಮೀನಾಕ್ಷಿ ಮೇಟಿ, ಅನುರಾಗ ಗದ್ದಿ ಮತ್ತು ಶಕುಂತಲಾ ಬಾಗಲಕೋಟೆ ಅವರು ವಚನಗಳನ್ನು ಹಾಡಿದರು.

ಜ್ಞಾನಯೋಗ ಮಂದಿರದ ಎನ್.ಎಂ.ಶಿವಕುಮಾರ್, ವಚನಜ್ಯೋತಿ ಬಳಗದ ಪ್ರಭು ಇಸುವನಹಳ್ಳಿ, ರುದ್ರೇಶ್ ಇಸುವನಹಳ್ಳಿ, ಜ್ಞಾನಭಾರತಿ ವಿಚಾರ ವೇದಿಕೆಯ ರಾಜಾ ಗುರುಪ್ರಸಾದ್, ಬಸವ ಜೇನುಕಲ್ಲು ಇದ್ದರು.

ಶಿಕ್ಷಣದ ಎಲ್ಲ ಆಯಾಮ ಒಳಗೊಂಡಿರುವ ಎನ್‌ಇಪಿ: ಎಂ.ಕೆ. ಶ್ರೀಧರ್

'ನಿರ್ದೇಶನಕ್ಕೆ ತಕ್ಕ ಕ್ರಿಯೆ ಇರುವ ನೀತಿ'

ಪ್ರಜಾವಾಣಿ ವಾರ್ತೆ

ಎಂ.ಕೆ. ಶ್ರೀಧರ್

ಬೆಂಗಳೂರು: 'ಕ್ರಿಯೆ ಮತ್ತು ನಿರ್ದೇಶನ ಒಂದಕ್ಕೊಂದು ಪೂರಕವಾಗಿರುತ್ತವೆ. ಸ್ಪಷ್ಟ ನಿರ್ದೇಶನವಿರದಿದ್ದರೆ ಕ್ರಿಯೆ ಪರಿಪೂರ್ಣವಾಗಿರುವುದಿಲ್ಲ. ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ಸ್ಪಷ್ಟ ನಿರ್ದೇಶನಗಳನ್ನು ಒಳಗೊಂಡಿದೆ' ಎಂದು ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿಯ ಸದಸ್ಯ ಎಂ.ಕೆ. ಶ್ರೀಧರ್ ಹೇಳಿದರು.

ಅನಂತಕುಮಾರ್ ಪ್ರತಿಷ್ಠಾನವು ಎನ್‌ಇಪಿ ಕುರಿತು ಆನ್‌ಲೈನ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

'32 ವರ್ಷಗಳಿಂದ ರಾಷ್ಟ್ರೀಯ ಮಟ್ಟದ ಶಿಕ್ಷಣ ನೀತಿ ಇರಲಿಲ್ಲ. 1986ರಲ್ಲಿ ಒಂದು ನೀತಿ ರೂಪಿಸಿದ್ದರೂ ಎರಡು ವರ್ಷಗಳಲ್ಲಿ ಅದನ್ನು ಹಿಂಪಡೆಯಲಾಯಿತು. ಅದಾದ ನಂತರ, ಈಗ ಸಮಗ್ರವಾದ ಶಿಕ್ಷಣ ನೀತಿಯನ್ನು ರೂಪಿಸಲಾಗಿದೆ' ಎಂದರು.

'ಶಿಕ್ಷಣವು ದೇಶದ 30 ಕೋಟಿ ವಿದ್ಯಾರ್ಥಿಗಗಳ ಜೊತೆಗೆ ನಾಗರಿಕರು, ಬೋಧಕ ವೃಂದ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ ಎಲ್ಲರಿಗೂ ಸಂಬಂಧಪಟ್ಟಿರುತ್ತದೆ. ಇಂತಹ ಮಹತ್ವದ ಕ್ಷೇತ್ರದ ಮಾರ್ಗಸೂಚಿಗಳಿಗೆ ನೀತಿಯ ಸ್ವರೂಪವೇ ಇರಲಿಲ್ಲ' ಎಂದರು.

ಸಮಗ್ರ ಪ್ರಕ್ರಿಯೆ: 'ರಾಷ್ಟ್ರೀಯ ಶಿಕ್ಷಣ ನೀತಿಯ ರಚನಾ ಪ್ರಕ್ರಿಯೆ ಪ್ರಾರಂಭವಾಗಿದ್ದು 2015ರಲ್ಲಿ. ಎರಡೂ ಲಕ್ಷಕ್ಕೂ ಹೆಚ್ಚು ಜನರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ. 2019ರಲ್ಲಿಯೇ ಸಾರ್ವಜನಿಕರಿಗೆ ಲಭ್ಯವಾಗುವಂತೆ ಇದನ್ನು ಪ್ರಕಟಿಸಲಾಗಿದೆ. ಸುಮಾರು ಐದು ವರ್ಷಗಳ ಪ್ರಕ್ರಿಯೆ ನಂತರ ರೂಪುಗೊಂಡಿರುವ ನೀತಿ ಇದು' ಎಂದು ಶ್ರೀಧರ್ ಹೇಳಿದರು.

'ಹೊಸ ನೀತಿ ಅನ್ವಯ, ಮಗುವಿನ ಶಿಕ್ಷಣ 3ನೇ ವರ್ಷದಿಂದಲೇ ಪ್ರಾರಂಭವಾಗುತ್ತದೆ. ಇಂತಹ ನೀತಿ ಜಾರಿಗೆ ರಾಜಕೀಯ ಇಚ್ಛಾಶಕ್ತಿ ಮತ್ತು ಬದ್ಧತೆ ಮುಖ್ಯ. ಕೇಂದ್ರ ಮತ್ತು ರಾಜ್ಯಸರ್ಕಾರಗಳು ಎನ್‌ಇಪಿಯ ಸಮರ್ಪಕ ಅನುಷ್ಠಾನಕ್ಕೆ ಎಲ್ಲ ಕ್ರಮಗಳನ್ನು ಕೈಗೊಂಡಿದೆ' ಎಂದರು.

ಪ್ರಯೋಗ ಸಂಸ್ಥೆ ಟ್ರಸ್ಟಿ ಡಾ. ವಲ್ಲೀಶ್ ಹೆರೂರ್, 'ಮನಸಿನ ವಿಕಸನವಾಗುವ ರೀತಿಯಲ್ಲಿ ಎನ್‌ಇಪಿಯನ್ನು ರೂಪಿಸಲಾಗಿದೆ. ಜ್ಞಾನ ಎನ್ನುವುದು ಅನುಭವದಿಂದ ಬರುತ್ತದೆ. ಅಂತಹ ಶೈಕ್ಷಣಿಕ ಮತ್ತು ಔದ್ಯೋಗಿಕ ಅನುಭವ ನೀಡುವಂತಹ ವ್ಯವಸ್ಥೆ ರೂಪುಗೊಳ್ಳಲಿದೆ. ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕತೆ ಮತ್ತು ಸಾಮರ್ಥ್ಯ ಹೆಚ್ಚಿಸುವ ನೀತಿ ಇದು' ಎಂದರು.

ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಷ್ಣುಕಾಂತ್ ಚಟಪಲ್ಲಿ, 'ಜಾರಿಗೆ ಯೋಗ್ಯವಾಗಿರುವ ಮತ್ತು ಜಾರಿಯಾಗಲೇಬೇಕಿರುವ ನೀತಿ ಇದು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಎನ್‌ಇಪಿ ರಚಿಸಲಾಗಿದೆ. ಈ ನೀತಿಯು ಆತ್ಮನಿರ್ಭರ ಭಾರತ ನಿರ್ಮಾಣಕ್ಕೆ ಪೂರಕ' ಎಂದರು.

ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಡಾ. ಶ್ರೀನಿವಾಸ ಬಳ್ಳಿ, ಡಾ. ಇಂದುಮತಿ ರಾವ್, ತೇಜಸ್ವಿನಿ ಅನಂತ್‌ಕುಮಾರ್ ಇದ್ದರು.

ಮಾನ್ಯತಾ ಟೆಕ್‌ಪಾರ್ಕ್ ಬಳಿ ನಿರ್ಮಾಣವಾಗುತ್ತಿರುವ ಮೇಲ್ಸೇತುವೆ

ಮೇಲ್ಸೇತುವೆ ಜೋಡಣೆ: ಸಂಚಾರಕ್ಕೆ ತಿಣುಕಾಟ

• ವಿಜಯಕುಮಾರ್ ಎಸ್.ಕೆ.

ಹೊರ ವರ್ತುಲ ರಸ್ತೆಯ ಮಾನ್ಯತಾ ಟೆಕ್‌ಪಾರ್ಕ್ ಬಳಿ ನಿರ್ಮಾಣವಾಗುತ್ತಿರುವ ಮೇಲ್ಸೇತುವೆ –ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ಬೆಂಗಳೂರು: ಹೊರ ವರ್ತುಲ ರಸ್ತೆಯ ನಾಗವಾರ ವೃತ್ತ ಮತ್ತು ಮರಿಯಣ್ಣಪಾಳ್ಯ ವೃತ್ತಗಳಲ್ಲಿರುವ ಮೇಲ್ಸೇತುವೆ ಜೋಡಣೆ ಕಾಮಗಾರಿ ಆಮೆಗತಿಯಲ್ಲಿ ನಡೆಯುತ್ತಿದ್ದು, ಸಂಚಾರ ದಟ್ಟಣೆ ನಡುವೆ ವಾಹನ ಸವಾರರು ನಿತ್ಯ ತಿಣುಕಾಡುತ್ತಿದ್ದಾರೆ.

ಈ ಎರಡೂ ವೃತ್ತಗಳಲ್ಲಿ ಮೇಲ್ಸೇತುವೆಗಳು ಈ ಹಿಂದೆಯೇ ನಿರ್ಮಾಣವಾಗಿವೆ. ಈ ಎರಡು ಜಂಕ್ಷನ್‌ಗಳ ನಡುವೆ ಮಾನ್ಯತಾ ಟೆಕ್ ಪಾರ್ಕ್ ಇದ್ದು, ಅಲ್ಲಿನ ಎಲ್ಲಾ ಉದ್ಯೋಗಿಗಳು ಕೋವಿಡ್ ಪೂರ್ವದಲ್ಲಿ ಕಚೇರಿಯಿಂದಲೇ ಕೆಲಸ ನಿರ್ವಹಿಸುತ್ತಿದ್ದರು. ಹೊರ ವರ್ತುಲ ರಸ್ತೆಯಲ್ಲಿ ಈ ಎರಡು ಜಂಕ್ಷನ್ ದಾಟುವುದೆಂದರೆ ಸಾಹಸದ ಕೆಲಸವಾಗಿತ್ತು. ಬೆಳಿಗ್ಗೆ ಮತ್ತು ಸಂಜೆಯ ಸಂಚಾರ ದಟ್ಟಣೆ ಸಂದರ್ಭದಲ್ಲಿ ಈ ವೃತ್ತಗಳನ್ನು ದಾಟಲು ಗಂಟೆಗಟ್ಟಲೆ ಸಮಯ ಬೇಕಾಗಿತ್ತು.

ಟೆಕ್ ಪಾರ್ಕ್ ಉದ್ಯೋಗಿಗಳು ಹೆಬ್ಬಾಳ ಕಡೆಗೆ ಹೋಗಬೇಕೆಂದರೆ ನಾಗವಾರ ವೃತ್ತಕ್ಕೆ ಹೋಗಿ ತಿರುಗಿಸಿಕೊಂಡು ಬರಬೇಕು. ಕೆ.ಆರ್.ಪುರ ಕಡೆಯಿಂದ ಬರುವ ಉದ್ಯೋಗಿಗಳು ಮರಿಯಣ್ಣನಪಾಳ್ಯ ವೃತ್ತದವರೆಗೆ ಸಾಗಿ, ಅಲ್ಲಿ ಯೂ–ಟರ್ನ್ ಪಡೆದು ಮಾನ್ಯತಾ ಟೆಕ್ ಪಾರ್ಕ್‌ಗೆ ಮರಳಬೇಕಿದೆ. ಇದರಿಂದಾಗಿ ಇಲ್ಲಿ ಸಂಚಾರ ದಟ್ಟಣೆ ಸಮಸ್ಯೆ ಎದುರಾಗುತ್ತಿತ್ತು.

ಇದಕ್ಕೆ ಪರಿಹಾರ ಕಂಡುಕೊಳ್ಳಲು

ವರ್ತುಲ ರಸ್ತೆಯೇ ಚಕ್ರವ್ಯೂಹ 2

ಬಿಬಿಎಂಪಿ ಮತ್ತು ಮಾನ್ಯತಾ ಟೆಕ್ ಪಾರ್ಕ್ ಸಹಭಾಗಿತ್ವದಲ್ಲಿ ಯೋಜನೆಯೊಂದನ್ನು ರೂಪಿಸಿ ಸದ್ಯ ಅನುಷ್ಠಾನಗೊಳಿಸಲಾಗುತ್ತಿದೆ. ಮರಿಯಣ್ಣಪಾಳ್ಯ ವೃತ್ತದ ಮೇಲ್ಸೇತುವೆ ಮತ್ತು ನಾಗವಾರ ವೃತ್ತದ ಮೇಲ್ಸೇತುವೆಗಳನ್ನು ಜೋಡಿಸುವ ಮತ್ತೊಂದು ಮೇಲ್ಸೇತುವೆ ನಿರ್ಮಾಣವಾಗುತ್ತಿದೆ. ಈ ಮೇಲ್ಸೇತುವೆಯಿಂದ ಮಾನ್ಯತಾ ಟೆಕ್ ಪಾರ್ಕ್‌ಗೆ ನೇರವಾಗಿ ಇಳಿಯಲು ಮತ್ತು ಹತ್ತಲು ಎರಡು ಲೂಪ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಕಾಮಗಾರಿ ಪೂರ್ಣಗೊಂಡರೆ ಹೊರ ವರ್ತುಲ ರಸ್ತೆಯ ಸಂಚಾರ ದಟ್ಟಣೆ ಮತ್ತು ಮಾನ್ಯತಾ ಟೆಕ್ ಪಾರ್ಕ್ ಉದ್ಯೋಗಿಗಳ ಸಂಚಾರ ಸಮಸ್ಯೆಗೂ ಪರಿಹಾರ ದೊರಕಲಿದೆ.

ಮರಿಯಣ್ಣಪಾಳ್ಯದಲ್ಲಿನ ಮೇಲ್ಸೇತುವೆಗೆ ಹೊಸ ಸೇತುವೆ ಜೋಡಣೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ನಾಗವಾರ ವೃತ್ತದಲ್ಲಿ ಕಾಮಗಾರಿ ಈಗಷ್ಟೇ ಅರಂಭವಾಗಿದೆ. ಈ ಕಾಮಗಾರಿ ನಿರ್ವಹಿಸಲು ಎರಡೂ ವೃತ್ತದಲ್ಲಿ ಈಗಾಗಲೇ ಇರುವ ಮೇಲ್ಸೇತುವೆಯ ಒಂದು ಭಾಗದಲ್ಲಿ ಸಂಚಾರ ನಿರ್ಬಂಧಿಸಲಾಗಿದೆ. ಏಕಮುಖ ಸಂಚಾರ ಇದ್ದ ಕಡೆಯೇ ದ್ವಿಮುಖ ಸಂಚಾರಕ್ಕೆ ಅವಕಾಶ ಮಾಡಲಾಗಿದೆ.

ಸಾರ್ವಜನಿಕರಿಗಾಗಿ ಮತ್ತೊಂದು ಲೂಪ್

‘ಅಷ್ಟೂ ಕಾಮಗಾರಿಯನ್ನು ಮಾನ್ಯತಾ ಟೆಕ್‌ಪಾರ್ಕ್‌ನಿಂದಲೇ ನಿರ್ವಹಿಸುತ್ತಿದ್ದು, ಬಿಬಿಎಂಪಿಯಿಂದ ಯಾವುದೇ ಹಣ ಖರ್ಚು ಮಾಡುತ್ತಿಲ್ಲ’ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ರಸ್ತೆ ನಿರ್ವಹಣೆ) ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

ಎರಡು ಲೂಪ್‌ಗಳು ಟೆಕ್‌ಪಾರ್ಕ್ ಆವರಣದೊಳಗೆ ಇಳಿಯಲಿವೆ. ಇವುಗಳಲ್ಲದೇ ಸಾರ್ವಜನಿಕರ ಅನುಕೂಲಕ್ಕಾಗಿ ಮತ್ತೊಂದು ಲೂಪ್ ಅನ್ನು ಹೆಚ್ಚುವರಿಯಾಗಿ ನಿರ್ಮಾಣ ಮಾಡಲು ಹೊಸ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಕೋವಿಡ್ ಇದ್ದರೂ ಕಾಮಗಾರಿ ನಿರ್ವಹಿಸಲಾಗಿದೆ. ಒಪ್ಪಂದದಂತೆ 2022ರ ಜ. 31ರೊಳಗೆ ಕಾಮಗಾರಿ ಪೂರ್ಣಗೊಳ್ಳಬೇಕಿದೆ ಎಂದರು. ಇದೇ ಮಾರ್ಗದಲ್ಲಿ ಮೆಟ್ರೊ ಮಾರ್ಗ ಕೂಡ ಬರಲಿದೆ. ಹಾಗಾಗಿ ಬೆಂಗಳೂರು ಮೆಟ್ರೊ ರೈಲು ನಿಗಮದಿಂದಲೂ ಕಾಮಗಾರಿಗೆ ಎಲ್ಲಾ ರೀತಿಯ ಅನುಮತಿ ಪಡೆಯಲಾಗಿದೆ ಎಂದು ಸ್ಪಷ್ಟಪಡಿಸಿದರು.

‘ಒಂದೇ ಪಥದಲ್ಲಿ ವಾಹನಗಳು ಸಾಲುಗಟ್ಟಿ ತೆರಳಬೇಕಾಗಿದ್ದು, ದಟ್ಟಣೆಗೆ ಕಾರಣವಾಗಿದೆ. ಐ.ಟಿ ಕಂಪನಿ ಉದ್ಯೋಗಿಗಳು ಮನೆಯಿಂದಲೇ ಕೆಲಸ ಮಾಡುತ್ತಿರುವ ಸಂದರ್ಭದಲ್ಲೂ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಕಾಮಗಾರಿ ಪೂರ್ಣಗೊಳ್ಳದೆ ಐ.ಟಿ ಕಂಪನಿಗಳು ಪರಿಪೂರ್ಣವಾಗಿ ಆರಂಭವಾದರೆ ಈ ಹೊರ ವರ್ತುಲ ರಸ್ತೆಯ ಸಂಚಾರ ನರಕವಾಗಲಿದೆ’ ಎನ್ನುತ್ತಾರೆ ಸ್ಥಳೀಯರು.

ಮೇಲ್ಸೇತುವೆಯ ಒಂದು ಭಾಗದಲ್ಲೇ ಎರಡೂ ಕಡೆ ಹೋಗುವ ವಾಹನಗಳು ಸಂಚರಿಸುತ್ತಿವೆ. ದಟ್ಟಣೆಯಾಗಿ ವಾಹನಗಳು ಗಂಟೆಗಟ್ಟಲೆ ನಿಲ್ಲುತ್ತಿವೆ. ಆ ಸಂದರ್ಭದಲ್ಲಿ ಮಳೆ ಬಂದರೆ ದ್ವಿಚಕ್ರ ವಾಹನ ಸವಾರರು ಮೇಲ್ಸೇತುವೆ ಮೇಲೆ ಆಶ್ರಯ ಪಡೆಯಲು ತಾಣವಿಲ್ಲ. ಮಳೆಯಲ್ಲಿ ತೋಯ್ಯುವುದು ಅನಿವಾರ್ಯ ಎಂದು ನಾಗವಾರದ ಸುರೇಶ್ ಹೇಳಿದರು.

ಮೇಲ್ಸೇತುವೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಬೇಕು. ಇಲ್ಲದಿದ್ದರೆ ಸಮಸ್ಯೆ ಮತ್ತಷ್ಟು ಬಿಗಡಾಯಿಸಲಿದೆ ಎಂದು ಅವರು ತಿಳಿಸಿದರು.

ಎ.ವಿ.ಆನಂದ್‌ಗೆ ಜೀವಮಾನ ಸಾಧನೆ ಪುರಸ್ಕಾರ



ಎ.ವಿ.ಆನಂದ್

ಬೆಂಗಳೂರು: ಮೃದಂಗ ವಿದ್ವಾಂಸರಾದ ಎ.ವಿ.ಆನಂದ್ ಅವರು ಶ್ರೀ ಅಕಾಡೆಮಿ ಆಫ್ ಮ್ಯೂಸಿಕ್ ಆ್ಯಂಡ್ ಆರ್ಟ್ಸ್ (ಸಾಮಾ) ನೀಡುವ ಜೀವಮಾನ ಸಾಧನೆ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ.

ವಿದ್ವಾನ್ ಜಿ.ವರದರಂಗನ್ ಹಾಗೂ ವಿದ್ವಾನ್ ಪುತ್ತೂರು ನಿಕ್ಷಿತ್ ಅವರು ಕ್ರಮವಾಗಿ ‘ಸಾಮಾ’ ಪುರಸ್ಕಾರ ಹಾಗೂ ‘ಸಾಮಾ’ ಯುವ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ.

ಮಹತಿ ಶ್ರೀಕಾಂತ್ ಅತ್ರೇಯಾ, ಕೆ.ಎಸ್.ಸುವಿದ್ಯೊತ್, ಶ್ರೀಕಾಂತಂ ನಾಗ ಪ್ರಣತಿ ಹಾಗೂ ಪ್ರಣವ್ ರಾವ್ ಅವರು ಬಾಲ ಪುರಸ್ಕಾರ ಪಡೆದಿದ್ದಾರೆ.

ಸೆಪ್ಟೆಂಬರ್ 4ರಂದು ನಡೆಯುವ ಸಂಸ್ಥೆಯ 13ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಅದೇ ದಿನ ಸಂಗೀತ, ನೃತ್ಯ ಹಾಗೂ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು ಇವು ಶ್ರೀ ಅಕಾಡೆಮಿಯ ಫೇಸ್‌ಬುಕ್ ಪುಟದಲ್ಲಿ ನೇರಪ್ರಸಾರವಾಗಲಿವೆ. ಇದೇ ಸಂದರ್ಭದಲ್ಲಿ ಇಬ್ಬರು ವೀರ ವನಿತೆಯರು ಹಾಗೂ ವೀರಯೋಧರೊಬ್ಬರನ್ನು ಸನ್ಮಾನಿಸಲಾಗುತ್ತದೆ.

ಜಿ.ಪಂ. ಸಿಇಒಗಳಿಗೆ ಬೆಳಗಾವಿಯಲ್ಲಿ ಕಾರ್ಯಾಗಾರ

ಬೆಂಗಳೂರು: ಬೆಳಗಾವಿಯ ಸುವರ್ಣ ಸೌಧದಲ್ಲಿ ಇದೇ 30–31ರಂದು ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಕಾರ್ಯಾಗಾರ ಆಯೋಜಿಸಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕಾರ್ಯಾಗಾರ ಆಯೋಜಿಸಿದ್ದು, ಇಲಾಖೆ ಸಚಿವ ಕೆ.ಎಸ್. ಈಶ್ವರಪ್ಪ ಅವರು ಸೋಮವಾರ ಬೆಳಿಗ್ಗೆ ಕಾರ್ಯಾಗಾರ ಉದ್ಘಾಟಿಸುವರು. ಸ್ವಾತಂತ್ರ್ಯದ ಅಮೃತ ಮಹೋತ್ಸವ ಪ್ರಯುಕ್ತ ಘೋಷಿಸಿರುವ ‘ಅಮೃತ ಗ್ರಾಮ ಪಂಚಾಯಿತಿ’ ಯೋಜನೆ ಅನುಷ್ಠಾನಕ್ಕೂ ಸಚಿವರು ಚಾಲನೆ ನೀಡುವರು.

ಎರಡು ದಿನಗಳ ಕಾರ್ಯಾಗಾರದಲ್ಲಿ ಸ್ವಚ್ಛ ಭಾರತ ಅಭಿಯಾನ, ಜಲ ಜೀವನ್ ಮಿಷನ್, ಬಹು ಗ್ರಾಮ ಕುಡಿಯುವ ನೀರಿನ ಯೋಜನೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಯಲಿದೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕಟ್ಟಡಗಳ ಸುಧಾರಣೆ, ವಿವಿಧ ರೀತಿಯ ಸೇವಾ ಕೇಂದ್ರಗಳ ಬಲವರ್ಧನೆ, ಸಂಪನ್ಮೂಲ ಸಂಗ್ರಹ, ಆಸ್ತಿ ತೆರಿಗೆ ವಸೂಲಿ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಯಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಚೇರಿಯ ಪ್ರಕಟಣೆ ತಿಳಿಸಿದೆ.

ಯಡಿಯೂರಪ್ಪ ನಿವಾಸಕ್ಕೆ ಸಚಿವ ಈಶ್ವರಪ್ಪ ಭೇಟಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗದ ಬಿ.ಎಸ್. ಯಡಿಯೂರಪ್ಪ ನಿವಾಸಕ್ಕೆ ಶನಿವಾರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್. ಈಶ್ವರಪ್ಪ ಭೇಟಿ ನೀಡಿ ಚರ್ಚಿಸಿದರು

ಶಿವಮೊಗ್ಗ: ಇಲ್ಲಿನ ವಿನೋಬನಗರದಲ್ಲಿನ ಬಿ.ಎಸ್. ಯಡಿಯೂರಪ್ಪ ನಿವಾಸಕ್ಕೆ ಶನಿವಾರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್. ಈಶ್ವರಪ್ಪ ಭೇಟಿ ನೀಡಿ ಚರ್ಚಿಸಿದರು.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಮೊದಲ ಬಾರಿ ತವರು ಜಿಲ್ಲೆಗೆ ಬಂದಿರುವ ಯಡಿಯೂರಪ್ಪ ಅವರ ಜತೆ ಉಪಾಹಾರ ಸೇವಿಸುತ್ತಾ ಅರ್ಧ ತಾಸು ಮಾತುಕತೆ ನಡೆಸಿದರು.

ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ತಮ್ಮ ಗಮನಕ್ಕೆ ತಾರದೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ನೇರವಾಗಿ ಹಣ ಬಿಡುಗಡೆ ಮಾಡಿದ್ದಾರೆ ಎಂದು ಈಶ್ವರಪ್ಪ ಅವರು ರಾಜ್ಯಪಾಲರಿಗೆ ದೂರು ನೀಡಿದ್ದರು. ನಂತರ ಇಬ್ಬರು ವೇದಿಕೆ ಹಂಚಿಕೊಂಡರೂ, ಪರಸ್ಪರ ಮುಖಕೊಟ್ಟು ಮಾತನಾಡುತ್ತಿರಲಿಲ್ಲ. ಈಗ ಇಬ್ಬರು ನಾಯಕರ ಭೇಟಿ ಕಾರ್ಯಕರ್ತರಲ್ಲಿ ಹಮ್ಮಸ್ಸು ತಂದಿದೆ.

ಇದೇಸಮಯದಲ್ಲಿಮನವಿಸಲ್ಲಿಸಲು ಬಂದಿದ್ದ ಶಿವಮೊಗ್ಗ ವೈದ್ಯಕೀಯ ಕಾಲೇಜು ಗುತ್ತಿಗೆ ಸಿಬ್ಬಂದಿ ಸಮಸ್ಯೆ ಬಗೆಹರಿಸುವಂತೆ ಯಡಿಯೂರಪ್ಪ ಅವರು ಸಚಿವರಿಗೆ ಸೂಚಿಸಿದರು.

‘ಭೇಟಿಯಲ್ಲಿ ವಿಶೇಷತೆ ಇಲ್ಲ. ನಾವಿಬ್ಬರೂ ಅಣ್ಣ–ತಮ್ಮಂದಿರಂತೆ ಇದ್ದೇವೆ. ಅವರ ಮನೆಗೆ ನಾವು ಹೋಗುತ್ತೇವೆ. ಅವರು ನಮ್ಮ ಮನೆಗೆ ಬರುತ್ತಾರೆ. ನಾವೆಲ್ಲಾ ಒಂದೇ’ ಎಂದಷ್ಟೇ ಈಶ್ವರಪ್ಪ ಪ್ರತಿಕ್ರಿಯಿಸಿದರು.

ಅಪಘಾತ: ದಂಪತಿ ಸಾವು

ಪ್ರಜಾವಾಣಿ ವಾರ್ತೆ

ಶಿರಾ: ರಾಷ್ಟ್ರೀಯ ಹೆದ್ದಾರಿ- 48ರ ಶಿರಾ ಬೈಪಾಸ್‌ನಲ್ಲಿ ಶನಿವಾರ ಮಧ್ಯಾಹ್ನ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಪತಿ, ಪತ್ನಿ ಮೃತಪಟ್ಟಿದ್ದಾರೆ.

ಹಾವೇರಿಯ ವಿನಾಯಕ ಸ್ವಾಮಿ ಬೆಳಗಿ ಹಾಗೂ ಅವರ ಪತ್ನಿ ಶಿಲ್ಪಾ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ಬೆಂಗಳೂರಿನ ಅಂತನಕೆರೆಯಲ್ಲಿ ವಾಸವಾಗಿದ್ದರು. ಹಾವೇರಿಯಿಂದ ಬೆಂಗಳೂರಿಗೆ ಕಾರಿನಲ್ಲಿ ತೆರಳುತ್ತಿದ್ದರು. ಕಾರಿನ ಟೈರ್ ಸಿಡಿದು ಚಾಲಕನ ನಿಯಂತ್ರಣ ತಪ್ಪಿ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಶಿಲ್ಪಾ (32) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ವಿನಾಯಕ ಸ್ವಾಮಿ ಬೆಳಗಿ ಅವರು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ.

ಗಂಭೀರವಾಗಿ ಗಾಯಗೊಂಡಿರುವ ಇವರ ಪುತ್ರಿ ಶಿವಾಸ್‌ನನ್ನು (5) ಬೆಂಗಳೂರಿನಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಎಐಕೆಎಂಸಿಸಿ ಸಮಾಜಕ್ಕೆ ಮಾದರಿ– ಸಲೀಂ ಅಹ್ಮದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘100 ಜೋಡಿ ಸರ್ವ ಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಸುವ ಮೂಲಕ ಆಲ್ ಇಂಡಿಯಾ ಕೇರಳ ಮುಸ್ಲಿಂ ಕಲ್ಚರಲ್ ಸೆಂಟರ್ (ಎಐಕೆಎಂಸಿಸಿ) ಸಮಾಜಕ್ಕೆ ಮಾದರಿಯಾಗಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹೇಳಿದರು.

ಶಿಹಾಬ್ ತಂಙಳ್ ಸೆಂಟರ್ ಫಾರ್ ಹ್ಯುಮ್ಯಾನಿಟಿ ಸಹಯೋಗದಲ್ಲಿ ಎಐಕೆಎಂಸಿಸಿ ನೇತೃತ್ವದಲ್ಲಿ ಸೋಮೇಶ್ವರ ನಗರದಲ್ಲಿ ನಡೆಯುತ್ತಿರುವ 100 ಜೋಡಿಗಳ 10 ದಿನದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬೆಂಗಳೂರು ಮಹಾನಗರದಲ್ಲಿ ಜಾತಿ, ಧರ್ಮ ಭೇದ ಮರೆತು ಎಐಕೆಎಂಸಿಸಿ ಸಂಘಟನೆ ಜನಪರ ಕೆಲಸ ಮಾಡಿದೆ. ಅಲ್ಲದೇ, ಕೋವಿಡ್ ಸಂದರ್ಭದಲ್ಲಿ ರಕ್ತದಾನ, ಉಚಿತ ಆಂಬ್ಯುಲೆನ್ಸ್ ಸೇವೆ ಹಾಗೂ ನಿರ್ಗತಿಕರಿಗೆ ಸಹಾಯಹಸ್ತ ಚಾಚಿದೆ’ ಎಂದು ಶ್ಲಾಘಿಸಿದರು.

‘ಪಾಣಕ್ಕಾಡ್ ಮೊಹಮ್ಮದ್ ಅಲಿ ಶಿಹಾಬ್ ತಂಙಳ್ ಹೆಸರಿನಲ್ಲಿ ಸರ್ವ -ಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಸುವ ಮೂಲಕ ಸಂಘಟನೆಯು ಸಮಾಜಕ್ಕೆ ಏಕತೆ ಹಾಗೂ ಸೌಹಾರ್ದತೆಯ ಸಂದೇಶ ನೀಡಿದೆ’ ಎಂದರು.

ಪಾಣಕ್ಕಾಡ್ ಸಾದಿಕ್ ಅಲಿ ಶಿಹಾಬ್ ತಂಙಳ್, ಶಾಸಕ ಉದಯ್ ಗರುಡಾಚಾರ್, ಕೆಪಿಸಿಸಿ ಮಾಜಿ ಕಾರ್ಯದರ್ಶಿ ಟಿ.ಎಂ. ಶಹೀದ್ ತೆಕ್ಕಿಲ್, ಸತ್ಯನ್ ಪುತ್ತೂರು, ಸಂಘಟನೆಯ ಮುಖ್ಯಸ್ಥರಾದ ನೌಷಾದ್, ಉಸ್ಮಾನ್, ಶಂಸುದ್ದೀನ್, ಮೊಹಿದ್ದೀನ್, ಸಲೀಂ ಟರ್ಲಿ ಇದ್ದರು.

ವಿತರಕರು ಬೇಕಾಗಿದ್ದಾರೆ

ಭಾರತದಲ್ಲಿ ಅಟೊಮೋಟಿವ್ ಹಾಗೂ ಇಂಡಸ್ಟ್ರಿಯಲ್ ಅಪ್ಲಿಕೇಶನ್ಸ್‌ನೊಂದಿಗೆ 1993ರಿಂದ ಕಾರ್ಯನಿರತ ವೈವಿಧ್ಯಮಯ ಉಪಸ್ಥಿತಿಯನ್ನು ಹೊಂದಿರುವ ಸಂಸ್ಥೆಯಾಗಿದೆ. ಇದರಲ್ಲಿ ELF, QUARTZ, HI-PERF, RUBIA ಮುಂತಾದ ಪ್ರಮುಖ ಲ್ಯೂಬ್ರಿಕಂಟ್ ಬ್ರಾಂಡ್‌ಗಳು ಮತ್ತು ವಿಶಾಲ ಶ್ರೇಣಿಯ GEAR OILS ಮತ್ತು GREASESಗಳು ಒಳಗೊಂಡಿವೆ.

ಮೈಸೂರು, ಬೆಂಗಳೂರು ಮತ್ತು ಕಾರವಾರ ಜಿಲ್ಲೆ ಮತ್ತು ಕೊಡಗು ಜಿಲ್ಲೆಗಳಲ್ಲಿ ಈ ಕೆಳಗಿನ ಮುಖ್ಯ ಸೌಲಭ್ಯ ಹೊಂದಿರುವ ಆಸಕ್ತ ಏಜೆನ್ಸಿಗಳು/ಪಾರ್ಟಿಗಳು ಡಿಸ್ಟ್ರಿಬ್ಯೂಟರ್‌ಶಿಪ್‌ಗಾಗಿ ಅರ್ಜಿಸಲ್ಲಿಬಹುದು.

- ಉತ್ತಮವಾದ ಆರ್ಥಿಕ ಸ್ಥಿತಿ ಹೊಂದಿರಬೇಕು
- ಮಾರುಕಟ್ಟೆಯಲ್ಲಿ ಉತ್ತಮ ಹೆಸರು ಇರಬೇಕು
- ಉತ್ಕೃಷ್ಟ ಸಂಪನ್ಮೂಗಳಾದ–ವೇರ್‌ಹೌಸ್, ಮ್ಯಾನ್ ಪವರ್ ಮತ್ತು ಮೂಲ ಸೌಕರ್ಯಗಳು ಅಗತ್ಯವಾಗಿದೆ
- ಅಟೊಮೊಬೈಲ್ Parts ಮತ್ತು Ancillaries ಗಳಲ್ಲಿನ ಅನುಭವ ಹೊಂದಿದ್ದರೆ ಹೆಚ್ಚು ಪ್ರಯೋಜನವಾಗುತ್ತದೆ

ದಯವಿಟ್ಟು ಇಲ್ಲಿ ಸಂಪರ್ಕಿಸಿರಿ:
TOLL FREE NO: 1800 102 3339
ಲಭ್ಯವಿರುವ ಸಮಯ: ಸೋಮ–ಶುಕ್ರ 9am - 6pm, ಶನಿ 9am - 3pm
ಇಮೈಲ್: customercare.india@totalenergies.com

TotalEnergies

Scan to connect.

ರಕ್ತದ ಆಕರಕೋಶ: ಬಾಲಕನಿಗೆ ಜರ್ಮನಿ ಯುವಕ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ತ ಹೀನತೆ ಸಮಸ್ಯೆಯಿಂದ ಬಳಲುತ್ತಿದ್ದ ನಗರದ 11 ವರ್ಷದ ಬಾಲಕನಿಗೆ ಜರ್ಮನಿಯ 26 ವರ್ಷದ ವ್ಯಕ್ತಿಯೊಬ್ಬರು ರಕ್ತದ ಆಕರ-ಕೋಶಗಳನ್ನು ದಾನ ಮಾಡಿದ್ದು, ಬಾಲಕ ಚೇತರಿಸಿಕೊಳ್ಳಲು ನೆರವಾಗಿದ್ದಾರೆ.

ಜಾಗತಿಕ ರಕ್ತದ ಆಕರಕೋಶ ದಾನಿಗಳ ನೋಂದಣಿ ಸೇವಾ ಸಂಸ್ಥೆ ‘ಡಿಕೆಎಂಎಸ್-ಬಿಎಂಎಸ್‌ಟಿ ಫೌಂಡೇಷನ್’ ಆಯೋಜಿಸಿದ್ದ ಆನ್‌ಲೈನ್ ಕಾರ್ಯಕ್ರಮದಲ್ಲಿ ಬಾಲಕ ಹಾಗೂ ರಕ್ತದ ಆಕರಕೋಶ ದಾನಿ ಪರಸ್ಪರ ಮುಖಾಮುಖಿಯಾದರು.

‘ತ್ವರಿತ್ ಹೆಸರಿನ ಬಾಲಕನ ದೇಹದಲ್ಲಿ ಅಗತ್ಯ ಪ್ರಮಾಣದಲ್ಲಿ ರಕ್ತದ ಜೀವಕೋಶಗಳು ಉತ್ಪಾದನೆಯಾಗುತ್ತಿರಲಿಲ್ಲ. ಚೇತರಿಸಿಕೊಳ್ಳಲು ರಕ್ತದ ಆಕರಕೋಶ ಕಸಿ ಅಗತ್ಯವಾಗಿತ್ತು. ಡುಕ್ ಫಾಮ್ ಎಂಗಾಕ್ ಎಂಬುವವರು ರಕ್ತದ ಆಕರಕೋಶ ದಾನಕ್ಕೆ ಆರು ವರ್ಷಗಳ ಹಿಂದೆಯೇ ಹೆಸರು ನೋಂದಾಯಿಸಿದ್ದರು. ಅವರ ರಕ್ತದ ಆಕರಕೋಶವು ಬಾಲಕನಿಗೆ ಹೊಂದಾಣಿಕೆಯಾಯಿತು’ ಎಂದು ಸಂಸ್ಥೆ ತಿಳಿಸಿದೆ.

‘ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಸಹಾಯಕ. ದಾನಿಗಳ ರಕ್ತದಿಂದ ಆಕರ ಕೋಶಗಳನ್ನು ಪಡೆದು, ಅಸ್ಥಿಮಜ್ಜೆ ಹಾಳಾಗಿರುವಂತಹ ರೋಗಿಗಳಿಗೆ ಕಸಿ ಮಾಡಲಾಗುತ್ತದೆ. ಇದು ಅಗತ್ಯವಿರುವಂತಹ ರೋಗಿಗಳ ಕುಟುಂಬದಲ್ಲಿ ಹೊಂದಾಣಿಕೆಯಾಗಬಲ್ಲ ದಾನಿಗಳು ಸಿಗುವುದು ಕಷ್ಟ’ ಎಂದು ಬಾಲಕನಿಗೆ ಚಿಕಿತ್ಸೆನೀಡಿದ ನಾರಾಯಣ ಹೆಲ್ತ್ ಸಿಟಿಯ ಡಾ. ಸುನಿಲ್ ಭಟ್ ತಿಳಿಸಿದ್ದಾರೆ.

ಡಿಕೆಎಂಎಸ್-ಬಿಎಂಎಸ್‌ಟಿ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್, ‘ಶೇ 30ರಷ್ಟು ರೋಗಿಗಳಿಗೆ ಮಾತ್ರ ಕುಟುಂಬದ ಸದಸ್ಯರು ಅಥವಾ ಸಂಬಂಧಿಗಳ ರಕ್ತದ ಆಕರ ಕೋಶ ಹೊಂದಾಣಿಕೆಯಾಗುತ್ತದೆ. ಶೇ 70ರಷ್ಟು ರೋಗಿಗಳಿಗೆ ರಕ್ತದ ಆಕರ ಕೋಶ ಹೊಂದಾಣಿಕೆಯಾಗುವ ದಾನಿಗಳನ್ನು ಹುಡುಕಬೇಕಾಗುತ್ತದೆ. ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಅತ್ಯಗತ್ಯ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಶಾಸಕ ಅರವಿಂದ ಲಿಂಬಾವಳಿ ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಕ್ಷೇತ್ರ ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರ ರೆಡ್ಡಿ, ಮುಖಂಡರಾದ ಹೂಡಿ ಮಂಜುನಾಥ್, ಜಯಚಂದ್ರಾರೆಡ್ಡಿ, ರಾಜಾ ರೆಡ್ಡಿ, ರಮೇಶ್ ಮತ್ತಿತರರು ಇದ್ದರು

ಸರ್ಕಾರದ ಯೋಜನೆ ಕಟ್ಟಕಡೆಯ ವ್ಯಕ್ತಿಗೆ ತಲುಪಲಿ: ಲಿಂಬಾವಳಿ

ಕೆ.ಆರ್.ಪುರ: ‘ಸರ್ಕಾರದ ಯೋಜನೆಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವಂತೆ ಮಾಡುವುದು ಪ್ರತಿಯೊಬ್ಬ ಕಾರ್ಯಕರ್ತನ ಜವಾಬ್ದಾರಿ’ ಎಂದು ಶಾಸಕ ಅರವಿಂದ ಲಿಂಬಾವಳಿ ತಿಳಿಸಿದರು.

ಕ್ಷೇತ್ರದ ದೊಡ್ಡನೆಕ್ಕುಂದಿಯಲ್ಲಿ ಏರ್ಪಡಿಸಿದ್ದ ಬಿಜೆಪಿ ಎಸ್.ಸಿ ಮೋರ್ಚಾ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಅವರು, ‘ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೆ ತರುವ ಜನಪರ ಯೋಜನೆಗಳನ್ನು ಪ್ರತಿ ಮನೆಗೆ, ಪ್ರತಿ ವ್ಯಕ್ತಿಗೆ ತಲುಪಿಸಲು ಕಾರ್ಯಕರ್ತರು ಶ್ರಮಿಸಬೇಕು.ಯೋಜನೆಗಳುಪ್ರತಿಮನೆಗೆತಲುಪಿದಾಗ ಮಾತ್ರ ಅಭಿವೃದ್ಧಿ ಸಾಧ್ಯ’ ಎಂದರು.

ಎಸ್.ಸಿ.ಮೋರ್ಚಾ ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಹೂಡಿ ಮಂಜುನಾಥ್, ಮಾತನಾಡಿದರು.

1,242 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಅಧಿಸೂಚನೆ

ಮತ್ತೆ ದೈಹಿಕ ಶಿಕ್ಷಣ ನಿರ್ದೇಶಕರ ಕಡೆಗಣನೆ

• ಕೆ.ಓಂಕಾರ ಮೂರ್ತಿ

ಮುಖ್ಯಾಂಶಗಳು

- 2009–2010ರಲ್ಲಿ ಕಡೆಯ ಬಾರಿ ನೇಮಕ
- ನೇಮಕಾತಿ ಕೈಗೆತ್ತಿಕೊಳ್ಳಲು ಆಕಾಂಕ್ಷಿಗಳ ಆಗ್ರಹ
- ರಾಷ್ಟ್ರೀಯ ಶಿಕ್ಷಣ ನೀತಿ ಅಡಿ ಪಠ್ಯಕ್ರಮ ರಚನೆ

ಮೈಸೂರು: ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಭರ್ತಿಗೆ ಉನ್ನತ ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿದ್ದು, ದೈಹಿಕ ಶಿಕ್ಷಣ ನಿರ್ದೇಶಕ ಹುದ್ದೆ ಆಕಾಂಕ್ಷಿಗಳನ್ನು ಮತ್ತೆ ಕಡೆಗಣಿಸಲಾಗಿದೆ.

12 ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳದಿರುವ ಬಗ್ಗೆ ಆಕ್ರೋಶ ವ್ಯಕ್ತವಾಗಿದೆ. 2009–10ರಲ್ಲಿ ನಡೆದ ನೇಮಕಾತಿಯೇ ಕೊನೆಯದ್ದು.

‘ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದಾಗ ಮಾತ್ರ ಅದರ ಶ್ರೇಯ ಪಡೆಯಲು ಪೈಪೋಟಿ ಏರ್ಪಡುತ್ತದೆ. ಆದರೆ, ಕ್ರೀಡಾಪಟುಗಳಿಗೆ ತರಬೇತಿ ನೀಡುವ ಬಗ್ಗೆ, ದೈಹಿಕ ಶಿಕ್ಷಣ ಶಿಕ್ಷಕರ ನೇಮಕ ಸಂಬಂಧ ಸರ್ಕಾರ ಯೋಚಿಸುವುದೇ ಇಲ್ಲ. ನೇಮಕಾತಿಯಲ್ಲಿ ತೋರುತ್ತಿರುವ ನಿರ್ಲಕ್ಷ್ಯವೇ ಅದಕ್ಕೆ ಸಾಕ್ಷಿ’ ಎಂದು ದೈಹಿಕ ಶಿಕ್ಷಣ ಸ್ನಾತಕೋತ್ತರ ಪದವೀಧರರು ಹಾಗೂ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕರು ಅಸಮಾಧಾನ ಹೊರಹಾಕಿದರು.

‘ಸುಮಾರು 400 ಅಭ್ಯರ್ಥಿಗಳು ಎಂಪಿಇಡಿ, ಪಿಎಚ್‌.ಡಿ ಪದವಿ ಪೂರೈಸಿ ಎನ್‌ಇಟಿ, ಕೆ–ಸೆಟ್ ಉತ್ತೀರ್ಣರಾಗಿ ಕಾಯುತ್ತಿದ್ದಾರೆ. ನೇಮಕಾತಿ ನಡೆಯದ ಕಾರಣ ಆಕ್ರೋಶ ಸಹಜ. ಸದ್ಯದಲ್ಲೇ 115 ಹುದ್ದೆ ಭರ್ತಿಗೆ ಕ್ರಮ ವಹಿಸುವ ಬಗ್ಗೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹಾಗೂ ಇಲಾಖೆ ಅಧಿಕಾರಿಗಳು ಭರವಸೆ ನೀಡಿದ್ದಾರೆ’ ಎಂದು ರಾಜ್ಯ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಅಧ್ಯಕ್ಷ ಆನಂದ್ ‘ಪ್ರಜಾವಾಣಿ’ಗೆ ತಿಳಿಸಿದರು.

> **ನೇಮಕಕ್ಕೆ ಒತ್ತಾಯಿಸಿದ್ದೇವೆ. ಹಣಕಾಸು ಇಲಾಖೆ ಅನುಮತಿಗಾಗಿ ಕಾಯುತ್ತಿರುವುದಾಗಿ ಸಚಿವರು ಹೇಳಿದ್ದಾರೆ. ನೇಮಕ ಮಾಡಿಕೊಳ್ಳುವ ನಿರೀಕ್ಷೆ ಇದೆ**
>
> **ಆನಂದ್,** ಅಧ್ಯಕ್ಷ, ರಾಜ್ಯ ದೈಹಿಕ ಶಿಕ್ಷಣ ನಿರ್ದೇಶಕರ ಸಂಘ

> **ಪದವಿ ಹಂತದಲ್ಲಿ ಕ್ರೀಡಾಪಟುಗಳಿಗೆ ತರಬೇತುದಾರರೇ ಇಲ್ಲದಿದ್ದರೆ ಎಲ್ಲರಿಗೂ ನಷ್ಟ. ದೈಹಿಕ ಶಿಕ್ಷಣ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವುದು ವಿಷಾದನೀಯ**
>
> **ಸದಾಶಿವ ಭಟ್,** ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ, ಮೈಸೂರು

ಮೈಸೂರು ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ವಿಷಯ ಕಡ್ಡಾಯ ಮಾಡಲಾಗಿದೆ. ರಾಜ್ಯದ ಹಲವು ಪದವಿ ಕಾಲೇಜುಗಳಲ್ಲಿ ಒಂದು ವಿಷಯವಾಗಿ ಬೋಧಿಸಲಾಗುತ್ತಿದೆ.

‘ವರ್ಷಗಳಿಂದ ನೇಮಕಾತಿ ನಡೆಯದೆ ಕೆಲವರ ವಯೋಮಿತಿ ಮೀರುತ್ತಿದೆ. ಈ ಬಾರಿಯಾದರೂ ನೇಮಕಾತಿ ಕೈಗೆತ್ತಿಕೊಳ್ಳಬೇಕು. ರಾಷ್ಟ್ರೀಯ ಶಿಕ್ಷಣ ನೀತಿ–2020 ಅಡಿ ದೈಹಿಕ ಶಿಕ್ಷಣ ಪಠ್ಯಕ್ರಮವನ್ನೂ ರೂಪಿಸಲಾಗುತ್ತಿದೆ. ಅದಕ್ಕೆ ಅಂತಿಮ ರೂಪ ಸಿಗಬೇಕಿದೆ. ವಿಷಯ ಆಯ್ಕೆಯನ್ನು ವಿದ್ಯಾರ್ಥಿಗಳ ಆಸಕ್ತಿಗೆ ಬಿಡಲಾಗುತ್ತದೆ’ ಎಂದು ಎನ್‌ಇಪಿ ಪಠ್ಯ ಕ್ರಮ ರಚನೆ ವಿಷಯ ತಜ್ಞರ ಸಮಿತಿ ಸದಸ್ಯೆ ಸಂಧ್ಯಾರಾಣಿ ತಿಳಿಸಿದರು.

‘ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಬೇಕೆಂದು ಎಲ್ಲರೂ ಬಯಸುತ್ತಾರೆ. ಆದರೆ, ತರಬೇತಿಗೆ ಒತ್ತು ನೀಡುತ್ತಿಲ್ಲ. ಸದೃಢ ಭಾರತಕ್ಕಾಗಿ ಫಿಟ್ ಇಂಡಿಯಾ ಅಭಿಯಾನ ಕೈಗೊಳ್ಳಲಾಗಿದೆ. ಅದಕ್ಕೆ ಮಾರ್ಗದರ್ಶಕರು ಇರಬೇಕಲ್ಲವೇ’ ಎಂದು ಮೈಸೂರು ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕ ಡಾ.ಸಿ.ಕೃಷ್ಣ ಪ್ರಶ್ನಿಸಿದರು.

ಪ್ರತಿಕ್ರಿಯೆ ಪಡೆಯಲು ಇಲಾಖೆ ಆಯುಕ್ತ ಪಿ.ಪ್ರದೀಪ್ ಅವರಿಗೆ ಕರೆ ಮಾಡಿದರೂ ಅವರು ಸ್ವೀಕರಿಸಲಿಲ್ಲ.

BIG DEALS ! BIGGER DISCOUNTS ! BIGGEST SAVINGS !

FURNITURE FAIR™

AN INTERIOR & HOME DECOR EXHIBITION

LAST 2 DAYS

27 | 28 | 29 | 30 AUGUST 2021
10.00 AM – 8.00 PM

JAYAMAHAL PALACE HOTEL
JAYAMAHAL PALACE ROAD,
NEAR CANTONMENT RAILWAY STATION, BENGALURU

CARVED SOFA SET | ETHNIC FURNITURE

BIGGEST SALE UPTO 70% OFF

MODERN SOFA SETS | ACCENT CHAIRS
IMPORTED & CONTEMPORARY SOFA SETS

LIVING ROOM SET
SECTIONAL SOFA
RECLINER SOFA SET

DINING SETS
SIDE BOARDS
CUPBOARD

BEDROOM SET | DRESSERS
ARMOIRES & WARDROBES
MATTRESSES

BRASS STATUES | ARTIFACTS | HOME DECOR

exhibitions_iadsnevents
iadsnevents

Covid-19 protocol followed inside the venue

+91 93425 77908
ENTRY FREE

AN EVENT BY iads & events

ಅತ್ಯಾಚಾರ ಪ್ರಕರಣ: ತಪ್ಪಿತಸ್ಥರಿಗೆ ಶಿಕ್ಷೆ– ಸಿ.ಎಂ ಬೊಮ್ಮಾಯಿ

ಹಾವೇರಿ: 'ಯಾರ್‍ಯಾರೋ ಹೇಳಿಕೆಗಳಿಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ನಮ್ಮ ಪೊಲೀಸರು ದಕ್ಷರಿದ್ದಾರೆ. ಮೈಸೂರಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ಭೇದಿಸಿ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುತ್ತಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹಿರೇಕೆರೂರು ತಾಲ್ಲೂಕಿನ ಬಸರೀಹಳ್ಳಿ ಹೆಲಿಪ್ಯಾಡ್‌ಗೆ ಹೆಲಿಕಾಪ್ಟರ್ ಮೂಲಕ ಬಂದಿಳಿದ ನಂತರ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು. 'ಬಿಜೆಪಿ ಸರ್ಕಾರದ ಆಡಳಿತದಲ್ಲಿ ಗಂಡಸರಿಗೂ ರಕ್ಷಣೆ ಇಲ್ಲ' ಎಂಬ ಡಿ.ಕೆ ಶಿವಕುಮಾರ್ ಹೇಳಿಕೆಗೆ ಅವರು ಮೇಲಿನಂತೆ ಪ್ರತಿಕ್ರಿಯಿಸಿದರು.

ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ನೀಡುವಂತೆ ಹಿಂದೂ ಸಂಘಟನೆಗಳು ಒತ್ತಾಯಿಸಿದ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, 'ಗಣೇಶೋತ್ಸವ ಆಚರಣೆ ವಿಚಾರದಲ್ಲಿ ಭಿನ್ನಾಭಿಪ್ರಾಯಗಳೇನೂ ಇಲ್ಲ. ಎಲ್ಲರೂ ಅವರವರ ಅಭಿಪ್ರಾಯ ಹೇಳಿದ್ದಾರೆ. ಆ.30ರಂದು ತಜ್ಞರ ಸಭೆ ಇದೆ. ಸಭೆಯಲ್ಲಿ ಚರ್ಚಿಸಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

'ಅತ್ಯಾಚಾರಿಗಳ ಎನ್‌ಕೌಂಟರ್ ಆಗಲಿ'

ಮೈಸೂರು: 'ಸಾಮೂಹಿಕ ಅತ್ಯಾಚಾರ ಘಟನೆಯಿಂದ ಇಡೀ ಮೈಸೂರು ತಲೆತಗ್ಗಿಸುವಂತಾಗಿದ್ದು, ಅತ್ಯಾಚಾರಿಗಳನ್ನು ಪೊಲೀಸರು ಎನ್‌ಕೌಂಟರ್ ಮಾಡಬೇಕು' ಎಂದು ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಆಗ್ರಹಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಇಂತಹ ಕಹಿ ಘಟನೆಗಳು ನಡೆದಾಗ ಎನ್‌ಕೌಂಟರ್ ಮಾಡುವ ದಿಟ್ಟತನವನ್ನು ಪೊಲೀಸರು ತೋರಿಸಬೇಕು. ಸರ್ಕಾರ ಆ ನಿಟ್ಟಿನಲ್ಲಿ ಸೂಕ್ತ ನಿರ್ದೇಶನ ಕೊಡಬೇಕು' ಎಂದರು.

ಐಡಿಬಿಐ ಬ್ಯಾಂಕ್
ನೋಂದಾಯಿತ ಕಛೇರಿ: ಐಡಿಬಿಐ ಟವರ್, ಡಬ್ಲ್ಯೂ.ಟಿ.ಸಿ ಕಾಂಪ್ಲೆಕ್ಸ್, ಕಫೆ ಪರೇಡ್, ಮುಂಬೈ–400005.
ದಯವಿಟ್ಟು ಗಮನಿಸಿ: ಐಡಿಬಿಐ ಬಾಂಡ್‌ಗಳನ್ನು ಹೊಂದಿರುವವರು – ರಿಡೆಂಪ್ಷನ್ ಪಾವತಿ
ಐಡಿಬಿಐ ಬ್ಯಾಂಕ್ ಸಂಬಂಧಪಟ್ಟ ಆಫರ್ ದಾಖಲೆಗಳಲ್ಲಿ (ಒ.ಡಿ) ... (1992), ... (1996), ... (1997), ... 7 (1999) ... www.idbibank.in ...
ಸಹಿ/–
ಅಧಿಕೃತ ಅಧಿಕಾರಿಗಳು

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಜೆ.ಎಲ್.ಬಿ.ರಸ್ತೆ, ಲಕ್ಷ್ಮೀಪುರಂ, ಮೈಸೂರು –570004
ಸಂಖ್ಯೆ : ಕೆಎಸ್‌ಜಿಎಚ್/ಸಂಪ್ರವ/01/2021–22 ದಿನಾಂಕ: 26.08.2021
ಪ್ರವೇಶ ಪ್ರಕಟಣೆ
ವಿಶ್ವವಿದ್ಯಾಲಯವು ರಾಷ್ಟ್ರೀಯ ಶಿಕ್ಷಣ ನೀತಿಯ 2020ರ ಅನ್ವಯ 2021–22ನೇ ಸಾಲಿನ ಪ್ರವೇಶಾತಿಗೆ ಸಂಗೀತ, ನೃತ್ಯ, ತಾಳವಾದ್ಯ, ನಾಟಕ ವಿಷಯಕ್ಕೆ ಸಂಬಂಧಿಸಿದಂತೆ ಬಿ.ಪಿ.ಎ., ಎಂ.ಪಿ.ಎ., ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸುಗಳ ಅಧ್ಯಯನಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ನಿಗದಿತ ಅರ್ಜಿ ನಮೂನೆಯನ್ನು ನೇರವಾಗಿ ಅಥವಾ ಅಂಚೆಯ ಮೂಲಕ ವಿಶ್ವವಿದ್ಯಾಲಯದ ಕಛೇರಿಯಿಂದ ಪಡೆದುಕೊಳ್ಳಬಹುದು.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ದೂರವಾಣಿ ಸಂಖ್ಯೆ: 0821–2419443, 2402141, 9035320690 7349366071 / 99006 29714
ಇಮೇಲ್ ವಿಳಾಸ : musicuniversitymys@gmail.com
ವೆಬ್‌ಸೈಟ್ ವಿಳಾಸ : www.musicuniversity.ac.in- Online Admission
ಸಹಿ/– ಕುಲಸಚಿವರು

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ
ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ – 587 103
ದೂರವಾಣಿ : 08354–235776 ಇ–ಮೇಲ್: dudc_bgk@yahoo.co.in, itstaffdudc_bagalkote@yahoo.co.in
ಸಂಖ್ಯೆ :ಜನಕೋಶ/ಎಲ್.ಇ.ಡಿ./ಎಂ/2021–22 ದಿ: 27–08–2021
ಟೆಂಡರ್ ಪ್ರಕಟಣೆ
E-Procurement Portal ಮುಖಾಂತರ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬೀದಿ ದೀಪಗಳ ಸಾರ್ವಜನಿಕ ಖಾಸಗಿ / ಕಂಪನಿ ಮುಖಾಂತರ ವಾರ್ಷಿಕ ನಿರ್ವಹಣೆ ಕುರಿತು ನೊಂದಾಯಿತ ಕಂಪನಿಗಳಿಂದ (e-portal:https://eproc.karnataka.gov.in) ಹಾಗೂ (INDENT No : DUDC/BGK/TECHNICAL/CCMS/LED2021-22/01) Service ನಲ್ಲಿ ಟೆಂಡರನ್ನು ಆಹ್ವಾನಿಸಲಾಗುತ್ತದೆ.
ಸೂಚನೆಗಳು :
1) Venue, Date and time of Pre-Bid Meeting DUDC, Dc Office Bagalkot : 27.09.2021.
2) Last date and time for receiving queries : 04.10.2021
3) Last date and time Prescribed for Submission of Bid (s) Bid due Date : 11.10.2021.
4) Date and time of Opening of the Techinical Bid (s) : 13.10.2021
5) Date and time of Opening of the Financial Bid(s) of Technically qualified bidder(s) : 27.10.2021
6) Validity of Bids (Days) : 180
ಸಹಿ/–ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ
ಕ.ಟಿ.ಜಿ.ಅ. :
ವಾ.ಸಾ.ಇ/ಬಾಗಲಕೋಟ/254/2021–22/ದೇಶಪಾಂಡೆಪಬ್ಲಿಸಿಟಿ
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅತ್ಯಾಚಾರ ಪ್ರಕರಣದ ತನಿಖೆ: ಪೊಲೀಸರಿಗೆ ಪೂರ್ಣ ಸ್ವಾತಂತ್ರ್ಯ ಸಿಗಲಿ

ನ್ಯಾಯದಾನ ವಿಳಂಬ ಆಗದಿರಲಿ

ಬೆಂಗಳೂರು: 'ಅತ್ಯಾಚಾರವು ಪಿಡುಗಿನ ರೀತಿಯಲ್ಲಿ ವ್ಯಾಪಿಸುತ್ತಿದೆ. ವಿಕೃತ ಮನಸ್ಥಿತಿಯವರು ಇಂತಹ ದುಷ್ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾರೆ. ನ್ಯಾಯಿಕ ಪ್ರಕ್ರಿಯೆಯಲ್ಲಿರುವ ಲೋಪಗಳು ಹಾಗೂ ನ್ಯಾಯಾಲಯದ ಕೆಲ ತೀರ್ಪುಗಳಿಂದಾಗಿ ಇಂತಹ ಚಟುವಟಿಕೆಗಳು ಹೆಚ್ಚುತ್ತಿವೆ. ರಾಜಕಾರಣಿಗಳು ಪೊಲೀಸ್ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡುತ್ತಿರುವುದೂ ಇದಕ್ಕೆ ಕಾರಣ...

'ಅತ್ಯಾಚಾರ: ಏಕೆ ಹೆಚ್ಚುತ್ತಿದೆ? ತಡೆಯುವುದು ಹೇಗೆ? ವಿಷಯದ ಕುರಿತು ಶನಿವಾರ ನಡೆದ 'ಪ್ರಜಾವಾಣಿ ಸಂವಾದ'ದಲ್ಲಿ ವ್ಯಕ್ತವಾದ ಅಭಿಪ್ರಾಯಗಳಿವು. 'ವರ್ಮಾ ಸಮಿತಿ ಹಾಗೂ ಉಗ್ರಪ್ಪ ಸಮಿತಿ ನೀಡಿರುವ ವರದಿಗಳನ್ನು ಅಂಗೀಕರಿಸುವ ಇಚ್ಛಾಶಕ್ತಿಯನ್ನು ಸರ್ಕಾರ ತೋರಬೇಕು. ಅತ್ಯಾಚಾರಿಗಳಿಗೆ ಅತ್ಯಂತ ಕಠಿಣವಾದ ಶಿಕ್ಷೆಯಾಗಬೇಕು. ಮಕ್ಕಳಿಗೆ ಚಿಕ್ಕಂದಿನಿಂದಲೇ ಸಮಾನತೆಯ ಪಾಠ ಹೇಳಿಕೊಡಬೇಕು. ಅತ್ಯಾಚಾರ ಪ್ರಕರಣಗಳು ನಡೆದಾಗ ಪಕ್ಷಾತೀತವಾಗಿ ಧ್ವನಿ ಎತ್ತುವ ಕೆಲಸ ಆಗಬೇಕು' ಎಂಬ ಸಲಹೆಗಳೂ ಮೂಡಿಬಂದವು.

ಪೂರ್ಣ ಸಂವಾದ ವೀಕ್ಷಿಸಲು: https://bit.ly/3Bmg3yk

'ಸಂತ್ರಸ್ತರನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲಾಗುತ್ತದೆ'

'ಸಂತ್ರಸ್ತರನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ, ಅವರಿಗೆ ಕಟ್ಟುಪಾಡು ಹಾಗೂ ನಿರ್ಬಂಧಗಳನ್ನು ವಿಧಿಸುವ ಮನಸ್ಥಿತಿಯು ಪರೋಕ್ಷವಾಗಿ ಅತ್ಯಾಚಾರ ಪ್ರಕರಣಗಳಿಗೆ ದಾರಿ ಮಾಡಿಕೊಡುತ್ತಿದೆ. ಅಪರಾಧಿಗಳು ಬಡ ಹಾಗೂ ಕೂಲಿ ಕಾರ್ಮಿಕರ ಮಕ್ಕಳಾದರೆ ಬೇಗನೆ ಶಿಕ್ಷೆಯಾಗುತ್ತದೆ. ಪ್ರಭಾವಿಗಳ ವಿಚಾರದಲ್ಲಿ ಮೃದು ಧೋರಣೆ ತಳೆಯಲಾಗುತ್ತದೆ. ಇದು ವ್ಯವಸ್ಥೆಯ ಮನಸ್ಥಿತಿಯ ಪ್ರತಿಬಿಂಬ'.

'ನಿರ್ದಿಷ್ಟವಾಗಿ ಒಂದು ಇಲಾಖೆಯತ್ತ ಬೊಟ್ಟು ಮಾಡುವ ಬದಲು ಇಡಿ ವ್ಯವಸ್ಥೆಯನ್ನೇ ಬದಲಿಸಬೇಕು. ಅತ್ಯಾಚಾರದ ಆರೋಪ ಹೊತ್ತಿರುವ ವ್ಯಕ್ತಿಗೆ ಜನಪ್ರತಿನಿಧಿಗಳೇ ಶಾಲು ಹೊದಿಸಿ ಸನ್ಮಾನ ಮಾಡಿ ಬಂದಿರುವುದನ್ನು ನೋಡಿದ್ದೇವೆ. ಈ ಮೂಲಕ ಸಮಾಜಕ್ಕೆ ಅವರು ರವಾನಿಸುವ ಸಂದೇಶವೇನು. ಅತ್ಯಾಚಾರದ ಆರೋಪಿ ಯಾರೇ ಆಗಿದ್ದರು ಆತನನ್ನು ನ್ಯಾಯಾಲಯದ ಕಟಕಟೆಗೆ ಎಳೆದುತರಲು ಪೊಲೀಸರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು'.

–**ಕೆ.ಎಸ್.ವಿಮಲಾ,** ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ

'ನಾಗರಿಕ ಸಮಾಜವೇ ತಲೆ ತಗ್ಗಿಸುವಂತಹದ್ದು'

'ಮೈಸೂರಿನಲ್ಲಿ ನಡೆದ ಪ್ರಕರಣವು ನಾಗರಿಕ ಸಮಾಜ ತಲೆ ತಗ್ಗಿಸುವಂತಹದ್ದು. ಹೆಣ್ಣಿನ ಬಗ್ಗೆ ಕಾಮುಕ ಯೋಚನೆ ಮೂಡಿದರೆ ಅದೊಂದು ಮಾನಸಿಕ ಅಪರಾಧ. ಹೆಣ್ಣನ್ನು ತಾಯಿ ಎಂದು ಆರಾಧಿಸುವ ದೇಶ ನಮ್ಮದು. ಇಂತಹ ಅಮಾನವೀಯ ಕೃತ್ಯಗಳನ್ನು ಈ ದೇಶ ಎಂದಿಗೂ ಒಪ್ಪಿಲ್ಲ'.

'ಅತ್ಯಾಚಾರಿಗಳಿಗೆ ಸುಲಭವಾಗಿ ಜಾಮೀನು ಸಿಗುತ್ತಿದೆ. ಅವರಿಗೆ ಉಗ್ರ ಶಿಕ್ಷೆಯಾಗಲಿ. ಕಾನೂನಿನಲ್ಲಿ ಏನಾದರು ಲೋಪಗಳಿದ್ದರೆ ಸರಿಪಡಿಸುವ ಕೆಲಸ ಆಗಬೇಕು. ಲಕ್ಷಾಂತರ ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇವೆ. ಅವುಗಳು ಶೀಘ್ರವಾಗಿ ಇತ್ಯರ್ಥವಾಗಬೇಕು'.

'ಬಿಜೆಪಿ ಅಧಿಕಾರದಲ್ಲಿರುವಾಗಲೇ ಅಸಾರಾಂ ಬಾಪು ಸೇರಿದಂತೆ ಕೆಲ ಸ್ವಾಮೀಜಿಗಳನ್ನು ಜೈಲಿಗೆ ಹಾಕಲಾಗಿದೆ. ಅತ್ಯಾಚಾರಿಗೆ ಜಾತಿ, ಧರ್ಮ ಇಲ್ಲ. ಅತ್ಯಚಾರಿ ಅತ್ಯಾಚಾರಿಯೇ. ಉಗ್ರಪ್ಪ ಸಮಿತಿ ನೀಡಿರುವ ವರದಿಯನ್ನು ಸದನದಲ್ಲಿ ಮಂಡಿಸುವ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡಲಿದೆ'.

ಗೋ.ಮಧುಸೂದನ್, ಬಿಜೆಪಿ ಮುಖಂಡ

ಸಂವಾದ

'ಕಾನೂನು ಬಿಗಿಗೊಳಿಸಬೇಕು'

'ಅತ್ಯಾಚಾರದಂತಹ ಪ್ರಕರಣಗಳಿಗೆ ಕಡಿವಾಣ ಹಾಕಬೇಕಾದರೆ ಮೊದಲು ಕಾನೂನು ಬಿಗಿಗೊಳಿಸಬೇಕು. ಇದು ಆಡಳಿತಾರೂಢ ಸರ್ಕಾರಗಳ ಜವಾಬ್ದಾರಿ. ಅತಿ ಸುರಕ್ಷಿತ ನಗರಿ ಎಂಬ ಹಣೆಪಟ್ಟಿ ಹೊಂದಿರುವ ಮೈಸೂರಿನಲ್ಲಿ ಈ ರೀತಿಯ ಘಟನೆ ನಡೆದಿರುವುದು ದುರಂತ. ಸಮಾಜದಲ್ಲಿ ಗಂಡು ಮತ್ತು ಹೆಣ್ಣು ಎಂಬ ತಾರತಮ್ಯ ಇದೆ. ಸಂಪ್ರದಾಯದ ಕಟ್ಟುಪಾಡುಗಳ ಬೇಲಿಯೊಳಗೆ ಹೆಣ್ಣು ಮಕ್ಕಳನ್ನು ಬಂದಿಸುತ್ತಿದ್ದೇವೆ. ಇಂತಹ ಬೆಳವಣಿಗೆಗಳನ್ನು ಗಮನಿಸಿದರೆ ನಮ್ಮಲ್ಲಿ ತಾಲಿಬಾನ್ ಆಡಳಿತ ಇದೆಯೇ ಎಂಬ ಅನುಮಾನ ಮೂಡುತ್ತದೆ'.

'ಮೈಸೂರಿನ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಲು ಪೊಲೀಸರು 17 ಗಂಟೆ ತಡ ಮಾಡಿದ್ದಾರೆ. ಸರ್ಕಾರದ ನೀತಿ ಹಾಗೂ ನಿರ್ಲಕ್ಷ ಇಂತಹ ಪ್ರಕರಣಗಳು ಹೆಚ್ಚಲು ಕಾರಣ. ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳನ್ನು ನಿಯಂತ್ರಿಸುವಂತೆ ಪತ್ರಕರ್ತರೊಬ್ಬರು 20 ದಿನಗಳ ಹಿಂದೆಯೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಪತ್ರ ಬರೆದಿದ್ದರು. ಆಗ ಸೂಕ್ತ ಕ್ರಮ ಕೈಗೊಂಡಿದ್ದರೆ ಇಂತಹ ಘಟನೆ ನಡೆಯುತ್ತಿರಲಿಲ್ಲ'.

–**ಪುಷ್ಪಾ ಅಮರನಾಥ್,** ಕೆಪಿಸಿಸಿ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ.

'ರಾಜಕೀಯ ಹಸ್ತಕ್ಷೇಪ ನಿಲ್ಲಲಿ'

'ಅತ್ಯಾಚಾರದಂತಹ ಪ್ರಕರಣಗಳು ನಡೆದ ಬಳಿಕ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಬಾಲಿಶ ಹಾಗೂ ಅಪ್ರಬುದ್ಧ ಹೇಳಿಕೆ ನೀಡುವುದು ನಿಲ್ಲಬೇಕು'.

'ಅಪರಾಧಿಗಳನ್ನು ಪತ್ತೆ ಮಾಡುವುದು ಅಷ್ಟೇನು ಕಷ್ಟವಲ್ಲ. ಆದರೆ ಅಪರಾಧ ತಡೆಗಟ್ಟುವ ಕೆಲಸ ಆಗಬೇಕು. ಸಾರ್ವಜನಿಕರಿಗೆ ಪೊಲೀಸರ ಮೇಲೆ ನಂಬಿಕೆ ಬರುವ ರೀತಿಯಲ್ಲಿ ಕೆಲಸ ಮಾಡಬೇಕು. ಅಧಿಕಾರಿಗಳು ಈಗ ಸ್ಥಳೀಯ ರಾಜಕಾರಣಿಗಳ ಶಿಫಾರಸಿನ ಆಧಾರದಲ್ಲಿ ಹುದ್ದೆ ಪಡೆಯುತ್ತಿದ್ದಾರೆ. ಹೀಗಾಗಿ ಅವರ ಮರ್ಜಿಯಲ್ಲೇ ಕೆಲಸ ಮಾಡಬೇಕಾಗುತ್ತದೆ. ಇದರಿಂದ ಪೊಲೀಸರು ಅಪರಾಧ ಲೋಕದ ಮೇಲಿನ ನಿಯಂತ್ರಣ ಕಳೆದುಕೊಳ್ಳುತ್ತಾರೆ'.

'ಅಸ್ಸಾಂನಲ್ಲಿ ನಡೆದ ಪ್ರಕರಣವೊಂದರಲ್ಲಿ ಅಲ್ಲಿನ ಹೈಕೋರ್ಟ್ ಆರೋಪಿಗೆ ಜಾಮೀನು ಮಂಜೂರು ಮಾಡಿತ್ತು. ಐಐಟಿ ಓದುತ್ತಿರುವ ಆ ಆರೋಪಿ ದೇಶದ ಆಸ್ತಿ ಎಂದು ನ್ಯಾಯಾಲಯವೇ ಹೇಳಿದ್ದು ದೊಡ್ಡ ದುರಂತ. ಸಾಕ್ಷಿದಾರರನ್ನು ಹತ್ಯೆ ಮಾಡಿರುವ, ಫಿರ್ಯಾದುದಾರರ ಮೇಲೆ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿರುವ ಘಟನೆಗಳೂ ನಡೆದಿವೆ. ಇದು ತಪ್ಪಬೇಕಾದರೆ ತ್ವರಿತಗತಿಯಲ್ಲಿ ವಿಚಾರಣೆ ನಡೆಸಿ ತೀರ್ಪು ನೀಡುವಂತಹ ವ್ಯವಸ್ಥೆ ನಿರ್ಮಾಣವಾಗಬೇಕು'.

–**ಬಿ.ಕೆ.ಶಿವರಾಂ,** ನಿವೃತ್ತ ಪೊಲೀಸ್ ಅಧಿಕಾರಿ.

ಉತ್ತಮ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ಮಡಿಕೇರಿ, ತಲಕಾವೇರಿ, ನಾಪೋಕ್ಲು, ಮೂರ್ನಾಡು, ಗಾಳಿಬೀಡು, ಕಾಲೂರು ಭಾಗದಲ್ಲಿ ಶನಿವಾರ ಮಧ್ಯಾಹ್ನ ಉತ್ತಮ ಮಳೆಯಾಗಿದೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಹಲವೆಡೆಯೂ ಮಳೆಯಾಗಿದೆ.

ಅತ್ಯಾಚಾರ: ಐವರು ಆರೋಪಿಗಳ ಬಂಧನ

ಒಂದನೇ ಪುಟದಿಂದ

'ತಾಂತ್ರಿಕ ಮತ್ತು ವೈಜ್ಞಾನಿಕ ಸಾಕ್ಷ್ಯಾಧಾರಗಳ ಮೇಲೆ ಆರೋಪಿಗಳನ್ನು ತಿರುಪ್ಪುರ್‌ನಲ್ಲಿ ಬಂಧಿಸಲಾಗಿದೆ. ಆರೋಪಿಗಳ ಪೈಕಿ ಒಬ್ಬ ಬಾಲಕನಿದ್ದು, ವಯಸ್ಸು ಎಷ್ಟೆಂದು ಗೊತ್ತಾಗಿಲ್ಲ' ಎಂದು ಅವರು ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರವೀಣ್ ಸೂದ್

'ಸಂತ್ರಸ್ತೆಯನ್ನು ಇನ್ನೂ ವಿಚಾರಣೆ ಮಾಡಲು ಆಗಿಲ್ಲ. ಆಕೆಯ ಗೆಳೆಯ ಸಂಪೂರ್ಣ ಮಾಹಿತಿ ನೀಡಿಲ್ಲ. ಆದರೂ 7 ವಿಶೇಷ ಪೊಲೀಸ್ ತಂಡಗಳು ಹಗಲಿರುಳು ಸಾಕ್ಷ್ಯಾಧಾರಗಳನ್ನು ಕಲೆ ಹಾಕಿ ಆರೋಪಿಗಳನ್ನು ಬಂಧಿಸಿವೆ. ಇನ್ನಾದರೂ ಸಂತ್ರಸ್ತೆಯು ವಿಚಾರಣೆಗೆ ಸಹಕರಿಸಬಹುದು ಎಂಬ ನಿರೀಕ್ಷೆ ಇದೆ' ಎಂದರು.

'ಆರೋಪಿಗಳಲ್ಲಿ ಕೆಲವರು 7, 8ನೇ ತರಗತಿ ಓದಿದವರಿದ್ದಾರೆ. ಕೆಲವರು ಅನಕ್ಷರಸ್ಥರು. ಅವರೆಲ್ಲ ತಮಿಳುನಾಡಿನಲ್ಲಿ ವೈರಿಂಗ್, ಮರಗೆಲಸ, ಚಾಲಕ ವೃತ್ತಿ ಮಾಡುತ್ತಿದ್ದಾರೆ. ಆಗಾಗ್ಗೆ ಇಲ್ಲಿ ಬಂದು ಬೆಟ್ಟದ ತಪ್ಪಲಿನಲ್ಲಿ ಮದ್ಯ ಸೇವಿಸುತ್ತಿದ್ದರು. ಘಟನೆ ನಡೆದ ದಿನ ಬಂದ ಅವರು, ಮೊದಲಿಗೆ ದರೋಡೆಗೆ ಯತ್ನಿಸಿದ್ದರು. ₹ 3 ಲಕ್ಷಕ್ಕಾಗಿ ಆಗ್ರಹಿಸಿದ್ದರು. ಹಣ ದೊರಕದಿದ್ದಾಗ ಅತ್ಯಾಚಾರ ಎಸಗಿದ್ದರು. ಹಣಕ್ಕಾಗಿ ಆಗ್ರಹಿಸಿದ್ದು ಬ್ಲ್ಯಾಕ್‌ಮೇಲ್ ಅಲ್ಲ' ಎಂದು ಹೇಳಿದರು.

'ಆರೋಪಿಗಳಲ್ಲಿ ಕೆಲವರು ಕ್ರಿಮಿನಲ್ ಹಿನ್ನೆಲೆಯುಳ್ಳವರಾಗಿದ್ದು, ವಿವರ ಸಂಗ್ರಹಿಸಲಾಗುತ್ತಿದೆ. ತಮಿಳುನಾಡಿನಿಂದ ನಗರದ ಎಪಿಎಂಸಿ ಮಾರುಕಟ್ಟೆಗೆ ಅವರು ಒಟ್ಟಾಗಿಯೇ ತರಕಾರಿ ಸಾಗಿಸುತ್ತಿದ್ದರು. ಅವರು ಅತ್ಯಾಚಾರಕ್ಕೆ ಯೋಜನೆ ರೂಪಿಸಿದ್ದರೇ ಅಥವಾ ಆಕಸ್ಮಿಕವಾಗಿ ಅತ್ಯಾಚಾರ ಮಾಡಿದರೇ ಎಂದು ಹೇಳಲು ಸಾಧ್ಯವಿಲ್ಲ' ಎಂದರು.

'ಮೈಸೂರು ಈಗಲೂ ಅತ್ಯಂತ ಸುರಕ್ಷಿತ ನಗರ. ಒಂದೆರಡು ಘಟನೆಗಳಿಂದ ಅಸುರಕ್ಷಿತ ಎನ್ನಲಾಗದು. ಪ್ರಕರಣಕ್ಕೆ ಸಂಬಂಧಿಸಿ ವಿಶೇಷ ವಕೀಲರನ್ನು ನೇಮಿಸಿ ಹೈಕೋರ್ಟ್‌ನಲ್ಲಿ ತ್ವರಿತ ವಿಚಾರಣೆ ನಡೆಸುವಂತೆ ಕೋರಲಾಗುವುದು' ಎಂದು ತಿಳಿಸಿದರು.

'ಎಡಿಜಿಪಿ ಪ್ರತಾಪರೆಡ್ಡಿ 4 ದಿನಗಳಿಂದ ನಗರದಲ್ಲೇ ವಾಸ್ತವ್ಯ ಹೂಡಿ ತನಿಖೆ ಮೇಲುಸ್ತುವಾರಿ ವಹಿಸಿದ್ದರು. ದಕ್ಷಿಣ ವಲಯ ಪೊಲೀಸರು ಅತ್ಯಂತ ವೇಗವಾಗಿ ಹಾಗೂ ನಿಖರವಾಗಿ ತನಿಖೆ ನಡೆಸಿದ್ದಾರೆ. ತನಿಖಾ ತಂಡಕ್ಕೆ ₹ 5 ಲಕ್ಷ ಬಹುಮಾನ ಘೋಷಿಸಲಾಗಿದೆ' ಎಂದರು.

ಇದಕ್ಕೂ ಮುನ್ನ ಪೊಲೀಸರು ನಾಲ್ವರು ಎಂಜಿನಿಯರಿಂಗ್ ವಿದ್ಯಾರ್ಥಿಗಳ ಮೇಲೆ ಶಂಕೆ ವ್ಯಕ್ತಪಡಿಸಿದ್ದರು. ಅವರು ಘಟನೆ ನಡೆದ ಮರುದಿನ ಕೇರಳಕ್ಕೆ ತೆರಳಿದ್ದು, ಅವರ ಮೊಬೈಲ್ ಲೊಕೇಶನ್ ಸಹ ಘಟನಾ ಸ್ಥಳದಲ್ಲಿ ಪತ್ತೆಯಾಗಿತ್ತು ಎನ್ನಲಾಗಿತ್ತು.

'ವಿದ್ಯಾರ್ಥಿನಿಯರ ಓಡಾಟ ನಿಷೇಧ ಸುತ್ತೋಲೆ ವಾಪಸ್'

ಬೆಂಗಳೂರು: 'ಮೈಸೂರಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ಕಾರಣಕ್ಕೆ ವಿಶ್ವವಿದ್ಯಾಲಯದ ಪ್ರಾಂಗಣದಲ್ಲಿ ಸಂಜೆ 6.30ರ ನಂತರ ವಿದ್ಯಾರ್ಥಿನಿಯರ ಓಡಾಟ ನಿಷೇಧಿಸಿ ಮೈಸೂರು ವಿಶ್ವವಿದ್ಯಾಲಯ ಹೊರಡಿಸಿದ್ದ ಸುತ್ತೋಲೆ ವಾಪಸ್ ಪಡೆಯಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು. ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಸುತ್ತೋಲೆ ವಾಪಸ್ ಪಡೆಯುವಂತೆ ಕುಲಪತಿ ಪ್ರೊ. ಹೇಮಂತಕುಮಾರ್ ಅವರಿಗೆ ಸೂಚಿಸಿದ್ದೇನೆ' ಎಂದರು.

'ವಿಶ್ವವಿದ್ಯಾಲಯಗಳ ಪ್ರಾಂಗಣಗಳು ಸಾಮಾನ್ಯವಾಗಿ ವಿಶಾಲವಾಗಿರುತ್ತವೆ. ಹಾಗೆಂದು, ವಿದ್ಯಾರ್ಥಿನಿಯರು ಓಡಾಡದಂತೆ ನಿರ್ಬಂಧ ಹೇರುವುದು ಸರಿಯಲ್ಲ. ಅದರ ಬದಲಿಗೆ ರಕ್ಷಣಾ ಕ್ರಮಗಳನ್ನು ಕೈಗೊಂಡು ಸುರಕ್ಷಿತ ಪ್ರಾಂಗಣ ರೂಪಿಸುವಂತೆ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಸೂಚಿಸಲಾಗುವುದು' ಎಂದರು.

'ಅತ್ಯಾಚಾರ ಘಟನೆ ಖಂಡನೀಯ. ಈ ಘಟನೆಯ ಕಾರಣಕ್ಕೆ ಹೆಣ್ಣು ಮಕ್ಕಳ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದು ಬೇಡ. ಅವರ ಸ್ವಾತಂತ್ರ್ಯಕ್ಕೆ ಚ್ಯುತಿ ಆಗದಂತೆ ರಕ್ಷಣೆ ನೀಡುವ ಜವಾಬ್ದಾರಿ ನಮ್ಮದು. ತಂತ್ರಜ್ಞಾನ ಬಳಕೆ ಮಾಡಿಕೊಂಡು ಮತ್ತಷ್ಟು ಬಿಗಿ ಕ್ರಮ ಕೈಗೊಳ್ಳಲಾಗುವುದು' ಎಂದರು.

'ವ್ಯಾಪಕ ನಿಗಾ ಇರಿಸುವುದರ ಜತೆಗೆ, ಭದ್ರತಾ ಸಿಬ್ಬಂದಿ ಗಸ್ತು ತಿರುಗಬೇಕು. ಅಗತ್ಯವಾದ ಕಡೆ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಈ ಬಗ್ಗೆ ಕುಲಪತಿಗಳಿಗೆ ನಿರ್ದೇಶನ ನೀಡಲಾಗುವುದು' ಎಂದರು.

ಕುಲಪತಿಗಳ ಜತೆ ಚರ್ಚೆ: 'ಲಭ್ಯವಿರುವ ತಂತ್ರಜ್ಞಾನವನ್ನು ಬಳಸಿಕೊಂಡು ಭದ್ರತೆ ಮತ್ತು ನಿಗಾ ಹೆಚ್ಚಿಸಲು ಏನೇನು ಮಾಡಬಹುದು ಎಂಬ ಬಗ್ಗೆ ತಜ್ಞರ ಅಭಿಪ್ರಾಯ ಪಡೆಯಲಾಗುವುದು. ಸಂಬಂಧಿಸಿದ ಇಲಾಖೆ ಮತ್ತು ಎಲ್ಲ ಕುಲಪತಿಗಳ ಜತೆ ಈ ಬಗ್ಗೆ ಚರ್ಚೆ ನಡೆಸುತ್ತೇನೆ' ಎಂದೂ ಸಚಿವರು ತಿಳಿಸಿದರು.

'ವಿದ್ಯಾರ್ಥಿಗಳ ಪಾತ್ರವಿಲ್ಲ'

ಮೈಸೂರು: 'ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಶಂಕಿತ ನಾಲ್ವರು ಎಂಜಿನಿಯರಿಂಗ್ ವಿದ್ಯಾರ್ಥಿಗಳ ಪಾತ್ರವಿಲ್ಲ' ಎಂದು ಮೂಲಗಳು ತಿಳಿಸಿವೆ.

ಆದರೆ ಈಗ ಬಂಧಿಸಲಾಗಿರುವ ಆರೋಪಿಗಳ ಆರ್ಥಿಕ ಸ್ಥಿತಿಗತಿಗೂ, ಪೊಲೀಸರಿಗೆ ಸ್ಥಳದಲ್ಲಿ ದೊರಕಿರುವ ದುಬಾರಿ ಬೆಲೆಯ ಮದ್ಯದ ಬಾಟಲಿಯ ಸಾಕ್ಷ್ಯಕ್ಕೂ ಹೋಲಿಕೆಯಾಗದೇ ಇರುವುದು ಪ್ರಶ್ನೆಗಳನ್ನು ಮೂಡಿಸಿದೆ. ದುಬಾರಿ ಬೆಲೆಯ ಮದ್ಯದ ಬಾಟಲಿಯನ್ನು ಬೆಂಗಳೂರಿನ ಯಲಹಂಕದಲ್ಲಿರುವ ಮದ್ಯದಂಗಡಿಯಿಂದ ಖರೀದಿಸಲಾಗಿತ್ತು. ಅಲ್ಲಿನ ಸಿಸಿಟಿವಿ ದೃಶ್ಯಾವಳಿಗಳನ್ನೂ ಪೊಲೀಸರು ಪರಿಶೀಲಿಸಿದ್ದರು.

ಲಸಿಕೆ ಪಡೆಯದ್ದಕ್ಕೆ ಕಡ್ಡಾಯ ರಜೆ ಶಿಕ್ಷೆ

ಕಲಬುರ್ಗಿ: ಕೋವಿಡ್ ಲಸಿಕೆ ಪಡೆಯದೇ ಕರ್ತವ್ಯಕ್ಕೆ ಹಾಜರಾಗಲು ಬಂದ ಜೇವರ್ಗಿ ತಾಲ್ಲೂಕಿನ ಸೊನ್ನ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಸುಭಾಷ್ಚಂದ್ರ ಅವರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಯ್ಯ ಇನಾಮದಾರ ಕಡ್ಡಾಯ ರಜೆ ಶಿಕ್ಷೆ ನೀಡಿದ್ದಾರೆ.

ಹೊರವಲಯದಲ್ಲಿ ಕಾಣುವ ಜೋಡಿಗಳೇ ಗುರಿ

ಮೈಸೂರಿಗೆ ಬಂದಾಗಲೆಲ್ಲಾ ಅತ್ಯಾಚಾರ, ದರೋಡೆ!

• ಕೆ.ಎಸ್.ಗಿರೀಶ

ಮೈಸೂರು: ಚಾಮುಂಡಿ ಬೆಟ್ಟದ ತಪ್ಪಲಿನ ಲಲಿತಾದ್ರಿಪುರದಲ್ಲಿ ಅತ್ಯಾಚಾರ ನಡೆಸಿ ಸಿಕ್ಕಿಬಿದ್ದ ಆರೋಪಿಗಳು ಎರಡು ವರ್ಷದಿಂದಲೂ ತಪ್ಪಲಿನಲ್ಲಿ ಯುವ ಜೋಡಿಗಳನ್ನು ಪೀಡಿಸಿದ್ದಾರೆ. ಅವರ ಬಳಿ ಸಿಕ್ಕಿದ್ದನ್ನೆಲ್ಲ ದೋಚಿದ್ದಾರೆ. ವಯಸ್ಸಿನ ವ್ಯತ್ಯಾಸವನ್ನೇ ನೋಡದೆ ಮಹಿಳೆಯರು, ಯುವತಿಯರ ಮೇಲೆ ಲೈಂಗಿಕ ದೌರ್ಜನ್ಯವನ್ನೂ ಎಸಗಿದ್ದಾರೆ ಎಂಬ ಸಂಗತಿ ಪೊಲೀಸರ ತನಿಖೆಯಿಂದ ಬಹಿರಂಗವಾಗಿದೆ.

ಇಂಥ ಪ್ರಕರಣಗಳಲ್ಲಿ ಎಂಥದ್ದೇ ನಷ್ಟವಾದರೂ ಮರ್ಯಾದೆಗೆ ಅಂಜಿ ಸಂತ್ರಸ್ತರು ಪೊಲೀಸರಿಗೆ ದೂರು ನೀಡದೇ ಇರುವುದನ್ನೇ ಆರೋಪಿಗಳು ಅವಕಾಶವನ್ನಾಗಿಸಿಕೊಂಡು ದುರ್ಬಳಕೆ ಮಾಡಿಕೊಳ್ಳುತ್ತಿದ್ದರು. ಆಗಿಂದ್ದಾಗ್ಗೆ ನಗರಕ್ಕೆ ಬಂದು ದೌರ್ಜನ್ಯ–ದರೋಡೆ ನಡೆಸುತ್ತಿದ್ದರು. ಪ್ರತಿ ಬಾರಿ ಅಂಥ ಕೃತ್ಯ ನಡೆಸಿದ ನಂತರ ಕೆಲವು ವಾರಗಳವರೆಗೆ ಅವರು ಮೈಸೂರಿಗೆ ಬರುತ್ತಿರಲಿಲ್ಲ.

'ತಮಿಳುನಾಡಿನ ಸತ್ಯಮಂಗಲ ಜಿಲ್ಲೆಯ ತಿರುಪ್ಪೂರ್ ಹಾಗೂ ಸುತ್ತಮುತ್ತಲ ಪಟ್ಟಣಗಳ ನಿವಾಸಿಗಳಾದ ಆರೋಪಿಗಳು ಸಾಮೂಹಿಕ ಅತ್ಯಾಚಾರ ನಡೆದ ದಿನ ಬಾಳೆಕಾಯಿಯನ್ನು ಸರಕುಸಾಗಣೆ ವಾಹನದಲ್ಲಿ ತುಂಬಿಕೊಂಡು ಎಪಿಎಂಸಿಗೆ ಬಂದಿದ್ದರು. ಬಾಳೆಕಾಯಿ ಮಾರಾಟ ಮಾಡಿ, ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಸುತ್ತಾಟ ನಡೆಸಿ ಮದ್ಯ ಸೇವಿಸಿ ಕುಳಿತಿದ್ದರು. ಆ ಸಂದರ್ಭದಲ್ಲಿ ಸಂತ್ರಸ್ತೆ ವಿದ್ಯಾರ್ಥಿನಿ ಹಾಗೂ ಆಕೆಯ ಸ್ನೇಹಿತ ಬರುತ್ತಿರುವುದನ್ನು ಕಂಡು ದೌರ್ಜನ್ಯ ಎಸಗಿದ್ದರು. ಹಣ ಸಿಗದೇ ಇದ್ದಾಗ ಯುವತಿಯ ಮೇಲೆ ಅತ್ಯಾಚಾರ ಮಾಡಿ ಪರಾರಿಯಾಗಿದ್ದರು' ಎಂಬುದು ಪ್ರಾಥಮಿಕ ಹಂತದ ವಿಚಾರಣೆಯಿಂದ ತಿಳಿದುಬಂದಿದೆ.

ಕಾರ್ಯಾಚರಣೆ ಹೀಗಿತ್ತು: ಆರೋಪಿಗಳು ತಮಿಳಿನಲ್ಲಿ ಮಾತನಾಡುತ್ತಿದ್ದರು ಎಂದು ಸಂತ್ರಸ್ತೆ ಸ್ನೇಹಿತ ನೀಡಿದ ಸುಳಿವನ್ನು ಆಧರಿಸಿ ಕಾರ್ಯಾಚರಣೆ ಕೈಗೊಂಡ ಪೊಲೀಸರ ತಂಡವು, ತಮಿಳುನಾಡಿನ ಸಿಮ್ ಹೊಂದಿರುವ ಮೊಬೈಲ್ ಲೊಕೇಶನ್ ಅನ್ನು ಪತ್ತೆ ಹಚ್ಚಿತ್ತು.

ಘಟನೆ ಸ್ಥಳದಲ್ಲಿ ಪತ್ತೆಯಾದ ಮೊಬೈಲ್ ಲೊಕೇಶನ್ ನಂತರ ಚಾಮರಾಜನಗರಲ್ಲಿ, ಮತ್ತೆ ತಮಿಳುನಾಡಿನಲ್ಲಿಯೂ ಸಿಕ್ಕಿತ್ತು. ಅದನ್ನು ಆಧರಿಸಿಯೇ ಶುಕ್ರವಾರ ಮಧ್ಯಾಹ್ನ ಹೊರಟ ತನಿಖಾ ತಂಡವು ಮಧ್ಯರಾತ್ರಿ 12.30ರ ವೇಳೆಗೆ ತಮಿಳುನಾಡು ತಲುಪಿತ್ತು. ಶನಿವಾರ ಬೆಳಗಿನ ಜಾವ ಆರು ಗಂಟೆಯವರೆಗೂ ನಡೆದ ಕಾರ್ಯಾಚರಣೆಯಲ್ಲಿ ನಾಲ್ವರು ಆರೋಪಿಗಳು ತಮ್ಮ ಮನೆಗಳಲ್ಲಿಯೇ ಸಿಕ್ಕಿಬಿದ್ದರು. ಇಬ್ಬರು ಮಾತ್ರ ಸ್ನೇಹಿತರ ಜತೆಗಿದ್ದರು' ಎಂದು ತನಿಖಾ ತಂಡದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ತಾಳವಾಡಿಯಲ್ಲಿ ಕೊನೆ ಹಂತದ ಕಾರ್ಯಾಚರಣೆ ನಡೆಸುವಾಗ ಆರೋಪಿಯೊಬ್ಬ ಪರಾರಿಯಾದ. ಕೃತ್ಯ ಎಸಗಿರುವುದಾಗಿ ಆರೋಪಿಗಳೆಲ್ಲರೂ ಒಪ್ಪಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಬಾಲಕಿ ಮೇಲೆ ಅತ್ಯಾಚಾರ

ಸಿಂದಗಿ (ವಿಜಯಪುರ): 13 ವರ್ಷದ ಬಾಲಕಿ ಮೇಲೆ 36 ವರ್ಷದ ಯುವಕನೊಬ್ಬ ಅತ್ಯಾಚಾರ ಎಸಗಿದ ಘಟನೆ ತಾಲ್ಲೂಕಿನಲ್ಲಿ ನಡೆದಿದ್ದು ಬೆಳಕಿಗೆ ಬಂದಿದೆ.

ಆರೋಪಿ ವಿರುದ್ಧ ಬಾಲಕಿಯ ತಂದೆ ಶುಕ್ರವಾರ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಸೋಮವಾರ ಮತ್ತು ಮಂಗಳವಾರ ಎರಡು ದಿನ ಸತತ ಅತ್ಯಾಚಾರ ಎಸಗಿದ್ದಾನೆ. ಬಾಲಕಿಗೆ ಜೀವ ಬೆದರಿಕೆ ಹಾಕಿದ್ದರಿಂದ ಪ್ರಕರಣ ದಾಖಲಿಸಲು ತಡವಾಗಿದೆ ಎಂದು ಬಾಲಕಿ ತಂದೆ ದೂರಿನಲ್ಲಿ ತಿಳಿಸಿದ್ದಾರೆ. ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ – 563 103
ನಂ.: ಬೆಂ.ಉ.ವಿ/ಅತಿಥಿ ಉಪನ್ಯಾಸಕರ ನೇಮಕಾತಿ/894/2021–22 ದಿನಾಂಕ:25.08.2021
ಅಧಿಸೂಚನೆ
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಯ ಸ್ನಾತಕೋತ್ತರ ಕೇಂದ್ರದಲ್ಲಿನ ವಿವಿಧ ಸ್ನಾತಕೋತ್ತರ ವಿಭಾಗಗಳ ಹಾಗೂ ವಿಶ್ವವಿದ್ಯಾಲಯದ ಶಿಕ್ಷಣ ಕಾಲೇಜು, ಚಿಕ್ಕಬಳ್ಳಾಪುರ ಇಲ್ಲಿನ ಬೋಧನಾ ಕಾರ್ಯಭಾರದ ನಿರ್ವಹಣೆಗಾಗಿ 2021–22ನೇ ಸಾಲಿಗೆ ಯು.ಜಿ.ಸಿ. ನಿಯಮಾನುಸಾರ ಪೂರ್ಣಕಾಲಿಕ / ಅರೆ ಕಾಲಿಕ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು ಈ ಕೆಳಕಂಡ ವಿಷಯಗಳ ಬೋಧನಾ ಕಾರ್ಯಬಾರಕ್ಕೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.
1. ಕಲಾ ನಿಖಾಯ: ಎಂ.ಎ. ಕನ್ನಡ, ಆಂಗ್ಲ ಭಾಷೆ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಪತ್ರಿಕೋಧ್ಯಮ & ಸಮೂಹ ಸಂವಹನ ಮತ್ತು ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ).
2. ವಾಣಿಜ್ಯ ನಿಖಾಯ: ಎಂ.ಕಾಂ.
3. ವಿಜ್ಞಾನ ನಿಖಾಯ: ಎಂ.ಎಸ್ಸಿ ಸಸ್ಯಶಾಸ್ತ್ರ, ಗಣಕ ವಿಜ್ಞಾನ, ಭೌತಶಾಸ್ತ್ರ, ಗಣಿತಶಾಸ್ತ್ರ & ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ.
4. ಶಿಕ್ಷಣ ನಿಖಾಯ: ಬಿ.ಎಡ್.
ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಪಿ.ಹೆಚ್.ಡಿ./ ಎಂ.ಫಿಲ್ / ಎನ್.ಇ.ಟಿ. / ಎಸ್.ಎಲ್.ಇ.ಟಿ. ಹೊಂದಿದ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ ಅರ್ಜಿಯನ್ನು ಡೌನಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿಗಳನ್ನು ಅಭ್ಯರ್ಥಿಗಳ ಅಂಕ ಪಟ್ಟಿ, ಪದವಿ ಪ್ರಮಾಣ ಪತ್ರ, ಸೇವಾನುಭವ ಪತ್ರ, ಪಿ.ಹೆಚ್.ಡಿ./ ಎಂ.ಫಿಲ್ / ಎನ್.ಇ.ಟಿ. / ಎಸ್.ಎಲ್.ಇ.ಟಿ., ಸಂಶೋಧನ ಪತ್ರಿಕೆಗಳು (ದ್ವಿಪ್ರತಿಗಳಲ್ಲಿ) ಇತ್ಯಾದಿ ಅಗತ್ಯ ದಾಖಲಾತಿಗಳೊಂದಿಗೆ ಕುಲಸಚಿವರು, ವಿಶ್ವವಿದ್ಯಾಲಯದ ಆಡಳಿತ ಕಛೇರಿ, ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ–563 103 ಇಲ್ಲಿಗೆ ದಿನಾಂಕ: 08.09.2021ರ ಸಂಜೆ 5:00 ಗಂಟೆಯವರೆಗೆ ಸಲ್ಲಿಸತಕ್ಕದ್ದು.
ಸೂಚನೆ: 1) ಅತಿಥಿ ಉಪನ್ಯಾಸಕರ ಹುದ್ದೆಯು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ. 2) ಆಯ್ಕೆಯಾದ ಅತಿಥಿ ಉಪನ್ಯಾಸಕರಿಗೆ ವಿಶ್ವವಿದ್ಯಾಲಯದ ನಿಯಮಾನುಸಾರ ಸೂಕ್ತ ಸಂಭಾವನೆಯನ್ನು ನೀಡಲಾಗುವುದು. 3) ವಿವಿಧ ವಿಷಯಗಳ ಕಾರ್ಯಬಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಸರ್ಕಾರದ ಮೀಸಲಾತಿಯನ್ನು ಅನುಸರಿಸಿ ಮಾಡಲಾಗುವುದು.
ಅಭ್ಯರ್ಥಿಗಳು ಸಂದರ್ಶನದ ದಿನಾಂಕ ಮತ್ತು ಇತರೆ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್: http://bnu.ac.in ನಿಂದ ಪಡೆಯುವುದು. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ದೂರವಾಣಿ ಸಂಖ್ಯೆ: 08152–243152/53 ಅನ್ನು ಸಂಪರ್ಕಿಸುವುದು.
ವಾಸಾಸಂಇ/ಕೋಲಾರ/ಜಿಎ/187/2021–22 ಸಹಿ/– ಕುಲ ಸಚಿವರು
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಕ್ಲಬ್ ಹೌಸ್ ಒಂದು ನಾಸ್ಟಾಲ್ಜಿಕ್ ನೋಟ
ಸಿನಿಮಾ ಯುಗಳ ಗೀತೆಗಳ ಕಾಲ ಮುಗಿದು ಹೋಯಿತೆ?
ಜಯಮಾಲ, ನಟಿ- ನಿರ್ಮಾಪಕಿ., ಕೆ.ಕಲ್ಯಾಣ್, ಸಂಗೀತ ನಿರ್ದೇಶಕ., ವಿ. ನಾಗೇಂದ್ರ ಪ್ರಸಾದ್, ಗೀತ ರಚನೆಕಾರ., ಸುಜಾತಾ ಎಚ್. ಆರ್. ಕವಯತ್ರಿ., ಚೈತ್ರ ಎಚ್.ಜಿ. ಹಿನ್ನೆಲೆ ಗಾಯಕಿ ಮತ್ತು ನೀವು..
ಪ್ರಜಾವಾಣಿ ಆಲದಮರ
10.30 ರಿಂದ 12.30
ಸೋಬಾನೆ ಸಿರಿ ಹಾಡು: ದೇವರಹುಬ್ಬಳ್ಳಿಯ ಪಾರ್ವತೆವ್ವ ಹೊಂಗಲ್ ಹಾಗೂ ತಂಡದಿಂದ ಜನಪದ ಹಾಡುಗಳ ಕಾರ್ಯಕ್ರಮ
ಸಂಜೆ 5.00ಕ್ಕೆ
ಪಾಡ್‌ಕಾಸ್ಟ್: ಇಂದಿನ ವಿಶೇಷ: ವೈದ್ಯಮಿತ್ರ
ಪ್ರತೀ ದಿನ: ವಚನವಾಣಿ, ದಿನದ ಸೂಕ್ತಿ, ಸಂಪಾದಕೀಯ, ಪ್ರಜಾವಾಣಿ ವಾರ್ತೆ ಬುಲೆಟಿನ್, ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಶುಲ್ಕ ಭರಿಸಲು ನೆರವಾಯಿತು

'ಪ್ರಜಾವಾಣಿ' ವತಿಯಿಂದ ನೀಡಿದ ಹಣ ಕಾಲೇಜಿನ ಶುಲ್ಕ ಭರಿಸಲು ನೆರವಾಯಿತು. ಇದರಿಂದ ಪೋಷಕರಿಗೆ ಹೊರೆ ಕೊಂಚ ಕಡಿಮೆಯಾಯಿತು. ನಾನು ಕಾಲೇಜಿಗೆ ತೆರಳಲು ಅನುಕೂಲವಾಯಿತು. ಕಷ್ಟದಲ್ಲಿರುವ ವಿದ್ಯಾರ್ಥಿಗಳಿಗೆ ನೆರವಾಗುತ್ತಿರುವ ಪತ್ರಿಕೆಗೆ ಧನ್ಯವಾದಗಳು

ಐಶ್ವರ್ಯ, ಶಹಾಪುರ

ಪುಸ್ತಕ ಖರೀದಿಸಿದೆ

ಕಾಲೇಜಿನ ಶುಲ್ಕ, ಪುಸ್ತಕ ಖರೀದಿಗೆ 'ಪ್ರಜಾವಾಣಿ' ವತಿಯಿಂದ ನೀಡಿದ ಹಣ ಬಳಸಿಕೊಂಡಿದ್ದೇನೆ. ಈ ಹಣದಿಂದ ತುಂಬಾ ಸಹಾಯವಾಗಿದೆ. ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಿ ಅವರು ಕಾಲೇಜು ಕಟ್ಟೆ ಹತ್ತುವಂತೆ ಮಾಡುತ್ತಿರುವ 'ಪ್ರಜಾವಾಣಿ'ಗೆ ಅಭಿನಂದನೆ ಸಲ್ಲಿಸುವೆ

ಅಭಿಷೇಕ ಧನ್ಯಕುಮಾರ ಹುಬ್ಬಳ್ಳಿ, ಹುಣಸಗಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	118.45	4,611	9,511
ಹಾರಂಗಿ	2,859	2,857.36	1,378	1,616
ಕಬಿನಿ	2,284	2,281.2	5,080	5,000
ಹೇಮಾವತಿ	2,922	2,917.66	2,223	4,945
ಲಿಂಗನಮಕ್ಕಿ	1,819	1,812.55	6,572	-
ಸೂಪಾ (ಮೀ)	564	554.70	3,859	4,290
ಮಾಣಿ	594.36	585.74	622	708
ತುಂಗಭದ್ರಾ	1,633	1,632.29	7,967	12,072
ಮಲಪ್ರಭಾ	2,079.50	2,078.30	832	894
ಘಟಪ್ರಭಾ	2,175	2,175	1,846	1,846
ಭದ್ರಾ	186	185	3,571	3,571
ಆಲಮಟ್ಟಿ (ಮೀ)	519.60	519.60	3,343	3,343
ನಾರಾಯಣಪುರ (ಮೀ)	492.25	491.85	1,940	7,500

* ನೆಲಮಟ್ಟದಿಂದ

ಪ್ರವಾಹ: ಕೊಚ್ಚಿ ಹೋದ ಯುವಕ

ಪ್ರಜಾವಾಣಿ ವಾರ್ತೆ

ವಿಜಯಪುರ: ಬಸವನ ಬಾಗೇವಾಡಿ ತಾಲ್ಲೂಕಿನ ನೇಗಿನಾಳ-ಮುಳ್ಳಾಳ ನಡುವೆ ಹರಿಯುವ ಹಳ್ಳದ ಪ್ರವಾಹದಲ್ಲಿ ಶುಕ್ರವಾರ ರಾತ್ರಿ ಯುವಕನೊಬ್ಬ ಕೊಚ್ಚಿ ಹೋಗಿದ್ದಾನೆ.

ವಿಜಯಪುರದಿಂದ ತಮ್ಮ ಊರು ಮುಳ್ಳಾಳಕ್ಕೆ ಬೈಕಿನಲ್ಲಿ ಇಬ್ಬರು ಯುವಕರು ಹೋಗುವಾಗ, ಭಾರಿ ಮಳೆಯಿಂದಾಗಿ ಉಕ್ಕಿ ಹರಿಯುತ್ತಿದ್ದ ಹಳ್ಳವನ್ನು ಬೈಕ್ ತಳ್ಳಿಕೊಂಡು ದಾಟುವಾಗ ಪ್ರವಾಹಕ್ಕೆ ಸಿಲುಕಿದ್ದಾರೆ. ಬೈಕ್ ಸವಾರ ಇಮಾಮ್ ನದಾಫ ಪಾರಾಗಿದ್ದು, ಹಿಂಬದಿ ಸವಾರ ಮಂಜುನಾಥ ಪಾಟೀಲ(23) ಕೊಚ್ಚಿ ಹೋಗಿದ್ದಾನೆ. ಅಗ್ನಿ ಶಾಮಕ ಸಿಬ್ಬಂದಿ, ಪೊಲೀಸರು ಶೋಧ ಕಾರ್ಯಾಚರಣೆ ನಡೆಸಿದ್ದಾರೆ.

ಉತ್ತರ ಕನ್ನಡದಲ್ಲಿ ಮಳೆ: ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಮತ್ತು ಘಟ್ಟದ ಮೇಲ್ಭಾಗದಲ್ಲಿ ಶನಿವಾರ ಅಲ್ಲಲ್ಲಿ ತುಂತುರು ಮಳೆಯಾಗಿದೆ. ಶಿರಸಿಯಲ್ಲಿ ಸಂಜೆ ವೇಳೆಗೆ ಮಳೆ ಪ್ರಮಾಣ ಹೆಚ್ಚಿತ್ತು. ಕಾರವಾರದಲ್ಲಿ ತುಂತುರು ಮಳೆ ಸುರಿದಿದೆ. ದಾಂಡೇಲಿ, ಅಂಕೋಲಾ, ಹೊನ್ನಾವರ ಹಾಗೂ ಭಟ್ಕಳದಲ್ಲಿ ಸಾಧಾರಣ ಮಳೆ ಸುರಿದಿದೆ.

ಪ್ರೇಮ ಪ್ರಕರಣ ತಡೆಯಲು ಬಾಲ್ಯ ವಿವಾಹದ ಅಸ್ತ್ರ!

● ಡಿ.ಎಂ.ಕುರ್ಕೆ ಪ್ರಶಾಂತ್

ಚಿತ್ರ: ಭಾವು ಪತ್ತಾರ್

ಚಿಕ್ಕಬಳ್ಳಾಪುರ: ಆಕೆ ಬಾಗೇಪಲ್ಲಿ ತಾಲ್ಲೂಕಿನ ಪ್ರೌಢಶಾಲೆಯೊಂದರ ವಿದ್ಯಾರ್ಥಿನಿ. ಅನ್ಯಜಾತಿ ಯುವಕನನ್ನು ಪ್ರೇಮಿಸುತ್ತಾಳೆ. ವಿಷಯ ಮನೆಯವರೆಗೂ ತಲುಪುತ್ತದೆ. ಪೋಷಕರು ತಕ್ಷಣ ಸ್ವಜಾತಿಯ ಯುವಕನ ಜತೆ ವಿವಾಹ ನಿಶ್ಚಯಿಸುತ್ತಾರೆ. ಇದನ್ನು ತಿಳಿದ ವಿದ್ಯಾರ್ಥಿನಿಯ ಪ್ರಿಯಕರ 'ಇಲ್ಲೊಂದು ಬಾಲ್ಯ ವಿವಾಹ ನಡೆಯುತ್ತಿದೆ' ಎಂದು ಮಕ್ಕಳ ಸಹಾಯವಾಣಿಗೆ ಗುಟ್ಟಾಗಿ ದೂರು ನೀಡುತ್ತಾನೆ.

* * *

ಶಿಡ್ಲಘಟ್ಟ ತಾಲ್ಲೂಕಿನ ಹುಡುಗಿಗೆ 17 ವರ್ಷ. ಆಂಧ್ರಪ್ರದೇಶದ ಮದನಪಲ್ಲಿಯಲ್ಲಿ ವಿವಾಹಕ್ಕೆ ಸಿದ್ಧತೆ ನಡೆದಿತ್ತು. 'ವಿವಾಹ ಇಷ್ಟವಿಲ್ಲ, ತಡೆಯಿರಿ' ಎಂದು ಹುಡುಗಿಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿಗೆ ಟ್ವೀಟ್ ಮಾಡುತ್ತಾಳೆ. ಆಂಧ್ರದ ಚಿತ್ತೂರು ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಕಾರದಲ್ಲಿ ವಿವಾಹಕ್ಕೆ ತಡೆಯೂ ಬಿದ್ದಿತ್ತು. ಹುಡುಗಿಯನ್ನು ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದಾಗ 'ನಾನು ಚೆನ್ನಾಗಿ ಓದಬೇಕು, ಅಧಿಕಾರಿ ಆಗಬೇಕು' ಎಂದಳು. ಕೌನ್ಸೆಲಿಂಗ್‌ನಲ್ಲಿ, 'ನಾನು ಮತ್ತೊಬ್ಬನನ್ನು ಪ್ರೇಮಿಸಿದ್ದೇನೆ. ಹೀಗಾಗಿ ಈ ವಿವಾಹ ಇಷ್ಟವಿಲ್ಲ' ಎಂದಳು!

* * *

ಗುಡಿಬಂಡೆಯ 9ನೇ ತರಗತಿ ವಿದ್ಯಾರ್ಥಿನಿಗೆ ಯುವಕನೊಬ್ಬನ ಜತೆ ಪ್ರೇಮಾಂಕುರವಾಗಿತ್ತು. ವಿವಾಹವಾಗಿ ಒಂದೂವರೆ ವರ್ಷ ಬೇರೆ ಕಡೆ ಇದ್ದರು. ಹೆರಿಗೆಗೆ ಆಸ್ಪತ್ರೆಗೆ ದಾಖಲಾದಾಗ ಸಿಬ್ಬಂದಿಗೆ ಈಕೆ ಬಾಲಕಿ ಎನ್ನುವುದು ತಿಳಿಯುತ್ತದೆ. ಬಾಲ್ಯವಿವಾಹ ನಿಷೇಧ ಮತ್ತು ಪೊಕ್ಸೊ ಕಾಯ್ದೆಯಡಿ ಈಗ ಯುವಕ ಜೈಲುಪಾಲಾದರೆ, ತಾಯಿ ಮತ್ತು ಮಗು ತವರು ಮನೆ ಸೇರಿದ್ದಾರೆ.

ಇವು, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ಪ್ರಕರಣಗಳಿಗೆ ಕೆಲವು ಉದಾಹರಣೆಗಳಷ್ಟೆ.

ಜಿಲ್ಲೆಯಲ್ಲಿ, ಹದಿಹರೆಯದ ಮಕ್ಕಳ ಪ್ರೀತಿ–ಪ್ರೇಮ ಪ್ರಕರಣಗಳಿಗೆ ಕಡಿವಾಣ ಹಾಕಲು ಪೋಷಕರು ಬಾಲ್ಯ ವಿವಾಹಕ್ಕೆ ನೂಕುತ್ತಾರೆ. ಅಷ್ಟೂ ಮೀರಿ ಪೋಷಕರ ಕಣ್ಣು ತಪ್ಪಿಸಿ ಬಾಲಕಿಯರನ್ನು ಮದುವೆಯಾಗುವ ಯುವಕರು ಕೊನೆಗೆ ಬಾಲ್ಯವಿವಾಹ ನಿಷೇಧ ಮತ್ತು ಪೊಕ್ಸೊ ಕಾಯ್ದೆಯಡಿ ಜೈಲು ಸೇರುತ್ತಾರೆ. ಜಿಲ್ಲೆಯಲ್ಲಿ ಇಂಥ ಗರಿಷ್ಠ ಪ್ರಕರಣಗಳು ದಾಖಲಾಗಿವೆ. ಬಡತನ, ಅನಕ್ಷರತೆಯ ಕಾರಣದಿಂದ ನಡೆಯುವ ಬಾಲ್ಯ ವಿವಾಹಗಳಿಗಿಂತ ಗಡಿಭಾಗದಲ್ಲಿ ಹದಿಹರೆಯದ ಪ್ರೇಮ ಪ್ರಕರಣ ಮುರಿಯಲು ನಡೆಯುವ ಬಾಲ್ಯ ವಿವಾಹಗಳ ಸಂಖ್ಯೆಯೇ ಹೆಚ್ಚು.

ಬಾಗೇಪಲ್ಲಿ ಪ್ರಮುಖ: ರಾಜ್ಯದಲ್ಲಿ ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಹೆಚ್ಚು ದೂರುಗಳು ದಾಖಲಾಗುವ ತಾಲ್ಲೂಕುಗಳಲ್ಲಿ ಬಾಗೇಪಲ್ಲಿಯೂ ಪ್ರಮುಖವಾದುದು. ಇಲ್ಲಿ ಬಾಲ್ಯ ವಿವಾಹ ತಡೆಗೆ ಗ್ರಾಮಮಟ್ಟದಲ್ಲಿ ಅಧಿಕಾರಿಗಳ ತಂಡ ನೇಮಿಸಲಾಗಿದೆ. ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ 2020ರ ಏಪ್ರಿಲ್ 1ರಿಂದ 2021ರ ಜುಲೈ ಅಂತ್ಯದವರೆಗೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ 73 ಮತ್ತು ಗೌರಿಬಿದನೂರು ತಾಲ್ಲೂಕಿನಲ್ಲಿ 36 ದೂರುಗಳು ದಾಖಲಾಗಿವೆ.

ಆಂಧ್ರ ಸಂಸ್ಕೃತಿಯ ಪ್ರಭಾವ: ಬಾಗೇಪಲ್ಲಿ, ಗೌರಿಬಿದನೂರು, ಗುಡಿಬಂಡೆ ತಾಲ್ಲೂಕುಗಳ ಮೇಲೆ ನೆರೆಯ ಆಂಧ್ರ ಪ್ರದೇಶದ ಪ್ರಭಾವ ದಟ್ಟವಾಗಿದೆ. ತೆಲುಗು ಸಿನಿಮಾಗಳ ಪ್ರಭಾವವೂ ಪ್ರೌಢಶಾಲಾ ಹಂತದಲ್ಲೇ ಹುಡುಗ–ಹುಡುಗಿಯರಲ್ಲಿ ಪ್ರೇಮ ಅರಳಲು ಕೊಡುಗೆ ನೀಡುತ್ತಿದೆ. ಮಗಳು ಅಂತರ್ಜಾತಿ ಪ್ರೇಮ ವಿವಾಹವಾಗುತ್ತಾಳೆ ಎನ್ನುವ ಭಯದಿಂದ ಹಾಗೂ ಪೋಷಕರ 'ಜಾತಿ ಪ್ರತಿಷ್ಠೆ'ಯ ಮನೋಭಾವದಿಂದ ಈ ಪಿಡುಗು ಹೆಚ್ಚಲು ಕಾರಣವಾಗುತ್ತಿದೆ.

ಬಹುತೇಕ ಬಾಲ್ಯವಿವಾಹ ಪ್ರಯತ್ನಗಳಿಗೆ ಪ್ರೇಮವೇ ಪ್ರಮುಖ ಕಾರಣ ಎನ್ನುವುದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳ ವಿಚಾರಣೆ ಹಾಗೂ ತಜ್ಞರ ಕೌನ್ಸೆಲಿಂಗ್ ವೇಳೆ ದೃಢವಾಗುತ್ತಿದೆ.

ಯುವಕರಿಗೆ ಜಾಗೃತಿ!: 'ನೀವು ಇಷ್ಟಪಟ್ಟು ಹೋದರೂ ಅಥವಾ ಅವರೇ ಇಷ್ಟಪಟ್ಟು ನಿಮ್ಮ ಜತೆ ಬಂದರೂ ಹುಡುಗಿಗೆ 18 ವರ್ಷ ಪೂರ್ಣವಾಗದಿದ್ದರೆ ನಿಮ್ಮ ವಿರುದ್ಧ ಪ್ರಕರಣ ದಾಖಲಾಗುತ್ತದೆ ಎಂದು ಯುವಕರಲ್ಲಿ ಜಾಗೃತಿ ಮೂಡಿಸುತ್ತಿದ್ದೇವೆ' ಎನ್ನುತ್ತಾರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು.

ತಪ್ಪಿತಸ್ಥರಿಗೆ ಶಿಕ್ಷೆಯೇ ಇಲ್ಲ, ರಾಜಿಯೇ ಎಲ್ಲ

ಬಾಲ್ಯ ವಿವಾಹಕ್ಕೆ ಸಂಬಂಧಿಸಿದಂತೆ, ಚಿಕ್ಕಬಳ್ಳಾಪುರದಲ್ಲಿ 2015ರಲ್ಲಿ ಬಾಲಕಿಯ ಪೋಷಕರಿಗೆ ₹ 45,000 ದಂಡ ವಿಧಿಸಲಾಗಿದೆ. ಕೊಪ್ಪಳದಲ್ಲಿ 2012ರಲ್ಲಿ ವರನಿಗೆ 2 ವರ್ಷ ಜೈಲು ₹30,000 ದಂಡ, ಬಾಲಕಿಯ ತಾಯಿ, ಚಿಕ್ಕಮ್ಮ ಹಾಗೂ ಚಿಕ್ಕಪ್ಪನಿಗೆ 2 ವರ್ಷ ಜೈಲು ಶಿಕ್ಷೆ, ದಂಡ, ವಿವಾಹಕ್ಕೆ ಸಹಕರಿಸಿದ ಗ್ರಾಮ ಪಂಚಾಯ್ತಿ ಅಧ್ಯಕ್ಷನಿಗೆ 2 ವರ್ಷ ಜೈಲು ₹50,000 ದಂಡ ವಿಧಿಸಲಾಗಿದೆ. 2013ರಲ್ಲಿ ಮತ್ತೊಂದು ಪ್ರಕರಣದಲ್ಲಿ ಬಾಲಕ ಮತ್ತು ಬಾಲಕಿಯ ಪೋಷಕರಿಗೆ ತಲಾ 2 ವರ್ಷ ಜೈಲು ಶಿಕ್ಷೆ, ₹10,000 ದಂಡ ವಿಧಿಸಲಾಗಿದೆ.

ಕಾಯ್ದೆ ಜಾರಿಯಾದ 2006ರಿಂದ ಇಲ್ಲಿಯವರೆಗೆ ಹೀಗೆ ಬೆರಳೆಣಿಕೆ ಪ್ರಕರಣಗಳಲ್ಲಿ ಶಿಕ್ಷೆ ಆಗಿದೆ. ಬಹಳ ಕಡೆ ಎಫ್‌ಐಆರ್ ಕೂಡ ದಾಖಲಾಗಿಲ್ಲ.

'ಬಾಲ್ಯ ವಿವಾಹಗಳ ಪೈಕಿ, ಪ್ರೀತಿಸಿ ಓಡಿಹೋಗಿ ಮದುವೆಯಾದ ಪ್ರಕರಣ ಹೆಚ್ಚಿವೆ' ಎಂದು ದಾವಣಗೆರೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾನೂನು ಪರಿವೀಕ್ಷಣಾಧಿಕಾರಿ ಪ್ರಕಾಶ್ ಹೇಳುತ್ತಾರೆ. 'ಎರಡೂ ಕಡೆಯವರು ರಾಜಿ ಮಾಡಿಕೊಂಡು ನ್ಯಾಯಾಲಯದಲ್ಲಿ ಸಾಕ್ಷಿ ಹೇಳದ ಕಾರಣ ಬಹುತೇಕ ಪ್ರಕರಣಗಳಲ್ಲಿ ಶಿಕ್ಷೆಯಾಗುವುದಿಲ್ಲ' ಎಂದು ಅಭಿಪ್ರಾಯಪಡುತ್ತಾರೆ.



ಬಾಲ್ಯ ವಿವಾಹ ತಡೆದ, ನಡೆದ ಮತ್ತು ಎಫ್.ಐ.ಆರ್ ದಾಖಲಾದ, ಶಿಕ್ಷೆ ವಿಧಿಸಿದ ಪ್ರಕರಣಗಳ ಸಂಖ್ಯೆ

ಜಿಲ್ಲೆ	2018-19			2019-20			2020-21 (ಜುಲೈವರೆಗೆ)		
	ತಡೆದ ಪ್ರಕರಣ	ನಡೆದ ಪ್ರಕರಣ	ಎಫ್‌ಐಆರ್ ದಾಖಲಾದ ಪ್ರಕರಣ	ತಡೆದ ಪ್ರಕರಣ	ನಡೆದ ಪ್ರಕರಣ	ಎಫ್‌ಐಆರ್ ದಾಖಲಾದ ಪ್ರಕರಣ	ತಡೆದ ಪ್ರಕರಣ	ನಡೆದ ಪ್ರಕರಣ	ಎಫ್‌ಐಆರ್ ದಾಖಲಾದ ಪ್ರಕರಣ
ಬಾಗಲಕೋಟೆ	36	7	0	60	5	0	95	18	10
ಬೆಂಗಳೂರು (ಗ್ರಾ)	7	1	1	5	0	0	66	8	8
ಬೆಂಗಳೂರು (ನ)	22	5	2	17	3	2	34	9	9
ಬೆಳಗಾವಿ	138	12	0	132	12	6	169	18	13
ಬಳ್ಳಾರಿ	105	2	2	65	3	3	249	12	12
ಬೀದರ್	43	5	1	86	0	0	69	3	1
ವಿಜಯಪುರ	67	1	1	58	0	0	110	1	0
ಚಾಮರಾಜನಗರ	21	0	0	22	3	3	86	1	1
ಚಿಕ್ಕಬಳ್ಳಾಪುರ	49	7	4	104	9	9	128	12	12
ಚಿಕ್ಕಮಗಳೂರು	22	2	2	37	5	5	94	15	11
ಚಿತ್ರದುರ್ಗ	54	3	0	55	2	2	128	4	4
ದಕ್ಷಿಣ ಕನ್ನಡ	9	2	0	11	4	4	20	1	1
ದಾವಣಗೆರೆ	70	2	1	59	1	1	72	7	7
ಧಾರವಾಡ	9	0	0	11	2	1	11	0	0
ಗದಗ	22	0	0	31	1	1	57	3	3
ಕಲಬುರ್ಗಿ	118	7	0	110	10	10	130	4	1
ಹಾಸನ	38	2	0	30	0	0	121	39	29
ಹಾವೇರಿ	23	1	0	31	0	0	52	0	0
ಕೊಡಗು	8	2	0	19	1	1	8	2	1
ಕೋಲಾರ	17	0	0	37	1	1	93	1	2
ಕೊಪ್ಪಳ	92	6	6	270	5	3	111	8	4
ಮಂಡ್ಯ	29	18	11	30	28	26	42	34	28
ಮೈಸೂರು	69	4	5	84	7	7	246	31	31
ರಾಯಚೂರು	30	1	0	39	2	2	77	18	17
ರಾಮನಗರ	30	7	2	59	31	18	109	20	7
ಶಿವಮೊಗ್ಗ	42	13	3	48	17	17	107	18	18
ತುಮಕೂರು	45	5	5	51	4	4	123	7	7
ಉಡುಪಿ	1	1	0	0	0	0	1	0	0
ಉತ್ತರ ಕನ್ನಡ	7	2	1	12	0	0	20	1	1
ಯಾದಗಿರಿ	52	1	0	49	0	0	83	1	1
ಒಟ್ಟು	1,275	119	48	1,623	156	130	2,711	296	239

ಆಧಾರ: ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಆಡುವ ಕೂಸಿಗೆ ಕಾಡುವ ಸಮಸ್ಯೆ ನೂರು

● ಕೃಷ್ಣಿ ಶಿರೂರ

ಹುಬ್ಬಳ್ಳಿ: ಬಾಲ್ಯವಿವಾಹ ಆಗುವ ಹದಿಹರೆಯದ ಹುಡುಗಿ ಹಾಗೂ ಅವಳಿಗೆ ಜನಿಸುವ ಮಗು ಇಬ್ಬರ ಆರೋಗ್ಯದ ಮೇಲೂ ದುಷ್ಪರಿಣಾಮಗಳ ಸಂಖ್ಯೆಯೇ ಹೆಚ್ಚು. ದೈಹಿಕ ದುಷ್ಪರಿಣಾಮಗಳ ಜೊತೆಗೆ ಈ ಪುಟ್ಟಾಯಂದಿರು ಹಾಗೂ ಮಗು ಮಾನಸಿಕವಾಗಿಯೂ ಜರ್ಜರಿತರಾಗುತ್ತಾರೆ.

ಡಾ. ಚಂದ್ರಕಲಾ ಸಿ.ನರಹಟ್ಟಿ

ತಾಯಿ – ಮಗು ಮಾನಸಿಕ ಸ್ಥೈರ್ಯ ಕಳೆದುಕೊಳ್ಳುವರು. ಮಾನಸಿಕ ದೌರ್ಬಲ್ಯ, ಖಿನ್ನತೆಗೆ ಒಳಗಾಗುತ್ತಾರೆ. ಕೊಪ್ಪಳದ ಸ್ತ್ರೀರೋಗ ತಜ್ಞೆ ಚಂದ್ರಕಲಾ ಸಿ.ನರಹಟ್ಟಿ, ಬಾಲ್ಯ ವಿವಾಹದಿಂದಾಗುವ ಆರೋಗ್ಯದ ತೊಂದರೆಗಳ ಬಗ್ಗೆ ಇಲ್ಲಿ ವಿವರಿಸಿದ್ದಾರೆ:

ಬಾಲಕಿ ಮೇಲೆ ವಯಸ್ಸಿಗೆ ಮೀರಿದ ಜವಾಬ್ದಾರಿ ಹೇರಿದಂತಾಗುತ್ತದೆ. ಲೈಂಗಿಕತೆಗೆ ಮಾನಸಿಕ, ದೈಹಿಕವಾಗಿಯೂ ಸಿದ್ಧರಾಗಿರದ ಕಾರಣ ನಾನಾ ರೀತಿಯಲ್ಲಿ ಆಘಾತಕ್ಕೆ ಒಳಗಾಗುತ್ತಾರೆ. ಸುರಕ್ಷಿತ ಲೈಂಗಿಕತೆಯ ಅರಿವಿಲ್ಲದೆ ಲೈಂಗಿಕ ಕಾಯಿಲೆಗಳಿಗೂ ಗುರಿಯಾಗುವ ಸಾಧ್ಯತೆ ಇರುತ್ತದೆ.

ಹೆರಿಗೆ ಸಮಯದಲ್ಲಿ ಅಕಾಲಿಕ ಮರಣಕ್ಕೆ ತುತ್ತಾಗುವ ಸಾಧ್ಯತೆಯಿರುತ್ತದೆ. ಗರ್ಭಾವಸ್ಥೆಯಲ್ಲಿ ಮೂರ್ಛೆ ರೋಗಕ್ಕೆ ಬಲಿಯಾಗಬಹುದು. ರಕ್ತಹೀನತೆ ಉಂಟಾಗುತ್ತದೆ. ಗರ್ಭಪಾತ ಹೆಚ್ಚಾಗುತ್ತವೆ. ಬಿಳಿಮುಟ್ಟು, ಬೆನ್ನುನೋವಿನಂಥ ಸಮಸ್ಯೆಗಳಿಗೆ ತುತ್ತಾಗುವರು.

ಡಾ.ಆರ್ ಟಿ.ಪಾಟೀಲ್

ಪತಿ – ಪತ್ನಿಯರಲ್ಲಿ ಆಕರ್ಷಣೆ ಕುಂಠಿತವಾಗಿ, ವಿವಾಹೇತರ ಸಂಬಂಧಗಳಿಗೆ ಕಾರಣವಾಗುತ್ತವೆ. ಜಗಳಗಳು ಹೆಚ್ಚಿ ಸಂಸಾರದಲ್ಲಿ ಬಿರುಕು ಮೂಡುತ್ತವೆ.

ಮಕ್ಕಳ ಆರೋಗ್ಯದ ಕುರಿತು ಬಾಗಲಕೋಟೆಯ ಮಕ್ಕಳ ತಜ್ಞ ಆರ್.ಟಿ.ಪಾಟೀಲ ಹೀಗೆ ಹೇಳುತ್ತಾರೆ:

ಬಾಲ್ಯವಿವಾಹಗಳು ಹೆಚ್ಚಾಗಿ ರಕ್ತ ಸಂಬಂಧದಲ್ಲೇ ನಡೆಯುವುದರಿಂದ ಅಂಗವಿಕಲ ಇಲ್ಲವೆ ಬುದ್ಧಿಮಾಂದ್ಯ ಮಕ್ಕಳ ಜನನದ ಸಾಧ್ಯತೆಯೂ ಹೆಚ್ಚಾಗಿರುತ್ತದೆ. ದೃಷ್ಟಿದೋಷ, ಶ್ರವಣದೋಷ ಇರುವ ಮಕ್ಕಳು ಹುಟ್ಟಬಹುದು. ವಾಕ್–ಶ್ರವಣ ದೋಷವಿರುವ ಮಕ್ಕಳ ಸಂಖ್ಯೆಯೂ ಹೆಚ್ಚಾಗಿರುತ್ತದೆ. ಗರ್ಭಿಣಿಯಲ್ಲಿ ರಕ್ತಹೀನತೆ ಇದ್ದಲ್ಲಿ, ಕಡಿಮೆ ತೂಕದ ಮಗು ಜನಿಸುತ್ತವೆ. ಶಿಶುವಿನ ಪೂರ್ಣ ಬೆಳವಣಿಗೆಯಾಗಿರುವುದಿಲ್ಲ. ಶಿಶು ಮರಣ ಅಪ್ಪುವ ಸಾಧ್ಯತೆ ಹೆಚ್ಚು. ತಾಯಿಗೆ ಲೈಂಗಿಕ ಕಾಯಿಲೆಗಳಿದ್ದರೆ, ಮಗುವಿಗೆ ತೊಂದರೆಯಾಗುವ ಸಾಧ್ಯತೆಗಳೂ ಹೆಚ್ಚಾಗಿರುತ್ತವೆ. ಗರ್ಭಸ್ರಾವ ಆಗುತ್ತವೆ. ಅವಧಿಪೂರ್ವ ಪ್ರಸವದಿಂದ ಶಿಶುವಿನ ಆರೋಗ್ಯದ ಮೇಲೆ ಬಹುವಿಧದ ದುಷ್ಪರಿಣಾಮ ಬೀರಬಹುದು.

ಕೋವಿಡ್: ಹೆಚ್ಚಿದ ಬಾಲ್ಯವಿವಾಹ ಪ್ರಕರಣ

ಕೋವಿಡ್ ಲಾಕ್‌ಡೌನ್ ಆರಂಭವಾದ ಮೇಲೆ ಬಾಲ್ಯ ವಿವಾಹಗಳ ಪ್ರಕರಣಗಳು ಹೆಚ್ಚಲು ಶಾಲೆಗಳು ಬಂದ್ ಆಗಿರುವುದು ಮೂಲ ಕಾರಣವಾಗಿದೆ. ಮಕ್ಕಳು ಗೈರಾದಾಗ ಶಿಕ್ಷಕರು ಪರಿಶೀಲಿಸುತ್ತಿದ್ದರು. ಮಕ್ಕಳ ಮದುವೆ ಹಮ್ಮಿಕೊಂಡಲ್ಲಿ ತಕ್ಷಣ ನಮ್ಮ ಗಮನಕ್ಕೆ ತರುತ್ತಿದ್ದರು. ಬಾಲ್ಯವಿವಾಹ ತಡೆಯಲು ಸಾಧ್ಯವಾಗುತ್ತಿತ್ತು. ಈಗ ಏನು ನಡೆಯುತ್ತಿದೆ ಎಂಬುದು ತಿಳಿಯುತ್ತಿಲ್ಲ. ಬಾಲ್ಯವಿವಾಹ ತಡೆಯಲು ಪಾಲಕರ ಮನೋಭಾವ ಬದಲಾಗಬೇಕಿದೆ.

ಅಂಥೋಣಿ ಸೆಬಾಸ್ಟಿಯನ್,
ಅಧ್ಯಕ್ಷರು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಪ್ರತ್ಯೇಕ ಆಯೋಗ ರಚನೆಯಾಗಲಿ

ಸಂಬಂಧಿಸಿದ ಎಲ್ಲ ಇಲಾಖೆಗಳ ಬೇಜವಾಬ್ದಾರಿಯಿಂದ ಬಾಲ್ಯವಿವಾಹ ತಡೆಯುವಲ್ಲಿ ಹಿನ್ನಡೆಯಾಗುತ್ತಿದೆ. ಜನಪ್ರತಿನಿಧಿಗಳು, ಪ್ರತಿಷ್ಠಿತರು, ಕುಟುಂಬದವರು, ಜಾತಿ ಬಾಂಧವರ ಬೆಂಬಲವಿರುವುದರಿಂದ, ಅವರು ವಿಭಿನ್ನ ಒತ್ತಡ ತರುತ್ತಾರೆ. ಇಂಥವರೆಲ್ಲರೂ ಈ ಬಾಲ್ಯವಿವಾಹವೆಂಬ 'ಸಾಮಾಜಿಕ ಅತ್ಯಾಚಾರ'ದ ಹೊಣೆಗಾರರು.

ಕೆಲ ಬಾರಿ ಬಾಲ್ಯವಿವಾಹ ನಡೆದಿದ್ದು ಗೊತ್ತಾಗುವ ಹೊತ್ತಿಗೆ ಹುಡುಗಿ ಗರ್ಭಿಣಿ ಆಗಿರುತ್ತಾಳೆ. ಅವಳ ಮತ್ತು ಹುಟ್ಟಲಿರುವ ಮಗುವಿನ ಭವಿಷ್ಯದ ದೃಷ್ಟಿಯಿಂದ ಪ್ರಕರಣ ದಾಖಲಾಗುವುದಿಲ್ಲ. ವಯಸ್ಸಿನ ಸುಳ್ಳು ದಾಖಲೆಗಳೂ ಸೃಷ್ಟಿಯಾಗುತ್ತವೆ. ಬಾಲ್ಯವಿವಾಹ ತಡೆಗೆ ಹಲವು ಇಲಾಖೆಗಳಿಗೆ ಜವಾಬ್ದಾರಿ ನೀಡಿರುವುದರಿಂದ, ಪರಸ್ಪರ ಸಹಕಾರ, ಹೊಂದಾಣಿಕೆ, ಸಮನ್ವಯದ ಕೊರತೆ ಇದೆ. ಪ್ರತಿ ಇಲಾಖೆಯೂ ಇನ್ನೊಂದರ ಮೇಲೆ ಆರೋಪ ಹೊರಿಸಿ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತವೆ.

ಇದನ್ನು ತಳಮಟ್ಟದಿಂದ ನಿಯಂತ್ರಿಸಲು ಒಂದು ಪ್ರತ್ಯೇಕ ಸಶಕ್ತ ಆಯೋಗದ ಅವಶ್ಯಕತೆ ಇದೆ. ಮಕ್ಕಳ ಹಕ್ಕುಗಳು ಮತ್ತು ಉಲ್ಲಂಘನೆಯ ಶಿಕ್ಷೆಯ ಕುರಿತು ಸಮಾಜದಲ್ಲಿ ಆಮೂಲಾಗ್ರ ಜಾಗೃತಿ ಮೂಡಿಸಬೇಕು. ಜೊತೆಗೆ, ಲೋಪವಿಲ್ಲದಂತೆ ಕಾನೂನು ಅನುಷ್ಠಾನವಾಗಬೇಕು.

'18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣಿನ ಜೊತೆಗೆ ನಡೆಸುವ ಲೈಂಗಿಕ ಕ್ರಿಯೆ, ಮದುವೆಯಾಗಿದ್ದರೂ ಆಗದಿದ್ದರೂ ಅತ್ಯಾಚಾರವೇ' ಎಂದು ಸುಪ್ರೀಂ ಕೋರ್ಟ್ ಪ್ರಬಲವಾಗಿ ಕಾನೂನು ತಿದ್ದುಪಡಿ ಮಾಡಿದೆ. ಆದರೆ ಇದನ್ನು ಅನುಷ್ಠಾನಗೊಳಿಸುವಲ್ಲಿ ಮುಖ್ಯವಾಗಿ ಪೊಲೀಸ್ ಇಲಾಖೆಯ ವೈಫಲ್ಯ ಎದ್ದು ಕಾಣುತ್ತಿದೆ.

ರೂಪ ಹಾಸನ, ಸಾಮಾಜಿಕ ಕಾರ್ಯಕರ್ತೆ

ಬಾಲ್ಯಕ್ಕೆ ಮದುವೆ ಸಂಕೋಲೆ

ಒಂದನೇ ಪುಟದಿಂದ...

ಲಾಕ್‌ಡೌನ್ ಮೊದಲ ಅವಧಿಯಲ್ಲಿ ಹಳ್ಳಿ–ಹಳ್ಳಿಗಳಲ್ಲೂ ಪೊಲೀಸರ ಓಡಾಟವಿತ್ತು. ಯಾವುದೇ ಚಟುವಟಿಕೆಗೆ ಆಸ್ಪದ ಇರಲಿಲ್ಲ. ಆದರೆ ಎರಡನೇ ಅವಧಿ ಅದಕ್ಕೆ ವ್ಯತಿರಿಕ್ತವಾಗಿತ್ತು ಎನ್ನುತ್ತಾರೆ. ಮದುವೆ ತಡೆಯಲು ಅಧಿಕಾರಿಗಳು ಬಾರದಂತೆ ತಡೆಯಲು ಸರ್ಕಾರಿ ರಜೆ, ಹಬ್ಬ–ಹರಿದಿನ, ಭಾನುವಾರ ಬೆಳಗಿನ ಜಾವ ಇಲ್ಲವೇ ತಡರಾತ್ರಿ ಧಾರೆ ಮುಹೂರ್ತ ಇಟ್ಟುಕೊಳ್ಳಲಾಗುತ್ತಿದೆ.

ಸೆಕ್ಷನ್ 13 ಬಳಕೆಗೆ ಸೂಚನೆ: 'ಲಾಕ್‌ಡೌನ್ ಅವಧಿಯಲ್ಲಿ ಬಾಲ್ಯವಿವಾಹ ಹೆಚ್ಚಿವೆ. ಮೈಸೂರು, ಬಳ್ಳಾರಿ, ಬಾಗಲಕೋಟೆ, ಬೆಳಗಾವಿ ಮುಂಚೂಣಿಯಲ್ಲಿವೆ. ಇದು ನಮ್ಮ ಗಮನಕ್ಕೂ ಬಂದಿದೆ. ಅದಕ್ಕೆ ತಡೆ ಹಾಕಲು ಬಾಲ್ಯ ವಿವಾಹ ನಿಷೇಧ ಕಾಯ್ದೆ 2006ರ ಸೆಕ್ಷನ್ 13 ಬಳಸಿಕೊಳ್ಳುವಂತೆ ಎಲ್ಲ ಬಾಲ್ಯ ವಿವಾಹ ತಡೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯೆ ಭಾರತಿ ವಾಳ್ವೇಕರ ಹೇಳುತ್ತಾರೆ.

ಭಾರತಿ ವಾಳ್ವೇಕರ

ಸೆಕ್ಷನ್ 13 ಈ ಮೊದಲು ಅಷ್ಟಾಗಿ ಬಳಕೆ ಆಗುತ್ತಿರಲಿಲ್ಲ. ಯಾರಾದರೂ ಬಾಲ್ಯ ವಿವಾಹಕ್ಕೆ ಸಿದ್ಧತೆ ನಡೆಸಿದ್ದಾರೆ ಎಂಬ ಮಾಹಿತಿ ಸಿಕ್ಕರೆ ತಕ್ಷಣ ಆಯಾ ಜಿಲ್ಲೆಯ ಹಿರಿಯ ಸಿವಿಲ್ ನ್ಯಾಯಾಲಯ ಇಲ್ಲವೇ ಕೌಟುಂಬಿಕ ನ್ಯಾಯಾಲಯದಿಂದ ಅದಕ್ಕೆ ತಡೆಯಾಜ್ಞೆ (ಇಂಜೆಂಕ್ಷನ್) ಕೊಡಿಸಬಹುದಾಗಿದೆ. ನಿಗದಿತ ವಯಸ್ಸು ತುಂಬುವವರೆಗೂ ಮಕ್ಕಳಿಗೆ ಮದುವೆ ಮಾಡದಂತೆ ಪೋಷಕರಿಗೆ ನೀಡುವ ಸೂಚನೆಯನ್ನೂ ಒಳಗೊಂಡಿರುತ್ತದೆ. ಪಿಡಿಒ ಸೇರಿದಂತೆ 17 ವಿವಿಧ ಇಲಾಖೆಗಳ ಅಧಿಕಾರಿ–ಸಿಬ್ಬಂದಿ ಸಿಎಂಪಿಒ ಮನ್ನಣೆ ಹೊಂದಿದ್ದಾರೆ.

'ಬಾಲ್ಯವಿವಾಹ ನಿಷೇಧ ಕಾಯ್ದೆಯಡಿ ತಪ್ಪಿತಸ್ಥರಿಗೆ ಈಗಿರುವ ಗರಿಷ್ಠ 2 ವರ್ಷ ಶಿಕ್ಷೆಯನ್ನು 5ರಿಂದ 7 ವರ್ಷಗಳಿಗೆ ಹೆಚ್ಚಿಸುವಂತೆ, ಹೆಚ್ಚಿನ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳಲು ಮಾರ್ಗಸೂಚಿ ರೂಪಿಸುವಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಪ್ರಸ್ತಾವ ಸಲ್ಲಿಸಿದ್ದೇವೆ' ಎಂದು ಭಾರತಿ ಹೇಳುತ್ತಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 29-8-1996

● **ದಳದ 6 ಮೇಲ್ಮನೆ ಸದಸ್ಯರು ಹೆಗಡೆ ವೇದಿಕೆಗೆ**

ಬೆಂಗಳೂರು, ಆಗಸ್ಟ್ 28– ಜನತಾ ದಳದ ಮಹಾ ಕಾರ್ಯದರ್ಶಿ ಡಾ.ಎಂ.ಪಿ ನಾಡ ಗೌಡ ಅವರೂ ಸೇರಿದಂತೆ ಸೇರಿದಂತೆ ಆರು ಮಂದಿ ಜನತಾ ದಳದ ವಿಧಾನ ಪರಿಷತ್ತಿನ ಸದಸ್ಯರು ಉಚ್ಚಾಟಿತ ನಾಯಕ ರಾಮಕೃಷ್ಣ ಹೆಗಡೆ ಅವರ ನವ ನಿರ್ಮಾಣ ವೇದಿಕೆಗೆ ಸೇರಿರುವುದರಿಂದಾಗಿ ರಾಜ್ಯದ ಆಡಳಿತಾರೂಢ ಜನತಾ ದಳಕ್ಕೆ ಮೊದಲ ಪೆಟ್ಟು ಬಿದ್ದಂತಾಗಿದೆ.

ಕೇವಲ ಜನತಾ ದಳದ ಸದಸ್ಯರಷ್ಟೇ ಅಲ್ಲದೆ, ಜನತಾ ದಳದ ಸಹಸದಸ್ಯ ಬಸವರಾಜ ಹೊರಟ್ಟಿ ಅವರು ಕೂಡ ದಳದ ಸಂಬಂಧವನ್ನು ಕಡಿದುಕೊಂಡು ರಾಷ್ಟ್ರೀಯ ನವ ನಿರ್ಮಾಣ ವೇದಿಕೆ ಸೇರಿರುವುದರಿಂದ ವೇದಿಕೆಗೆ ಮತ್ತಷ್ಟು ಬಲ ಬಂದಂತಾಗಿದೆ. ವಿಧಾನ ಪರಿಷತ್ತಿನ ಸಭಾಪತಿ ಡಿ.ಬಿ. ಕಲ್ಮಣ್ಕರ್ ಅವರಿಗೆ ಪತ್ರ ಬರೆದಿರುವ ಈ ಏಳು ಮಂದಿ ಸದಸ್ಯರು ತಾವು ಜನತಾ ದಳಕ್ಕೆ ರಾಜೀನಾಮೆ ನೀಡುತ್ತಿರುವುದರಿಂದ ಸದನದಲ್ಲಿ ತಮಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಿಕೊಡಬೇಕೆಂದು ಕೋರಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 29-8-1971

● **ಕಾವೇರಿ ಜಲವಿವಾದ– ಕೇರಳ ಪ್ರತಿವಾದಿ: ಸುಪ್ರೀಂ ಕೋರ್ಟಿನಲ್ಲಿ ಅನುಮತಿಗಾಗಿ ಅರ್ಜಿ**

ನವದೆಹಲಿ, ಆಗಸ್ಟ್ 28– ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಹಾಗೂ ಮೈಸೂರು ಸರ್ಕಾರಗಳ ವಿರುದ್ಧ ತಮಿಳುನಾಡು ಸರ್ಕಾರ ಹೂಡಿರುವ ದಾವೆಯಲ್ಲಿ ತನ್ನನ್ನು ಪ್ರತಿವಾದಿಯಾಗಿ ಸೇರಿಸಿಕೊಳ್ಳುವಂತೆ ಕೇಳಿ ಕೇರಳ ಸರ್ಕಾರ ಇಂದು ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿತು.

'ಕಾವೇರಿ ನದಿ ಮುಖಜ ಭೂಮಿಗೆ ಸೇರಿದ ಕೇರಳ, ಕಾವೇರಿ ನದಿ ನೀರಿಗೆ ಗಣನೀಯ ಪ್ರಮಾಣದಲ್ಲಿ ತನ್ನ ಕಾಣಿಕೆ ನೀಡಿದೆ. ಆದ್ದರಿಂದ ತಮಿಳುನಾಡು ಸರ್ಕಾರ ಹೂಡಿರುವ ದಾವೆಯ ವಿಷಯದಲ್ಲಿ ಕೇರಳ ಕಾನೂನು ಬದ್ಧವಾದ ಹಾಗೂ ಮಹತ್ವದ ಆಸಕ್ತಿ ಹೊಂದಿದೆ' ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ತಮಿಳುನಾಡುವ ಸರ್ಕಾರದ ದಾವೆಯಲ್ಲಿ ಹಾಗೂ ಅದು ಕೋರಿರುವ ಪರಿಹಾರದಲ್ಲಿ ತನಗೆ ನೇರ ಆಸಕ್ತಿ ಇದೆಯೆಂದು ಕೇರಳ ಸರ್ಕಾರ ತಿಳಿಸಿದೆ.

ದಿನ ಭವಿಷ್ಯ

ಭಾನುವಾರ ಆಗಸ್ಟ್ 29, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮಖಾ ಸಪ್ತಮಿ ಗಂ. 38-32 (ರಾ. 9-40) ಭಾನುವಾರ ನಿತ್ಯ ನಕ್ಷತ್ರ ಕೃತ್ತಿಕಾ ಗಂ. 59-39 (ಬೆ.ಘಾ. 6-06) ಧ್ರುವ ನಾಮ ಯೋಗ ಗಂ. 3-49 ಭದ್ರೆ ಕರಣ ಗಂ. 6-10 ವಿಷ ಗಂ. 26-34 ಅಮೃತ ಗಂ. 53-9 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-12 ಸೂರ್ಯಾಸ್ತ: 6-31 ಅದೃಷ್ಟ ಸಂಖ್ಯೆ 6

ಮೇಷ: ನಿರಾಯಾಸವಾಗಿ ಕೆಲಸ–ಕಾರ್ಯಗಳನ್ನು ಸಾಧಿಸಲಿದ್ದೀರಿ. ಸಂಘ ಸಂಸ್ಥೆಗಳ ಸಹಕಾರ ದೊರೆತು ಕಾರ್ಯಾನುಕೂಲ. ಅಧ್ಯಯನಶೀಲರು ಅಧ್ಯಯನದಲ್ಲಿ ಮುನ್ನಡೆಯನ್ನು ಕಂಡುಕೊಳ್ಳುವಿರಿ. ಮಾನಸಿಕ ಶಾಂತಿ ನೆಮ್ಮದಿ.

ವೃಷಭ: ವ್ಯಾಪಾರ, ವ್ಯವಹಾರಗಳಲ್ಲಿ ವಿಶೇಷ ಲಾಭ. ಪ್ರೀತಿಪಾತ್ರರ ಭೇಟಿಯಿಂದ ಮನಸ್ಸಿನಲ್ಲಿ ಉಂಟಾದ ಆತಂಕಗಳು ಶಮನಗೊಳ್ಳಲಿವೆ. ಉದ್ಯೋಗದಲ್ಲಿರುವವರಿಗೆ ಸ್ವಲ್ಪಮಟ್ಟಿನ ಕಿರಿ ಕಿರಿ ಉಂಟಾಗುವ ಸಾಧ್ಯತೆ.

ಮಿಥುನ: ಲೇವಾದೇವಿ ವ್ಯವಹಾರದಲ್ಲಿರುವವರಿಗೆ ಸ್ವಲ್ಪ ಮಟ್ಟಿನ ಹಿನ್ನಡೆ. ವಿನಾಕಾರಣ ಮನೆ ಮಂದಿಯೊಂದಿಗಿನ ದುಡುಕಿನಿಂದಾಗಿ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ. ಸಂಗಾತಿಯ ಸಮಾಧಾನದಿಂದ ಅನುಕೂಲ.

ಕರ್ಕಾಟಕ: ನಿರೀಕ್ಷೆಯಂತೆ ನಿತ್ಯದ ಕೆಲಸ–ಕಾರ್ಯಗಳು ಸಾಗಿ ಜೀವನಾಧಾರ ಮೂಡಿಸಲಿದೆ. ಕ್ರೀಡಾಪಟುಗಳಿಗೆ ಯಶಸ್ಸಿನ ದಿನವಾಗಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆಗೆ ಅನುಕೂಲ. ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

ಸಿಂಹ: ಹೊಸ ವಾಹನವೊಂದರ ಖರೀದಿ ಮಾಡುವ ಸಲುವಾಗಿ ಮಿತ್ರರೊಂದಿಗೆ ಚರ್ಚೆ ಮಾಡಲಿದ್ದೀರಿ. ಜಮೀನು ಅಥವಾ ನಿವೇಶನ ಖರೀದಿ ಮಾಡುವ ಆಲೋಚನೆ ಕೈಗೂಡುವ ಸಾಧ್ಯತೆ. ಅಲ್ಪ ಪ್ರಮಾಣದ ಕಿರಿಕಿರಿ ಉಂಟಾದೀತು.

ಕನ್ಯಾ: ಬಹುದಿನಗಳಿಂದ ನಡೆಯುತ್ತಿದ್ದ ತಂಟೆ ತಕರಾರುಗಳು ಬಗೆಹರಿದು ನಿಶ್ಚಿಂತರಾಗಲಿದ್ದೀರಿ. ಕೋಪ ತಾಪಗಳಿಂದಾಗಿ ವ್ಯವಹಾರದಲ್ಲಿ ಹಿನ್ನಡೆ. ಅಹಿತಕರ ಘಟನೆಗಳಿಗೆ ಆಸ್ಪದವಾಗದಂತೆ ಎಚ್ಚರಿಕೆ ವಹಿಸುವುದು ಉತ್ತಮ.

ತುಲಾ: ಉದ್ಯೋಗದಲ್ಲಿ ಒತ್ತಡದ ವಾತಾವರಣದಿಂದಾಗಿ ಮಾನಸಿಕ ಚಂಚಲತೆ. ಲೇವಾದೇವಿ ವ್ಯವಹಾರಸ್ಥರಿಗೆ ಹಿನ್ನಡೆ ಉಂಟಾಗುವ ಸಾಧ್ಯತೆ. ಮಕ್ಕಳೊಂದಿಗೆ ವೃಥಾ ವಾಗ್ವಾದ ಸಲ್ಲದು. ಆರೋಗ್ಯದ ಕಡೆ ಗಮನ ವಹಿಸಿ.

ವೃಶ್ಚಿಕ: ಧೈರ್ಯದ ನಡೆಯಿಂದಾಗಿ ಕಾರ್ಯ ಕಲಾಪಗಳು ಸರಾಗವಾಗಿ ಸಾಗಲಿವೆ. ವ್ಯಾಪಾರದಲ್ಲಿ ತೊಡಗಿರುವವರು ಲಾಭದಲ್ಲಿ ವೃದ್ಧಿ. ಆತ್ಮೀಯರೊಂದಿಗೆ ಸಮಾಲೋಚನೆಯಲ್ಲಿ ಭಾಗವಹಿಸಲಿದ್ದೀರಿ.

ಧನು: ಹೊಸ ಹೊಸ ವಿಚಾರಗಳ ಬಗ್ಗೆ ಹಿರಿಯರೊಂದಿಗೆ ಚರ್ಚಿಸಿ ಮುಂದುವರೆಯುವುದರಿಂದ ಯಶಸ್ಸು. ಸಂತೋಷದ ಸುದ್ದಿಯೊಂದನ್ನು ಕೇಳಲಿದ್ದೀರಿ. ಸಾಮಾಜಿಕ ಗೌರವಾದರಗಳು ಪ್ರಾಪ್ತವಾಗುವ ಸಾಧ್ಯತೆ ಕಂಡುಬರುತ್ತಿದೆ.

ಮಕರ: ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಆಸಲ್ಯ ಮನೋಭಾವ ಸಲ್ಲದು. ಕೆಲಸ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ಅಡಚಣೆ. ನಿಮ್ಮ ತಪ್ಪುಗಳು ಅರಿವಾಗುವುದರಿಂದ ಹಳೆಯ ವೈಷಮ್ಯಗಳು ದೂರವಾಗಿ ಬಾಂಧವ್ಯ ವೃದ್ಧಿ.

ಕುಂಭ: ಉದ್ಯೋಗದಲ್ಲಿ ಪ್ರಗತಿ. ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ. ಪ್ರೀತಿಪಾತ್ರರೊಬ್ಬ ಭೇಟಿಯಿಂದಾಗಿ ಮಾನಸಿಕ ನೆಮ್ಮದಿ ಮೂಡಿಬರಲಿದೆ. ಲೇವಾದೇವಿ ವ್ಯವಹಾರಸ್ಥರಿಗೆ ಉತ್ತಮ ಲಾಭ ತರುವ ದಿನವಾಗಿದೆ.

ಮೀನ: ದೃಢ ನಿರ್ಧಾರವೊಂದನ್ನು ತೆಗೆದುಕೊಳ್ಳಲಿದ್ದೀರಿ. ಉದ್ಯೋಗಸ್ಥರಿಗೆ ಬಡ್ತಿ ಅಥವಾ ಉನ್ನತಿ. ವ್ಯಾಪಾರ ವ್ಯವಹಾರದಲ್ಲಿ ಮುನ್ನಡೆ ಸಾಧಿಸಲಿದ್ದೀರಿ. ಹಿತೈಷಿಗಳೊಬ್ಬರ ಆಗಮನ ಸಾಧ್ಯತೆ ಕಂಡುಬರುವುದು.

ನಿಮ್ಮ ಜನ್ಮದಿನ 29-ಆಗಸ್ಟ್ ಇಂದು ಅತ್ಯಂತ ಶುಭದಾಯಕ. ವ್ಯಾವಹಾರಿಕ ಹಿನ್ನಡೆ ಉಂಟಾಗುವ ಸಾಧ್ಯತೆ. ಹಿರಿಯ ಅಧಿಕಾರಿಗಳೊಡನೆ ಉನ್ನತ ಮಟ್ಟದ ವಿಚಾರಗೋಷ್ಠಿ ಹಾಗೂ ಭೋಜನಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ. ಸಮಾರಂಭಗಳಲ್ಲಿ ಗಣ್ಯವ್ಯಕ್ತಿಗಳಾಗಿ ವಿಜೃಂಭಿಸುವ ಅವಕಾಶಗಳು ಒದಗಿಬರಲಿವೆ. ಮಕ್ಕಳ ಪ್ರಗತಿಯಿಂದಾಗಿ ನೆಮ್ಮದಿಯನ್ನು ಕಾಣುವಿರಿ.

ಪದಬಂಧ 4703 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಸ್ವೀಕರಿಸಲು ಹಿತವಲ್ಲದ ದಾನ (3)
5.ನೀರಿನಲ್ಲಿ ಆಡುವ ವಿನೋದದ ಆಟ (4)
6.ನಾಮ ಹಚ್ಚಿಕೊಂಡವನ ಹೆಸರು (4)
7.ಕೊಳೆ ಇಲ್ಲಿ ಕಾಣುತ್ತಿದೆ (2)
9.ತಿರುಗಿ ಹೀಗೆ ಸಂತೋಷ ಪಡು (2)
13.ಚರಿತ್ರೆಗೆ ಸಂಬಂಧಿಸಿದ್ದು (4)
14.ಈತ ಸೈನ್ಯದ ಮುಖ್ಯಸ್ಥ (4)
15.ರಸದಲ್ಲಿರುವ ವೇಗ (3)

ಮೇಲಿಂದ ಕೆಳಕ್ಕೆ
1.ಈತ ಲಗ್ನವಾಗುತ್ತಿರುವವನು (4)
2.ಮಂದಿಗೆಲ್ಲಾ ಒಡೆಯನೀತ (5)
3.ಸುಳಿವು ಇಲ್ಲದೆ (3)
5.ಗೆಲುವನ್ನು ಪಡೆದವನು (4)
8.ಒಳ್ಳೆಯ ನಡತೆಯಿದು (4)
10.ಹಳೆಯದನ್ನು ಪುನಃ ಹೊಸತು ಮಾಡುವಿಕೆ (5)
11.ಕೆಟ್ಟ ಚಟವಿದು (4)
12.ಹೆಣ್ಣು ಹಾವು ಇಲ್ಲಿದೆ (3)



4702ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಂತಸ 4.ಮಾವಟಿಗ 6.ವಿನಿಯೋಗ 8.ನರಕ 11.ವಲ್ಲರಿ 13.ಪರಿಕರ 16.ಸಮುದಾಯ 17.ಶಕ್ಕಲು

ಮೇಲಿಂದ ಕೆಳಕ್ಕೆ: 2.ಸಮಾಧಾನ 3.ತೆಗ್ಗು 4.ಮೋ 5.ಗವಿ 7.ಗರ್ಜನೆ 9.ಕಕವ 10.ಬಳಪ 12.ರಿಯಾಯತಿ 14.ರವಾಜು 15.ರಸ

ಸುಡೊಕು 5089

9	2			5		8	4	
			3		9			1
	4			1			5	7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5088 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೇರಳ: ಮುಂದಿನ ವಾರದಿಂದ ರಾತ್ರಿ ಕರ್ಫ್ಯೂ ಜಾರಿ

ತಿರುವನಂತಪುರ (ಪಿಟಿಐ): 'ಕೋವಿಡ್ ಹರಡುವುದನ್ನು ತಡೆಗಟ್ಟಲು ರಾಜ್ಯದಲ್ಲಿ ಮುಂದಿನ ವಾರದಿಂದ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗುವುದು' ಎಂದು ಶನಿವಾರ ಕೇರಳ ಸರ್ಕಾರ ಘೋಷಿಸಿದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ನೇತೃತ್ವದಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಮುಂದಿನ ವಾರದಿಂದ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6ಗಂಟೆಯವರೆಗೆ ಕರ್ಫ್ಯೂ ಜಾರಿಗೊಳಿಸಲು ನಿರ್ಣಯ ಕೈಗೊಳ್ಳಲಾಗಿದೆ.

'ಸೋಂಕಿನ ಅನುಪಾತ ಶೇ 7ಕ್ಕಿಂತ ಹೆಚ್ಚಿರುವ ಪ್ರದೇಶಗಳಲ್ಲಿ ಸರ್ಕಾರವು ಲಾಕ್‌ಡೌನ್ ಕೈಗೊಳ್ಳಲಿದೆ. ಆ. 29ರ (ಭಾನುವಾರ) ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗುವುದು' ಎಂದು ವಿಜಯನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಹರಿಯಾಣ– ಲಾಠಿಚಾರ್ಜ್ 10 ಮಂದಿ ರೈತರಿಗೆ ಗಾಯ

ಚಂಡೀಗಡ (ಪಿಟಿಐ): ಹರಿಯಾಣದಲ್ಲಿ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ನೇತೃತ್ವದಲ್ಲಿ ನಡೆಯುತ್ತಿದ್ದ ಬಿಜೆಪಿ ಸಭೆಯ ವಿರುದ್ಧ ಪ್ರತಿಭಟಿಸಲು ಕರ್ನಾಲ್ ಕಡೆಗೆ ಹೊರಟಿದ್ದ ರೈತರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದು, 10 ಮಂದಿ ಗಾಯಗೊಂಡರು. ವಾಹನಸಂಚಾರಕ್ಕೆ ಅಡ್ಡಿಪಡಿಸಿದ ಆರೋಪಡಿ ಲಾಠಿಚಾರ್ಜ್ ಆಗಿದೆ.

ಸಭೆಯಲ್ಲಿ ಮುಖ್ಯಮಂತ್ರಿ ಅಲ್ಲದೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಓಂ ಪ್ರಕಾಶ್ ಧನಕರ್ ಮತ್ತು ಇತರ ಮುಖಂಡರು ಪಾಲ್ಗೊಂಡಿದ್ದರು. ರೈತರ ಮೇಲಿನ ಲಾಠಿಚಾರ್ಜ್‌ಗೆ ತೀವ್ರ ಆಕ್ರೋಶ ವ್ಯಕ್ತವಾಗಿದ್ದು, ವಿವಿಧೆಡೆ ರಸ್ತೆ ತಡೆ, ಧರಣಿ, ಪ್ರತಿಭಟನೆ ನಡೆಯಿತು.

ಫತೇಹಾಬಾದ್-ಚಂಡೀಗಡ, ಗೊಹಾನ-ಪಾಣಿಪತ್, ಜಿಂದ್-ಪಟಿಯಾಲ ಹೆದ್ದಾರಿ, ಅಂಬಾಲಾ-ಚಂಡೀಗಡ ಮತ್ತು ಹಿಸಾರ್-ಚಂಡೀಗಡ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರತಿಭಟನೆಯಿಂದಾಗಿ ಸಂಚಾರ ಅಸ್ತವ್ಯಸ್ತಗೊಂಡಿತು.

ಪೊಲೀಸರ ಲಾಠಿಚಾರ್ಜ್ ನಿಂದ ಹಲವು ರೈತರು ಗಾಯಗೊಂಡಿದ್ದಾರೆ' ಎಂದು ಹರಿಯಾಣ ಭಾರತೀಯ ಕಿಸಾನ್ ಸಂಘದ (ಚದುನಿ) ಅಧ್ಯಕ್ಷ ಗುರ್ನಾಮ್ ಸಿಂಗ್ ಆರೋಪಿಸಿದರು. ಲಾಠಿಚಾರ್ಜ್ ಅನ್ನು ಭಾರತೀಯ ರಾಷ್ಟ್ರೀಯ ಲೋಕದಳ ಹಿರಿಯ ನಾಯಕ ಅಭಯ್ ಸಿಂಗ್ ಚೌತಾಲಾ ಅವರೂ ಕಟುವಾಗಿ ಟೀಕಿಸಿದ್ದಾರೆ.

ಸೆಕ್ಷನ್ 144 ಹೇರಲಾಗಿತ್ತು. ವಾಹನ ಸಂಚಾರಕ್ಕೆ ಅಡ್ಡಿಪಡಿಸುತ್ತಿದ್ದ ರೈತರನ್ನು ಚದುರಿಸಲು ಲಾಠಿಪ್ರಹಾರ ನಡೆಸಿದ್ದು, ಅಲ್ಪಸಂಖ್ಯೆಯಲ್ಲಿ ಸಿಬ್ಬಂದಿ ಹಾಜರಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಅಂತಿಮ ಹಂತದಲ್ಲಿ ತೆರವು ಕಾರ್ಯಾಚರಣೆ; ದೇಶದಲ್ಲಿ ತೀವ್ರ ಬರಗಾಲದ ಭೀತಿ

ಹದಗೆಡುತ್ತಿರುವ ಅಫ್ಗನ್ ಪರಿಸ್ಥಿತಿ

ಕಾಬೂಲ್ (ಎಎಫ್‌ಪಿ/ಎಪಿ): ತಾಲಿಬಾನ್ ವಶವಾದ ಬಳಿಕ ಅಫ್ಗಾನಿಸ್ತಾನದ ಸ್ಥಿತಿ ಶೋಚನೀಯವಾಗುತ್ತಿದೆ. ನೂರಾರು ಅಫ್ಗನ್ ನಾಗರಿಕರು ಕಾಬೂಲ್‌ನ ಬ್ಯಾಂಕ್ ಎದುರು ಶನಿವಾರ ಪ್ರತಿಭಟನೆ ನಡೆಸಿದರು. ಎಟಿಎಂನಿಂದ ಹಣ ಹಿಂತೆಗೆದುಕೊಳ್ಳಲು ಜನರು ಸಾಲುಗಟ್ಟಿ ನಿಂತಿರುವ ದೃಶ್ಯ ಸಾಮಾನ್ಯವಾಗಿದೆ.

ಅಫ್ಗಾನಿಸ್ತಾನದಲ್ಲಿ ತೀವ್ರ ಬರಗಾಲ ಎದುರಾಗಲಿದ್ದು, ನೆರವಿನ ಅಗತ್ಯವಿದೆ ಎಂದು ವಿಶ್ವಸಂಸ್ಥೆ ತಿಳಿಸಿದೆ. ಗುರುವಾರ ನಡೆದ ಆತ್ಮಾಹುತಿ ದಾಳಿಯಲ್ಲಿ 169 ಅಫ್ಗನ್ನರು ಮತ್ತು 13 ಅಮೆರಿಕದ ಸೈನಿಕರು ಬಲಿಯಾಗಿದ್ದರೂ, ಕಾಬೂಲ್ ವಿಮಾನ ನಿಲ್ದಾಣದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದಾರೆ.

ಪ್ರತಿಭಟನೆ: ಕಾಬೂಲ್ ಬ್ಯಾಂಕ್ ಎದುರು ಶನಿವಾರ ಭಾರಿ ಪ್ರತಿಭಟನೆ ನಡೆಯಿತು. ಸರ್ಕಾರಿ ನೌಕರರು ತಮ್ಮ ವೇತನ ಪಾವತಿಗೆ ಆಗ್ರಹಿಸಿ ಧರಣಿ ನಡೆಸಿದರು. ಕಳೆದ ಆರು ತಿಂಗಳಿಂದ ಬಾಕಿ ಇರುವ ಸಂಬಳ ಪಾವತಿಗೆ ಅವರು ಬೇಡಿಕೆ ಇಟ್ಟಿದ್ದಾರೆ. ಮೂರು ದಿನಗಳ ಹಿಂದೆ ಬ್ಯಾಂಕ್‌ಗಳು ಪುನರಾರಂಭವಾಗಿದ್ದರೂ, ಯಾರಿಗೂ ಹಣ ಹಿಂಪಡೆಯಲು ಆಗಿಲ್ಲ ಎಂದು ಆರೋಪಿಸಿದ್ದಾರೆ. ಎಟಿಎಂ ಯಂತ್ರಗಳು ಕಾರ್ಯ ನಿರ್ವಹಿಸುತ್ತಿದ್ದರೂ, ದಿನವೊಂದಕ್ಕೆ 200 ಡಾಲರ್ ಮಾತ್ರ ವಿತ್‌ಡ್ರಾ ಮಾಡಲು ಅವಕಾಶವಿದೆ. ಹೀಗಾಗಿ, ಜನರ ದೊಡ್ಡ ಸಾಲು ಕಂಡುಬರುತ್ತಿದೆ.

ಬರದ ಭೀತಿ: ದೇಶದಲ್ಲಿ ತೀವ್ರ ಬರ ಎದುರಾಗಲಿದ್ದು, ಸುಮಾರು 70 ಲಕ್ಷ ಜನರ ಬದುಕು ಅಪಾಯಕ್ಕೆ ಸಿಲುಕಲಿದೆ ಎಂದು ರೋಮ್ ಮೂಲದ ಆಹಾರ ಮತ್ತು ಕೃಷಿ ಸಂಘಟನೆ ಎಚ್ಚರಿಕೆ ನೀಡಿದೆ. ಬರದ ಜೊತೆಗೆ ಕೋವಿಡ್ ಹಾಗೂ ಸ್ಥಳಾಂತರದ ಸಮಸ್ಯೆಯನ್ನು ಜನರು ಒಟ್ಟೊಟ್ಟಿಗೇ ಎದುರಿಸಬೇಕಿದೆ ಎಂದು ಸಂಸ್ಥೆ ತಿಳಿಸಿದೆ. 1.4 ಕೋಟಿ ಜನರು ಅಥವಾ ಪ್ರತಿ ಮೂವರು ಅಫ್ಗನ್ನರಲ್ಲಿ ಒಬ್ಬರಿಗೆ ತುರ್ತು ಆಹಾರದ ಅಗತ್ಯ ಬೀಳಲಿದೆ ಎಂದು ವಿಶ್ವಸಂಸ್ಥೆಯ ಆಹಾರ ಕಾರ್ಯಕ್ರಮ ವೇದಿಕೆಯು, ಇದೇ ತಿಂಗಳ ಆರಂಭದಲ್ಲಿ ಎಚ್ಚರಿಸಿತ್ತು.

ವಿಶ್ವಸಂಸ್ಥೆ ಮತ್ತು ಇತರ ಮಿತ್ರರಾಷ್ಟ್ರಗಳ ಮೂಲಕ ಅಫ್ಗಾನಿಸ್ತಾನಕ್ಕೆ ನೆರವು ನೀಡಲಾಗುವುದು ಎಂದು ಅಮೆರಿಕ ತಿಳಿಸಿದೆ. ತಾಲಿಬಾನ್ ಈ ಮೊದಲು ನೀಡಿದ ಭರವಸೆಯಂತೆ ಉತ್ತಮ ಸರ್ಕಾರ ನೀಡಿದಲ್ಲಿ, ಅದರ ಜೊತೆ ಸಂಬಂಧ ಮುಂದುವರಿಸುವುದಾಗಿ ತಿಳಿಸಿದೆ. ಆತ್ಮಾಹುತಿ ದಾಳಿಯ ನಂತರ ದೊಡ್ಡ ಜನಸಂದಣಿಯನ್ನು ನಿಯಂತ್ರಿಸಲು ತಾಲಿಬಾನ್ ಶನಿವಾರ ಹೆಚ್ಚುವರಿ ಪಡೆಗಳನ್ನು ನಿಯೋಜಿಸಿದೆ. ವಿಮಾನ ನಿಲ್ದಾಣಕ್ಕೆ ಹೋಗುವ ಮಾರ್ಗದ ಎಲ್ಲ ರಸ್ತೆಗಳಲ್ಲಿ ತಾಲಿಬಾನ್ ಸೈನಿಕರು ಬಿಗಿ ಬಂದೋಬಸ್ತ್ ಮಾಡಿದ್ದಾರೆ.

ಶಸ್ತ್ರಾಸ್ತ್ರ ಕಳ್ಳಸಾಗಣೆಗೆ ತಡೆ (ಪೆಶಾವರ ವರದಿ): ಅಮೆರಿಕ ಹಾಗೂ ನ್ಯಾಟೋ ಪಡೆಗಳು ಬಳಸಿದ ವಿದೇಶಿ ನಿರ್ಮಿತ ಶಸ್ತ್ರಾಸ್ತ್ರಗಳನ್ನು ಅಫ್ಗಾನಿಸ್ತಾನದಿಂದ ಕಳ್ಳಸಾಗಣೆ ಮಾಡುವ ಪ್ರಯತ್ನವನ್ನು ಪಾಕಿಸ್ತಾನದ ಕಸ್ಟಮ್ಸ್ ಅಧಿಕಾರಿಗಳು ಶನಿವಾರ ವಿಫಲಗೊಳಿಸಿದ್ದಾರೆ.

ತೋರ್ಖಾಮ್ ಗಡಿಯಲ್ಲಿ ಪಾಕಿಸ್ತಾನಕ್ಕೆ ಸೇರಿದ ಟ್ರಕ್‌ವೊಂದರಲ್ಲಿ ಸಾಗಿಸುತ್ತಿದ್ದ ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ.

ಹಣ ಹಿಂಪಡೆಯಲು ಕಾಬೂಲ್‌ನ ಬ್ಯಾಂಕ್‌ವೊಂದರ ಮುಂದೆ ಜಮಾವಣೆಯಾಗಿರುವ ಜನ –ಎಎಫ್‌ಪಿ ಚಿತ್ರ

ಐಎಸ್ ಗುರಿಯಾಗಿಸಿ ಅಮೆರಿಕದಿಂದ ಡ್ರೋನ್ ದಾಳಿ

ವಾಷಿಂಗ್ಟನ್ (ಪಿಟಿಐ/ಎಎಫ್‌ಪಿ): 169 ಅಫ್ಗನ್ ಪ್ರಜೆಗಳು ಹಾಗೂ 13 ಅಮೆರಿಕ ಸೈನಿಕರನ್ನು ಆತ್ಮಾಹುತಿ ದಾಳಿಯಲ್ಲಿ ಕೊಂದ ಐಎಸ್ ವಿರುದ್ಧ ಅಮೆರಿಕ ಪ್ರತೀಕಾರ ತೀರಿಸಿಕೊಂಡಿದೆ.

ಪೂರ್ವ ಅಫ್ಗಾನಿಸ್ತಾನದಲ್ಲಿ ನಡೆಸಿದ ಡ್ರೋನ್ ದಾಳಿಯಲ್ಲಿ ಐಎಸ್ ಸಂಘಟನೆಯ ಇಬ್ಬರು ಅತ್ಯುನ್ನತ ಸಂಚುಕೋರರನ್ನು (ಪ್ಲ್ಯಾನರ್) ಹತ್ಯೆ ಮಾಡಲಾಗಿದೆ ಎಂದು ಪೆಂಟಗನ್ ಹೇಳಿದೆ. ಮತ್ತೊಬ್ಬ ಗಾಯಗೊಂಡಿದ್ದು, ಯಾವುದೇ ನಾಗರಿಕರಿಗೆ ತೊಂದರೆಯಾಗಿಲ್ಲ ಎಂದು ಮೇಜರ್ ಜನರಲ್ ಹಂಕ್ ಟೈಲರ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಐಎಸ್ ಸಂಘಟನೆಯ ಅಫ್ಗಾನಿಸ್ತಾನದ ವಿಭಾಗವಾದ ಐಎಸ್ ಖೊರಾಸನ್ ಅಥವಾ ಐಎಸ್–ಕೆ ಎಂದು ಕರೆಯಲಾಗುವ ಸಂಘಟನೆಯು ಗುರುವಾರ ಕಾಬೂಲ್ ವಿಮಾನ ನಿಲ್ದಾಣದಲ್ಲಿ ನಡೆದ ಆತ್ಮಾಹುತಿ ದಾಳಿಯ ಹೊಣೆ ಹೊತ್ತುಕೊಂಡಿತ್ತು.

'ಅಮೆರಿಕದ ಸೇನಾಪಡೆಗಳು ಐಎಸ್-ಕೆ ಸಂಚುಕೋರರ ವಿರುದ್ಧ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆ ನಡೆಸಿವೆ. ಅಫ್ಗಾನಿಸ್ತಾನದ ನಂಗಹಾರ್ ಪ್ರಾಂತ್ಯದಲ್ಲಿ ಮಾನವರಹಿತ ವೈಮಾನಿಕ ದಾಳಿ ನಡೆಸಿದ್ದು, ನಿಗದಿತ ಗುರಿ ಪೂರ್ಣಗೊಳಿಸಲಾಗಿದೆ' ಎಂದು ಸೆಂಟ್ರಲ್ ಕಮಾಂಡ್‌ನ ವಕ್ತಾರ ಕ್ಯಾಪ್ಟನ್ ಬಿಲ್ ಅರ್ಬನ್ ಹೇಳಿದ್ದಾರೆ.

ಕಾಬೂಲ್ ಆತ್ಮಾಹುತಿ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಜೊ ಬೈಡನ್ ಹೇಳಿದ ಮರುದಿನವೇ ಈ ದಾಳಿ ನಡೆದಿದೆ. ವಿಮಾನ ನಿಲ್ದಾಣದಲ್ಲಿ ದಾಳಿಯನ್ನು ಯೋಜಿಸಿದ ಭಯೋತ್ಪಾದಕರಿಗೆ ಇನ್ನು ಉಳಿಗಾಲವಿಲ್ಲ ಎಂದು ಬೈಡನ್ ಎಚ್ಚರಿಸಿದ್ದರು.

ಮತ್ತೊಂದು ದಾಳಿ?: ತೆರವು ಕಾರ್ಯಾಚರಣೆ ಮುಗಿದ ಬಳಿಕ ಕಾಬೂಲ್‌ನಲ್ಲಿ ಮತ್ತೊಂದು ದೊಡ್ಡ ಪ್ರಮಾಣದ ಆತ್ಮಾಹುತಿ ದಾಳಿ ನಡೆಯುವ ಸಾಧ್ಯತೆ ಇದೆ ಎಂದು ಭದ್ರತಾ ಸಲಹೆಗಾರರು ಬೈಡನ್ ಅವರಿಗೆ ಮಾಹಿತಿ ನೀಡಿದ್ದಾರೆ ಎಂದು ಶ್ವೇತಭವನ ತಿಳಿಸಿದೆ.

ತೆರವು ಪೂರ್ಣಗೊಳಿಸಿದ ಬ್ರಿಟನ್, ಇಟಲಿ

ಅಮೆರಿಕ ನೇತೃತ್ವದ ಮಿತ್ರರಾಷ್ಟ್ರಗಳು ಸೇರಿದಂತೆ ಬಹುತೇಕ ದೇಶಗಳು ಅಫ್ಗಾನಿಸ್ತಾನದಿಂದ ತೆರವು ಕಾರ್ಯಾಚರಣೆಯನ್ನು ಅಂತಿಮಗೊಳಿಸುವ ಹಂತದಲ್ಲಿವೆ.

ದೇಶ ತೊರೆಯುವ ಗಡುವು ಸಮೀಪಿಸುತ್ತಿದ್ದು, ಬ್ರಿಟನ್ ಶನಿವಾರ ತನ್ನ ಕೊನೆಯ ತೆರವು ಕಾರ್ಯಾಚರಣೆಯನ್ನು ಪೂರ್ಣಗೊಳಿಸಿತು. ತನ್ನ ಸೈನ್ಯವನ್ನು ಅಫ್ಗಾನಿಸ್ತಾನದಿಂದ ಹಿಂಪಡೆಯುವ ಮುನ್ನ ಕೊನೆಯ ತೆರವು ಕಾರ್ಯಾಚರಣೆ ಮುಗಿಸಲಾಗಿದೆ ಎಂದು ತಿಳಿಸಿದೆ. ನಾಗರಿಕರ ತೆರವಿನ ಬಳಿಕ, ಅಫ್ಗನ್‌ನಲ್ಲಿರುವ ತನ್ನ ಸೈನ್ಯವನ್ನು ಕರೆತರಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ರಕ್ಷಣಾ ಸಿಬ್ಬಂದಿ ಸಚಿವಾಲಯದ ಮುಖ್ಯಸ್ಥ ಜನರಲ್ ಸರ್ ನಿಕ್ ಕಾರ್ಟರ್ ಹೇಳಿದ್ದಾರೆ. ಬ್ರಿಟನ್ ಕಳೆದ 14 ದಿನಗಳಲ್ಲಿ 13 ಸಾವಿರ ಜನರನ್ನು ತೆರವು ಮಾಡಿದೆ.

ತನ್ನ ಕೊನೆಯ ವಿಮಾನ ರೋಮ್‌ನಲ್ಲಿ ಇಳಿದಿದ್ದಾಗಿ ಇಟಲಿ ಹೇಳಿದೆ. ಆದರೂ, ಅಫ್ಗನ್ನರಿಗೆ, ಅಮೆರಿಕದ ಜೊತೆ ಸೇರಿ ನೆರವು ನೀಡಲು ಬದ್ಧ ಎಂದು ಸ್ಪಷ್ಟಪಡಿಸಿದೆ.

ಕೋವಿಡ್: ಮರಣ ಸಂಖ್ಯೆ ಇಳಿಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮರಣ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿದ್ದು, ಶನಿವಾರ 13 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ.

ಹೊಸದಾಗಿ 1,229 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.45 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.83 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.66 ರಷ್ಟು ವರದಿಯಾಗಿದೆ. 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿ, ರಾಯಚೂರು, ಬೀದರ್ ಹಾಗೂ ಬಾಗಲಕೋಟೆಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 207, ಮೈಸೂರಿನಲ್ಲಿ 82 ಹಾಗೂ ಕೊಡಗಿನಲ್ಲಿ 75 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 310, ಉಡುಪಿಯಲ್ಲಿ 146 ಹಾಗೂ ಹಾಸನದಲ್ಲಿ 103 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

8 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ ಐವರು ಹಾಗೂ ಹಾಸನದಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ. ಬೆಂಗಳೂರು ಗ್ರಾಮಾಂತರ ಸೇರಿದಂತೆ ಆರು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಬೆಂಗಳೂರಿನಲ್ಲಿ ಹೊಸದಾಗಿ ಮರಣ ಪ್ರಕರಣ ವರದಿಯಾಗಿಲ್ಲ. ಮರಣ ಪ್ರಮಾಣ ದರವು ಶೇ 1.05 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,261ಕ್ಕೆ ತಲುಪಿದೆ.

ಸೋಂಕಿತರಲ್ಲಿ 1,289 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.89 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 18,897ಕ್ಕೆ ಇಳಿಕೆಯಾಗಿದೆ.

ಲಸಿಕೆ: 4 ಕೋಟಿ ದಾಟಿದ ಡೋಸ್

ರಾಜ್ಯದಲ್ಲಿ ಶನಿವಾರ ಒಂದೇ ದಿನ 6.30 ಲಕ್ಷ ಮಂದಿಗೆ ಕೋವಿಡ್ ಲಸಿಕೆ ವಿತರಿಸಲಾಗಿದೆ. ರಾಜ್ಯದಲ್ಲಿ ಈವರೆಗೆ ವಿತರಿಸಲಾದ ಲಸಿಕೆಯ ಒಟ್ಟು ಡೋಸ್‌ಗಳು 4 ಕೋಟಿ ದಾಟಿದೆ. ಈವರೆಗೆ 3.08 ಕೋಟಿ ಮಂದಿ ಮೊದಲ ಡೋಸ್ ಹಾಗೂ 99.01 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ.

5,380 ಸರ್ಕಾರಿ ಆಸ್ಪತ್ರೆಗಳು ಸೇರಿದಂತೆ 5,856 ಕೇಂದ್ರಗಳಲ್ಲಿ ಶನಿವಾರ ಲಸಿಕೆ ವಿತರಿಸಲಾಗಿದೆ. ಕಳೆದೊಂದು ತಿಂಗಳಿನಿಂದ ಪ್ರತಿನಿತ್ಯ ಸರಾಸರಿ 3 ಲಕ್ಷ ಡೋಸ್ ಲಸಿಕೆ ವಿತರಿಸಲಾಗುತ್ತಿದೆ.

18ರಿಂದ 44 ವರ್ಷದವರಲ್ಲಿ 1.53 ಕೋಟಿ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಅವರಲ್ಲಿ 19.24 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆಯನ್ನು ಈಗಾಗಲೇ ಹಾಕಿಸಿಕೊಂಡಿದ್ದಾರೆ. 45 ವರ್ಷ ದಾಟಿದವರಲ್ಲಿ 1.36 ಕೋಟಿ ಮಂದಿ ಮೊದಲ ಡೋಸ್ ಹಾಗೂ 66.13 ಲಕ್ಷ ಮಂದಿ ಎರಡನೇ ಡೋಸ್ ಪಡೆದಿದ್ದಾರೆ.

ಕಪ್ಪು ಶಿಲೀಂಧ್ರ: 10 ದಿನಗಳಲ್ಲಿ 10 ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಪ್ಪು ಶಿಲೀಂಧ್ರ ಸೋಂಕಿಗೆ ಕಳೆದ 10 ದಿನಗಳಲ್ಲಿ 10 ಮಂದಿ ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 451ಕ್ಕೆ ಏರಿಕೆ ಕಂಡಿದೆ.

ರಾಜ್ಯದ 27 ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ತಡವಾಗಿ ಆಸ್ಪತ್ರೆಗೆ ದಾಖಲಾತಿ ಸೇರಿದಂತೆ ವಿವಿಧ ಕಾರಣಗಳಿಂದ ಸೋಂಕಿತರಲ್ಲಿ ಕೆಲವರು ಮೃತಪಡುತ್ತಿದ್ದಾರೆ. ಕಳೆದ 10 ದಿನಗಳಲ್ಲಿ ಹೊಸದಾಗಿ ಯಾರಿಗೂ ಸೋಂಕು ತಗುಲಿಲ್ಲ. ಮೊದಲ ಪ್ರಕರಣ ವರದಿಯಾದಾಗಿನಿಂದ ಈವರೆಗೆ ಒಟ್ಟು 3,878 ಮಂದಿ ಕಪ್ಪು ಶಿಲೀಂಧ್ರ ಸೋಂಕಿಗೆ ಒಳಗಾಗಿದ್ದಾರೆ.

ವರದಿಯಾದ ಒಟ್ಟು ಪ್ರಕರಣಗಳಲ್ಲಿ ಶೇ 30ಕ್ಕೂ ಅಧಿಕ ಪ್ರಕರಣಗಳು ಬೆಂಗಳೂರಿನಲ್ಲಿಯೇ ದೃಢಪಟ್ಟಿವೆ. ಈವರೆಗೆ 1,222 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಅವರಲ್ಲಿ 153 ಮಂದಿ ಸಾವಿಗೀಡಾಗಿದ್ದಾರೆ.

ಧಾರವಾಡದಲ್ಲಿ 345, ವಿಜಯಪುರದಲ್ಲಿ 235, ಕಲಬುರ್ಗಿಯಲ್ಲಿ 216, ಬಳ್ಳಾರಿಯಲ್ಲಿ 173, ಚಿತ್ರದುರ್ಗದಲ್ಲಿ 167, ಬೆಳಗಾವಿಯಲ್ಲಿ 159, ರಾಯಚೂರಿನಲ್ಲಿ 142, ಮೈಸೂರಿನಲ್ಲಿ 137, ಬಾಗಲಕೋಟೆಯಲ್ಲಿ 131, ದಾವಣಗೆರೆಯಲ್ಲಿ 124, ಕೋಲಾರದಲ್ಲಿ 114 ಹಾಗೂ ದಕ್ಷಿಣ ಕನ್ನಡದಲ್ಲಿ 105 ಸೋಂಕು ದೃಢ ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ರ ಗಡಿಯೊಳಗೆ ಇದೆ.

ರಾಜ್ಯದ 13 ಜಿಲ್ಲೆಗಳಲ್ಲಿ ಮರಣ ಪ್ರಕರಣಗಳ ಸಂಖ್ಯೆ ಎರಡಂಕಿಯಲ್ಲಿದೆ. ಧಾರವಾಡದಲ್ಲಿ 45, ಬಳ್ಳಾರಿಯಲ್ಲಿ 28, ದಕ್ಷಿಣ ಕನ್ನಡದಲ್ಲಿ 25, ಕಲಬುರ್ಗಿಯಲ್ಲಿ 24, ದಾವಣಗೆರೆ ಹಾಗೂ ಮೈಸೂರಿನಲ್ಲಿ ತಲಾ 20, ಶಿವಮೊಗ್ಗದಲ್ಲಿ 15, ಬಾಗಲಕೋಟೆಯಲ್ಲಿ 13, ರಾಯಚೂರಿನಲ್ಲಿ 12, ಕೋಲಾರ, ಹಾಸನ ಹಾಗೂ ಚಿಕ್ಕಬಳ್ಳಾಪುರದಲ್ಲಿ ತಲಾ 11 ಹಾಗೂ ಗದಗದಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

ಕೋವಿಡ್ ಗುಣಮುಖರಿಗೆ ಕೋವ್ಯಾಕ್ಸಿನ್ ಒಂದೇ ಡೋಸ್ ಪರಿಣಾಮಕಾರಿ

ನವದೆಹಲಿ (ಪಿಟಿಐ): ಕೊರೊನಾ ಸೋಂಕಿಗೆ ಒಳಗಾಗದ ವ್ಯಕ್ತಿಯಲ್ಲಿ ಕೋವ್ಯಾಕ್ಸಿನ್‌ನ ಎರಡು ಡೋಸ್‌ಗಳಿಂದ ಸೃಷ್ಟಿವಾಗುವಷ್ಟೇ ಪ್ರಮಾಣದ ಪ್ರತಿಕಾಯಗಳು, ಕೋವಿಡ್–19ನಿಂದ ಗುಣಮುಖರಾದ ವ್ಯಕ್ತಿಗೆ ಇದೇ ಲಸಿಕೆಯ ಒಂದೇ ಡೋಸ್ ನೀಡಿದಾಗ ಉತ್ಪತ್ತಿಯಾಗುತ್ತವೆ ಎಂಬುದು ಐಸಿಎಂಆರ್‌ನ ಅಧ್ಯಯನದಿಂದ ತಿಳಿದುಬಂದಿದೆ.

ಈ ಅಧ್ಯಯನ ವರದಿ 'ಇಂಡಿಯನ್ ಜರ್ನಲ್ ಆಫ್ ಮೆಡಿಕಲ್ ರಿಸರ್ಚ್'ನಲ್ಲಿ ಶನಿವಾರ ಪ್ರಕಟವಾಗಿದೆ.

'ಇನ್ನಷ್ಟು ಹೆಚ್ಚು ಜನರನ್ನು ಅಧ್ಯಯನಕ್ಕೆ ಒಳಪಡಿಸಬೇಕು. ಆಗಲೂ ಲಸಿಕೆಯ ಪರಿಣಾಮಕಾರಿತ್ವ ದೃಢಪಟ್ಟರೆ, ಕೋವಿಡ್‌ನಿಂದ ಗುಣಮುಖರಾದವರಿಗೆ ಕೋವ್ಯಾಕ್ಸಿನ್‌ನ ಒಂದೇ ಡೋಸ್ ನೀಡುವಂತೆ ಶಿಫಾರಸು ಮಾಡಬಹುದು. ಇದರಿಂದ ಲಸಿಕೆ ಪೂರೈಕೆಯಲ್ಲಿ ಮಿತಿ ಇದ್ದಾಗ್ಯೂ, ಹೆಚ್ಚು ಜನರಿಗೆ ಲಾಭವಾಗುವುದು' ಎಂದು ವರದಿಯಲ್ಲಿ ಹೇಳಲಾಗಿದೆ.

ಚೆನ್ನೈನಲ್ಲಿ ಕಳೆದ ಫೆಬ್ರುವರಿಯಿಂದ ಮೇ ವರೆಗಿನ ಅವಧಿಯಲ್ಲಿ ಕೋವ್ಯಾಕ್ಸಿನ್ ಲಸಿಕೆ ಪಡೆದಿದ್ದ 114 ಆರೋಗ್ಯ ಕಾರ್ಯಕರ್ತರನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಅಭಿಷೇಕ್ ಬ್ಯಾನರ್ಜಿಗೆ ಇ.ಡಿ ಸಮನ್ಸ್

ನವದೆಹಲಿ (ಪಿಟಿಐ): 'ಕಲ್ಲಿದ್ದಲು ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಡಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋದರಳಿಯ, ಸಂಸದ ಅಭಿಷೇಕ್ ಬ್ಯಾನರ್ಜಿ ಮತ್ತು ಅವರ ಪತ್ನಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದರು.

ಪ್ರಕರಣದ ತನಿಖಾ ಅಧಿಕಾರಿ ಮುಂದೆ ಸೆಪ್ಟೆಂಬರ್ 6ರಂದು ವಿಚಾರಣೆಗೆ ಹಾಜರಾಗುವಂತೆ ಅಭಿಷೇಕ್ ಬ್ಯಾನರ್ಜಿಗೆ ಸಮನ್ಸ್ ಜಾರಿ ಮಾಡಿದ್ದರೆ, ಅಭಿಷೇಕ್ ಪತ್ನಿ ರುಜಿರಿಯಾಗೆ ಸೆಪ್ಟೆಂಬರ್ 1ರಂದು ಹಾಜರಾಗುವಂತೆ ಸೂಚಿಸಲಾಗಿದೆ.

ನೆಹರೂ ಚಿತ್ರ ಕೈಬಿಟ್ಟ ಐಸಿಎಚ್‌ಆರ್: ಕಾಂಗ್ರೆಸ್ ತರಾಟೆ

ನವದೆಹಲಿ (ಪಿಟಿಐ): ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮಗಳಿಂದ ಜವಾಹರ್‌ಲಾಲ್ ನೆಹರೂ ಭಾವಚಿತ್ರವನ್ನು ಕೈಬಿಡುವ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ (ಐಸಿಎಚ್‌ಆರ್) ಕ್ರಮಕ್ಕೆ ಕಾಂಗ್ರೆಸ್ ಮುಖಂಡರು ಕಿಡಿಕಾರಿದ್ದಾರೆ.

ನೆಹರೂ ಭಾವಚಿತ್ರ ಹೊರತುಪಡಿಸಿ ಮಹಾತ್ಮಗಾಂಧಿ, ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್, ವೀರ ಸಾವರ್ಕರ್ ಸೇರಿದಂತೆ ಹಲವರ ಭಾವಚಿತ್ರಗಳಿರುವ ಐಸಿಎಚ್‌ಆರ್ ಚಿತ್ರವನ್ನು ಮುಖಂಡರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ಈ ಬಗ್ಗೆ ಐಸಿಎಚ್‌ಆರ್ ತಕ್ಷಣಕ್ಕೆ ಪ್ರತಿಕ್ರಿಯಿಸಿಲ್ಲ. ಕಾಂಗ್ರೆಸ್ ಮುಖಂಡ ಜೈರಾಂ ರಮೇಶ್, ಭಾವಚಿತ್ರ ಕೈಬಿಟ್ಟಿದ್ದನ್ನು 'ದುಷ್ಟತನದ ಕ್ರಮ' ಎಂದು ಬಣ್ಣಿಸಿದ್ದಾರೆ.

ತೆರಿಗೆ ವಂಚನೆ: ಚೀನಾದ ನಟಿ ಝೆಂಗ್ ಶುವಾಂಗ್‌ಗೆ ₹338 ಕೋಟಿ ದಂಡ

ಬೀಜಿಂಗ್ (ಪಿಟಿಐ): ಚೀನಾದ ಪ್ರಸಿದ್ಧ ಸಿನಿಮಾ ಮತ್ತು ಕಿರುತೆರೆ ನಟಿ ಝೆಂಗ್ ಶುವಾಂಗ್‌ಗೆ ತೆರಿಗೆ ವಂಚನೆ ಆರೋಪದಡಿ ಅಲ್ಲಿನ ಸರ್ಕಾರವು ಸುಮಾರು ₹ 338 ಕೋಟಿ (46.1 ಮಿಲಿಯನ್ ಡಾಲರ್) ದಂಡ ವಿಧಿಸಿದೆ.

ಚೀನಾವು ಸಂಪತ್ತಿನ ಅಂತರವನ್ನು ಕಡಿಮೆಗೊಳಿಸುವ ನಿಟ್ಟನಲ್ಲಿ ಹೊಸ ನೀತಿಯನ್ನು ಜಾರಿಗೆ ತಂದಿದ್ದು, ಈ ನೀತಿಯಡಿ ಸರ್ಕಾರವು ಸೆಲೆಬ್ರಿಟಿಗಳ ಮೇಲೆ ನಿಗಾವಹಿಸಿದೆ.

2019–2020ರ ನಡುವಿನ ಅಘೋಷಿತ ಆದಾಯ ಹಾಗೂ ತೆರಿಗೆ ವಂಚನೆ ಆರೋಪದಡಿ ನಟಿ ಝೆಂಗ್ ಶುವಾಂಗ್‌ಗೆ ಶಾಂಘೈ ಮುನ್ಸಿಪಲ್ ತೆರಿಗೆ ಸೇವೆಯು ಶುಕ್ರವಾರ ದಂಡ ವಿಧಿಸಿದೆ.

'ಝೆಂಗ್ ಪ್ರಕರಣವು ಸಿನಿಮಾ ಮತ್ತು ದೂರದರ್ಶನ ಉದ್ಯಮದಲ್ಲಿ ಕಾಣಸಿಗುವ 'ಯಿನ್ ಮತ್ತು ಯಾಂಗ್' ಒಪ್ಪಂದದಂತಿದೆ' ಎಂದು ಅಧಿಕಾರಿಗಳು ಹೇಳಿದರು.

'ಯಿನ್ ಮತ್ತು ಯಾಂಗ್' ಒಪ್ಪಂದದಡಿ ಎರಡು ದಾಖಲೆ ಪತ್ರಗಳನ್ನು ಮಾಡಲಾಗುತ್ತದೆ. ವಾಸ್ತವಿಕ ದಾಖಲೆಯು ಸಂಸ್ಥೆ ಮತ್ತು ವ್ಯಕ್ತಿಯ ನಡುವೆ ಮಾತ್ರ ಇರುತ್ತದೆ. ಇನ್ನೊಂದು ದಾಖಲೆಯಲ್ಲಿ ನಟ/ನಟರಿಗೆ ಕಡಿಮೆ ಆದಾಯವನ್ನು ನಮೂದಿಸಲಾಗಿರುತ್ತದೆ. ಎರಡನೇ ದಾಖಲೆಯನ್ನು ತೆರಿಗೆ ಅಧಿಕಾರಿಗಳಿಗೆ ಸಲ್ಲಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರೆಂಟಲ್ ಪ್ರಾಪರ್ಟೀಸ್

Accommodation Available

Industrial And Factory

RENT G+1, 2300sq.ft for Godown/Factory behind Mysore road metro station 9880400028/9902630811

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

J P Nagar

DIRECT OWNER, North facing BDA Site for Sale at J.P.Nagar 2nd Phase, 45x61ft, Contact 9886223352

Vishweshwariah Layout

30*20 SOUTH Facing ,Site for Sale Vishwasvariah BDA Lay Out Cont -9845868653 , 9449308058

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500/-ರಿಂದ 45000/-ದವರೆಗೆ. 7829256781, 7829215432

Wanted

ನೇರನೇಮಕಾತಿ 7TH,SSLC, PUC, Degree,ITI ನವರು TOYOTA, TATA ಮೋಟಾರ್ಸ, ಬಿಗ್‌ಬಜಾರ್ಸ, TVS ಗಳಿಗೆ 18,000-60,000/- ವಸತಿಯೂಟವಿದೆ. 7795837319, 9901312461

ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂ-ಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

Multiple Vacancy

ಬೇಕಾಗಿದ್ದಾರೆ: ಸೆಕ್ಯೂರಿಟೀ ಗಾರ್ಡ್‌ಗಳು, ಅಟೆಂಡರ್, ಕ್ಲೀನರ್, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು. ದೂರವಾಣಿ: 08023301363

Drivers

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001, 9886683188

ವ್ಯಾಪಾರ

Business Offers

Finance

WE ARE READY TO INVEST LONG TERM PROJECTS ALL OVER THE WORLD Ct: 08610936362, 07708215904

General

EARN 800 to 1300 per day by making handmade clay beads,crafts etc. housewives, students, unemployed, retired persons. Free transport is available. Contact 9986822450.

ಭವಿಷ್ಯ

Astrology

★||ಶ್ರೀಆಂಜನೇಯಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್_ಕೇಸ್, ವ್ಯಾಪಾರ, ಸಂತಾನ ಇನ್ನೂ ಯಾವುದೇ ಗುಪ್ತ_ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9880977623

ಕೊಲ್ಲೂರು ಮೂಕಾಂಬಿಕಾ ಜ್ಯೋತಿಷ್ಯರು, ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿ ಮೋಸ, ಗಂಡಹೆಂಡತಿ ಕಲಹ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿಗೆ 100% ಶಾಶ್ವತ ಪರಿಹಾರ ಕೆಲಸ ಹಾಗದಿದ್ದಲ್ಲಿ ಹಣ ವಾಪಸ್, ರಾಮಕೃಷ್ಣ ಶರ್ಮಾ. 9880950461

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಉಚಿತವಾಗಿ ಕೊಡಲಾಗುತ್ತದೆ ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

EDUCATION CORNER

ಸ್ಪರ್ಧಾಮಿತ್ರ ACADEMY Crash Course From 1st Sept. PSI / SDA Ist & IInd Paper IAS / KAS New Batch Admissions Open. Classes Timing 10AM to 5PM Online & Offline Classes Near Attigupppe Metro Station, Service Road, Vijayanagar, Bengaluru - 40. 9535111133 / 9535111188

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ_ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಇತರೆ

Medical

ಶ್ರೀಶಕ್ತಿ ಹೆಲ್ತ್-ಕೇರ್ ವತಿಯಿಂದ ಯಾವುದೇ ಶಸ್ತ್ರಚಿಕಿತ್ಸೆವಿಲ್ಲದೆ ಮಂಡಿನೋವು, ಬೆನ್ನುನೋವು, ಕತ್ತುನೋವು, ವೆರಿಕೋಸ್ ವೈನ್ಸ್, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರು, ಸಂಧಿವಾತ, ಟೆನ್ನಿಸ್ ಎಲ್ಬೋಪೇನ್, ತಲೆನೋವು, ಮೈಗ್ರೇನ್, ರೋಮೆಟೋ ಆರ್ಥ್ರೈಟಿಸ್, ಹಿಮ್ಮಡಿನೋವು, ಬುಜದನೋವುಗಳಿಗೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಚಿಕಿತ್ಸೆ ಕೊಡಲಾಗುವುದು ಸ್ಥಳ ಹುಮನಾಬಾದ ಜಿ// ಬೀದರ್: 6366656745

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

For Sale

SANDVIK CRUSHER FOR SALE

Following SANDVIK CRUSHER / SCREEN are available for sale in Goa.

- CS 430 Sandvik Cone.
- CS 144 Sandvik Screen - 3D.
- CJ 411 Sandvik Jaw Crusher.

All the above are 2015 model, sparingly used & in good working condition. Interested parties may contact on: 99229 22123

ವೈಯಕ್ತಿಕ

Announcements

VARIOUS LEGAL CASES OPINION IN AND AROUND HYDERABAD /A.P . FAMILY MATTERS, ARBRITATIONS PROCEEDINGS /COMPANY MATTERS/ALL LEGAL CASES WILL BE TAKEN .8309020773

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 18.09.2021 15ದಿನಗಳು 32,000 ಅಖಂಡ ಮಧ್ಯಪ್ರದೇಶ, ಉಜ್ಜಯನಿ,ಓಂಕಾರೇಶ್ವರ, ಇಂದೋರ್,ಮಾಂಡು, ಮಹೇಶ್ವರ,ಪಚಮಾಡಿ, ಭೂಪಾಲ್,ಸಾಂಚಿ,ಜಬಲ್‌ಪುರ, ಬೇಡಾಗಾಟ್,ಅಮರಕಂಟಕ, ಚಿತ್ರಕೂಟ,ಖಜಾರಾಹೋ, ಓರ್ಜಾ,ಗ್ವಾಲಿಯರ್. 21.09.2021 10ದಿನಗಳು 22,000 ಕಾಶಿ,ನೈಮಿಷ್ಯಾರಣ್ಯ, ಅಯೋಧ್ಯ,ಚಿತ್ರಕೂಟ,ಪ್ರಯಾಗ್ ರಾಜ್,ಗಯಾ,ಬುದ್ದಗಯಾ, ದೇವಘರ್,ರಾಜಗಿರ್. 06.11.2021 ಅಖಂಡ ಗುಜಾರಾತ್ ರಾಜ್ಯ_ಪ್ರವಾಸ, 06.11.2021 ಅಖಂಡ ರಾಜಸ್ಥಾನ್ ರಾಜ್ಯ_ಪ್ರವಾಸ. 8073824856/ 9902050065/ 9206979202

EDUCATION SPECIAL

We are coming out with special offer for Admission Notice, Education Success Congratulation Ads

DH DECCAN HERALD Classifieds More value, more impact

For details contact:
Jerry : 9731810277
Vishal : 9845114560
Tanveer: 9886213331

E-mail: dhclassifieds@deccanherald.co.in

ಹಳ್ಳಿಮಕ್ಕಳು ತಾರೆಗಳಾದಾಗ...

ಟೋಕಿಯೊ ಒಲಿಂಪಿಕ್ ಕೂಟದ ಪದಕವಿಜೇತ ಭಾರತೀಯರು ಬೆಳಗಿದ ದೀಪ ಅನುಪಮವಾದುದು. ಅದಕ್ಕಾಗಿಯೇ ಈ ಬಾರಿಯ ಕ್ರೀಡಾ ದಿನಾಚರಣೆ ವಿಶೇಷವಾಗಿದೆ.

ಕ್ರೀಡಾ ತಾರೆಗಳು... 1. ನೀರಜ್ ಚೋಪ್ರಾ 2. ಮೀರಾಬಾಯಿ ಚಾನು 3. ಪಿ.ವಿ. ಸಿಂಧು 4. ಲವ್ಲಿನಾ ಬಾರ್ಗೋಹೈನ್ 5. ಬಜರಂಗ್ ಪೂನಿಯಾ 6. ರವಿಕುಮಾರ್ ದಹಿಯಾ

ಗಿರೀಶ ದೊಡ್ಡಮನಿ

ಆಗಸ್ಟ್ ಏಳರಂದು ಟೋಕಿಯೊ ಅಂಗಳದಲ್ಲಿ ಚಿನ್ನದ ಪದಕ ಗೆದ್ದ ನೀರಜ್ ಚೋಪ್ರಾ ಜೊತೆಜೊತೆಗೆ ಅವರು ಜನಿಸಿದ ಹರಿಯಾಣದ ಪುಟ್ಟ ಹಳ್ಳಿ ಖಾಂದ್ರಾ ಕೂಡ ಜಗದ್ವಿಖ್ಯಾತವಾಯಿತು. ಬಾಲ್ಯದಲ್ಲಿ ತಮ್ಮ ಮನೆಯಲ್ಲಿದ್ದ ಎಮ್ಮೆ, ಕೋಣಗಳ ಬಾಲ ಜಗ್ಗುತ್ತ, ನಾಯಿ, ಬೆಕ್ಕುಗಳಿಗೆ ಕೀಟಲೆ ಮಾಡುತ್ತಿದ್ದ ನೀರಜ್ ಮೈಕೈ ತುಂಬಿಕೊಂಡು ಗುಂಡುಗುಂಡಾಗಿದ್ದರು. ಆದರೆ ತಮ್ಮ ಮಗ ದೈಹಿಕವಾಗಿ ಗಟ್ಟಿಮುಟ್ಟಾಗಬೇಕು ಎಂದು ಸತೀಶಕುಮಾರ್ ಬಯಸಿದ್ದು ಟೋಕಿಯೊ ಚಿನ್ನಕ್ಕೆ ಕಾರಣವಾಯಿತು!

17 ಮಂದಿಯ ತುಂಬು ಕುಟುಂಬದ ಕಣ್ಮಣಿಯಾಗಿರುವ ನೀರಜ್‌ಗೆ ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸಲು ಇಷ್ಟವೇ ಇರಲಿಲ್ಲವಂತೆ. ಕೃಷಿಕ ಕುಟುಂಬದ ಈ ಹುಡುಗ ಯಾವತ್ತೂ ಒಲಿಂಪಿಕ್ಸ್ ಕನಸು ಕಂಡವರೇ ಅಲ್ಲ. ಆದರೆ, ಬಾಲ್ಯದಲ್ಲಿ ಲಭಿಸಿದ ಒಂದು ತಿರುವು ಅವರ ಜೀವನ ಬದಲಿಸಿತು. ಜೊತೆಗೆ ಅವರ ಗ್ರಾಮದ ಹೆಸರನ್ನು ಕೂಡ ಬೆಳಗಿಸಿತು. ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಚಿನ್ನ ಗೆದ್ದ ಮೊದಲ ಭಾರತೀಯನೆಂಬ ಹೆಗ್ಗಳಿಕೆಗೆ ಪಾತ್ರರಾದರೂ, ಅವರ ಸರಳತೆ ಮತ್ತು ಬದ್ಧತೆ ಬದಲಾಗಿಲ್ಲ. ಟೋಕಿಯೊದಿಂದ ಮರಳಿದ ನಂತರ ಅವರು ರಾಷ್ಟ್ರಪತಿಗಳ ಚಹಾಕೂಟ, ಪ್ರಧಾನ ಮಂತ್ರಿಗಳ ಔತಣಕೂಟ, ಸ್ವಾತಂತ್ರ್ಯ ದಿನಾಚರಣೆ ಸಮಾರಂಭ ಸೇರಿದಂತೆ ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು. ತಮಗೆ ಕೆಲವು ವರ್ಷ ತರಬೇತಿ ನೀಡಿದ ಕನ್ನಡಿಗ ಕಾಶಿನಾಥ ನಾಯ್ಕ ಅವರ ಮನೆಗೂ ಭೇಟಿ ನೀಡಿ ಸಂತಸ ಹಂಚಿಕೊಂಡರು. ಪಾಕಿಸ್ತಾನದ ಅಥ್ಲೀಟ್ ಕುರಿತು ತಾವು ನೀಡಿದ್ದ ಹೇಳಿಕೆಯ ಬಗ್ಗೆ ನಡೆಯುತ್ತಿದ್ದ ಚರ್ಚೆಗೆ ನೇರ ನುಡಿಯ ಮೂಲಕ ತೆರೆ ಎಳೆದು ಕ್ರೀಡಾಸ್ಫೂರ್ತಿಯ ಪಾಠ ಹೇಳಿದರು. ಕೋಟಿ ಕೋಟಿ ಹಣ ಹರಿದುಬಂದರೂ ತಮ್ಮೂರಿನ ಬಾಲ್ಯದ ಗೆಳೆಯರೊಂದಿಗೆ ಒಡನಾಟ, ಅಮ್ಮನ ಕೈಯಡುಗೆಯ ಚೂರ್ಮಾ ಖಾದ್ಯ ತಿನ್ನುವುದನ್ನು ಬಿಟ್ಟಿಲ್ಲ. ಬಹುಶಃ ಬೆಳೆದ ಊರಿನ ಮಣ್ಣಿನ ಗುಣವೇ ಇದಕ್ಕೆ ಕಾರಣವಿರಬೇಕು.

***

ಇಂದು ಕ್ರೀಡಾ ದಿನ

ಮಣಿಪುರ ರಾಜ್ಯದ ನಾಂಗ್‌ಪೊಕ್ ಕಾಕ್‌ಚಿಂಗ್ ಎಂಬ ಈ ಕಣಿವೆ ಗ್ರಾಮದ ಹೆಸರು ಬಹಳಷ್ಟು ಜನರಿಗೆ ಪರಿಚಯವಾಗಿದ್ದು ಮೀರಾಬಾಯಿ ಚಾನು ಅವರಿಂದ. ಟೋಕಿಯೊ ಒಲಿಂಪಿಕ್ಸ್‌ನ ಮೊದಲ ದಿನವೇ ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಪದಕ ಗೆದ್ದ ಮೀರಾ ಇಡೀ ಭಾರತವೇ ಸಂಭ್ರಮಿಸುವಂತೆ ಮಾಡಿದ್ದರು. ಮಣಿಪುರದ ಈ ಗ್ರಾಮಕ್ಕೆ ಸಾರಿಗೆ ಸಂಪರ್ಕವೇ ಇರಲಿಲ್ಲ. ಆಸ್ಪತ್ರೆ, ಶಾಲೆ, ದಿನಸಿ ಖರೀದಿಗೆ ಮೂವತ್ತು ಕಿಲೊ ಮೀಟರ್ ದೂರದ ಇಂಫಾಲವನ್ನೇ ಆಶ್ರಯಿಸಬೇಕಿತ್ತು. ತಮ್ಮ ಮನೆ ಬಳಕೆಗೆ ಕಟ್ಟಿಗೆಯ ಹೊರೆಯನ್ನು ಸರಾಗವಾಗಿ ಎತ್ತಿ ತರುತ್ತಿದ್ದ ಬಾಲಕಿ, ಕುಂಜುರಾಣಿ ದೇವಿ ಅವರ ಸಾಧನೆ ನೋಡಿ ವೇಟ್‌ಲಿಫ್ಟಿಂಗ್‌ನತ್ತ ಆಕರ್ಷಿತಳಾದಳು. ಆದರೆ, ಇಂಫಾಲದ ಅಕಾಡೆಮಿಗೆ ಹೋಗಲು ಬಸ್ ವ್ಯವಸ್ಥೆ ಇರಲಿಲ್ಲ. ಸ್ವಂತ ವಾಹನ ಹೊಂದುವಷ್ಟು ಆರ್ಥಿಕ ಅನುಕೂಲ ಮನೆಯಲ್ಲಿ ಇರಲಿಲ್ಲ. ಗ್ರಾಮದ ಸಮೀಪದ ನದಿ, ಹೊಳೆ ಪಾತ್ರದಿಂದ ಮರಳು ಸಾಗಾಟ ಮಾಡುತ್ತಿದ್ದ ಲಾರಿಗಳೇ ಅವರಿಗೆ ಸಾರಿಗೆಯಾದವು. ಆಕೆಯ ಬದ್ಧತೆ, ಆಸಕ್ತಿಯನ್ನು ಗಮನಿಸಿದ್ದ ಕೆಲವು ಟ್ರಕ್ ಚಾಲಕರು ಆಕೆಯನ್ನು ಇಂಫಾಲಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಮರಳಿ ಬರುವಾಗ ಮನೆ ತಲುಪಿಸುತ್ತಿದ್ದರು. ತಾವು ಒಲಿಂಪಿಕ್ ಪದಕ ಜಯಿಸಿ ಊರಿಗೆ ಮರಳಿದಾಗ ಮೀರಾ ಮಾಡಿದ ಮೊದಲ ಕಾರ್ಯವೆಂದರೆ, ಆ ಲಾರಿ ಚಾಲಕರನ್ನು ಹುಡುಕಿ ಮನೆಗೆ ಆಹ್ವಾನಿಸಿದರು. ಅವರಿಗೆ ಕಾಣಿಕೆ ಕೊಟ್ಟು, ಸನ್ಮಾನಿಸಿದರು. ಊಟ ಹಾಕಿ ಸಂಭ್ರಮಿಸಿದರು. ಆ ಚಾಲಕರು ಕಂಗಳಲ್ಲಿ ಆನಂದಭಾಷ್ಪ ತುಂಬಿಕೊಂಡು ಮೀರಾ ಸಾಧನೆಯನ್ನು ಕೊಂಡಾಡಿದರು.

***

ಪಂಜಾಬ್‌ನ ಖಲಿಯಾರಾ ಗ್ರಾಮದ ಹೆಸರು ರಾತ್ರಿ ಬೆಳಗಾಗುವುದರೊಳಗೆ ಮಾಧ್ಯಮಗಳಲ್ಲಿ ಪ್ರತಿಧ್ವನಿಸಿತು. ಅದಕ್ಕೆ ಕಾರಣರಾಗಿದ್ದು ಕಂಚಿನ ಪದಕ ಜಯಿಸಿದ ಭಾರತ ಹಾಕಿ ತಂಡದ ಗೋಲ್ ಸ್ಕೋರಿಂಗ್ ಯಂತ್ರ ಗುರ್ಜಂತ್ ಸಿಂಗ್. 41 ವರ್ಷಗಳ ನಂತರ ಭಾರತ ಹಾಕಿ ತಂಡವು ಒಲಿಂಪಿಕ್ ಪದಕ ಜಯಿಸಿದ ಸಡಗರದಲ್ಲಿ ಇಡೀ ದೇಶ ಈ ಬಾರಿ ತೇಲಾಡಿತು. ಮನ್‌ಪ್ರೀತ್ ಸಿಂಗ್ ನಾಯಕತ್ವದ ತಂಡದಲ್ಲಿ ಪಂಜಾಬ್‌ನ ಪುಟ್ಟ ಹಳ್ಳಿಗಳಿಂದ ಬಂದವರ ದಂಡೇ ಇದೆ. ತಿಮ್ಮೊವಾಲದ ಹರ್ಮನ್‌ಪ್ರೀತ್ ಸಿಂಗ್, ಬುಟಾಲಾದ ದಿಲ್‌ಪ್ರೀತ್ ಸಿಂಗ್, ಅಟ್ಟಾರಿಯ ಶಂಶೇರ್ ಸಿಂಗ್, ಚಾಹಲ್ ಕಲಾನ್‌ನ ಸಿಮ್ರನ್‌ಜೀತ್ ಸಿಂಗ್ ತಮ್ಮ ಆಟದೊಂದಿಗೆ ಹಳ್ಳಿಗಳ ಹೆಸರನ್ನೂ ವಿಖ್ಯಾತಗೊಳಿಸಿದರು.

ಬಾಕ್ಸಿಂಗ್‌ನಲ್ಲಿ ಕಂಚಿನ ಪದಕ ಜಯಿಸಿದ ಲವ್ಲಿನಾ ಬೊರ್ಗೊಹೈನ್ ಅವರ ಅಸ್ಸಾಂ ರಾಜ್ಯದ ಬಾರೊಮುಖಿಯಾ ಕುಗ್ರಾಮ. ಪುರುಷರ ಕುಸ್ತಿಯಲ್ಲಿ ಬೆಳ್ಳಿ ಪದಕ ಗೆದ್ದ ರವಿಕುಮಾರ ದಹಿಯಾ ಅವರ ನೆಹ್ರಿ ಮತ್ತು ಕಂಚು ವಿಜೇತ ಬಜರಂಗ್ ಪೂನಿಯಾ ಅವರ ಖುದಾನ್ ಈಗ ಎಲ್ಲರಿಗೂ ಚಿರಪರಿಚಿತ.

***

ದೇಶಕ್ಕೆ ಹೆಸರು ತರಲು, ದೇಶವಾಸಿಗಳ ಬದುಕಿಗೆ ಚೈತನ್ಯ ತುಂಬಲು ಹಳ್ಳಿಗಳು ಮತ್ತು ಗ್ರಾಮೀಣರು ಎಷ್ಟು ಮುಖ್ಯ ಎಂಬುದಕ್ಕೆ ಈ ಸಾಧನೆಗಳು ನಿದರ್ಶನಗಳಾಗುತ್ತವೆ. ಪದಕ ಜಯದ ಹೊಸ್ತಿಲಲ್ಲಿ ಎಡವಿದ ಕ್ರೀಡಾಪಟುಗಳು ಮತ್ತು ತಂಡದಲ್ಲಿಯೂ ಹಳ್ಳಿಯ ಹಿನ್ನೆಲೆಯ ಪ್ರತಿಭೆಗಳಿದ್ದಾರೆ. ಈ ಒಲಿಂಪಿಕ್ ಅವರಲ್ಲಿ ಹೊಸ ಧೈರ್ಯ ತುಂಬಿದೆ.

ಉತ್ತರಪ್ರದೇಶದ ರೋಷನಾಬಾದ್ ಗ್ರಾಮದಲ್ಲಿ ಮಹಿಳಾ ಹಾಕಿ ತಂಡದ ವಂದನಾ ಕಟಾರಿಯಾ ಕುಟುಂಬದ ವಿರುದ್ಧ ಕೆಲವು ಕಿಡಿಗೇಡಿಗಳು ಜಾತಿನಿಂದನೆ ಮಾಡಿದ್ದು ದೊಡ್ಡ ಸುದ್ದಿಯಾಯಿತು. ಆದರೆ, ದಿಟ್ಟ ಹುಡುಗಿ ಅದನ್ನು ಕ್ಯಾರೇ ಎನ್ನಲಿಲ್ಲ. ತಮ್ಮ ಆಟದ ಮೂಲಕವೇ ಉತ್ತರ ಕೊಟ್ಟರು. ಟೋಕಿಯೊದಿಂದ ಮರಳಿದಾಗ ಊರಿನ ಜನರೇ ಅವರಿಗೆ ಹಾರ ಹಾಕಲು, ಗುಲಾಲು ಹಚ್ಚಲು ಹಾತೊರೆದರು. ಹಸ್ತಲಾಘವ ಮಾಡಿ ಅಭಿನಂದಿಸಲು ಮುಗಿಬಿದ್ದರು. ‘ಈ ಸಲ ಸ್ವಲ್ಪದರಲ್ಲಿ ಪದಕ ತಪ್ಪಿಸಿಕೊಂಡಿದ್ದೇವೆ. ಮುಂದಿನ ಸಲ ಹೀಗಾಗದು. ಗೆದ್ದೇ ಗೆಲ್ಲುತ್ತೇವೆ’ ಎಂದು ವಂದನಾ ವಾಗ್ದಾನ ಮಾಡಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಗೆದ್ದ ಏಳು ಪದಕ ವಿಜೇತರ ಪೈಕಿ ಪಿ.ವಿ. ಸಿಂಧು ಮಾತ್ರ ಹೈದರಾಬಾದ್ ಮಹಾನಗರಿಯಿಂದ ಬಂದವರು. ಉಳಿದೆಲ್ಲರೂ ಹಳ್ಳಿಯ ಮಣ್ಣಿನಿಂದ ತಮ್ಮ ಸಾಧನೆಯ ಹಾದಿಯನ್ನು ಮಾಡಿಕೊಂಡವರು. ನಗರದಲ್ಲಿದ್ದ ಮಾತ್ರಕ್ಕೆ ಪಿ.ವಿ. ಸಿಂಧು ಅವರಿಗೆ ಎಲ್ಲವೂ ಸರಾಗವಾಗಿ ಸಿಕ್ಕಿಬಿಟ್ಟಿತ್ತು ಎಂದು ಹೇಳಲಾಗದು.

ತಮ್ಮ ಮನೆಯಿಂದ ಪ್ರತಿನಿತ್ಯ 55 ಕಿ.ಮೀ ದೂರ ಪ್ರಯಾಣ ಮಾಡಿ ಬ್ಯಾಡ್ಮಿಂಟನ್ ತರಬೇತಿ ಪಡೆದು ಈ ಮಟ್ಟಕ್ಕೆ ಬೆಳೆದಿದ್ದಾರೆ. ಮಧ್ಯಮವರ್ಗದ ಕುಟುಂಬದ ಎಲ್ಲ ಸಂಕಷ್ಟಗಳನ್ನೂ ಅವರು ಅನುಭವಿಸಿದ್ದಾರೆ. ನಗರ ಜೀವನದಲ್ಲಿ ಎದುರಾದ ಎಲ್ಲ ಸವಾಲುಗಳನ್ನೂ ಮೀರಿ ಸತತ ಎರಡು ಒಲಿಂಪಿಕ್ ಕೂಟಗಳಲ್ಲಿ ಪದಕ ಜಯಿಸಿರುವ ಸಾಧನೆ ಮಾಡಿದ್ದಾರೆ. ಒಂದು ಪದಕ ಜಯಕ್ಕೆ ತೃಪ್ತರಾಗದೇ ಮತ್ತಷ್ಟು, ಮಗದಷ್ಟು ಸಾಧಿಸಬೇಕು ಎಂಬ ಸಂದೇಶವನ್ನು ನೀಡಿದ್ದಾರೆ. 2024ರಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನತ್ತ ಚಿತ್ತ ನೆಟ್ಟಿದ್ದಾರೆ.

ನೀರಜ್ ಚೋಪ್ರಾ ಕೂಡ 90 ಮೀಟರ್ಸ್‌ಗಿಂತಲೂ ಹೆಚ್ಚು ದೂರ ಜಾವೆಲಿನ್ ಎಸೆಯುವತ್ತ ತಯಾರಿ ಆರಂಭಿಸಿದ್ದಾರೆ. ಲವ್ಲಿನಾ ಕೂಡ ಮುಂದೊಂದು ಚಿನ್ನ ಗೆಲ್ಲುವತ್ತ ಚಿತ್ತ ನೆಟ್ಟಿದ್ದಾರೆ. ಇವರೆಲ್ಲರ ಸ್ಫೂರ್ತಿಯ ಬೆಳಕಿನಲ್ಲಿ ಮತ್ತಷ್ಟು ಪ್ರತಿಭೆಗಳು ಹೊರಹೊಮ್ಮುವ ಕಾಲ ಇದು. ‘ಕ್ರೀಡೆ ಬರೀ ಭಾಗವಹಿಸುವಿಕೆಯ ವೇದಿಕೆಯಲ್ಲ, ಗೆಲ್ಲುವ ಛಲ ತೋರುವ, ಸಾಮರ್ಥ್ಯಪಣಕ್ಕಿಡುವ ಕ್ಷೇತ್ರ. ನಮ್ಮನ್ನು ಕಡೆಗಣಿಸಬೇಡಿ’ ಎಂದು ಈ ಸಲದ ಒಲಿಂಪಿಯನ್ನರು ಹೇಳುತ್ತಿದ್ದಾರೆ. ಅದಕ್ಕೆ ಉತ್ತಮ ಸ್ಪಂದನೆ ದೊರೆತರೆ ರಾಷ್ಟ್ರೀಯ ಕ್ರೀಡಾ ದಿನಾಚರಣೆಗಳ ಹೊಳಪು ಇಮ್ಮಡಿಸುವುದು ಖಾತ್ರಿ.

ಹುದ್ದೆಗಷ್ಟೇ ವಿದಾಯ ಹೇಳಿದರೂ ರಂಗದ ಹೆಜ್ಜೆಗಳನ್ನು ನೆನಪಿಸುತ್ತಾ ಮತ್ತಷ್ಟು ವೇಷ ಕಟ್ಟುವ, ಹೊಸ ಪಾತ್ರವಾಗುವ ಉತ್ಕಟ ಹಂಬಲವುಳ್ಳ ನಾಟಕ ಮೇಷ್ಟ್ರೊಬ್ಬರ ಸ್ವಗತ ಇಲ್ಲಿದೆ. ಒಂದೊಂದೇ ರಸದ ಅವಲೋಕನ, ಅದರ ಲಕ್ಷಣ, ಅದರ ದೇವ್ರು, ಅದರ ಚಕ್ಬಂದಿ, ಅದರ ಜಾತಕವನ್ನು ಜಾಲಾಡುತ್ತಾ ಈ ಮೇಷ್ಟ್ರು ರಂಗ ಕಲಿಕೆಯ ತೆರೆಯನ್ನು ಸರಿಸುತ್ತಾ ಹೋಗುವ ಪರಿ ಅನನ್ಯವಾದುದು...

ಕಲೆ: ರಾಮಕೃಷ್ಣ ಸಿದ್ರಪಾಲ

ಭರತನ ಮಕ್ಕಳಿಗೆ ನಾಟ್ಯಶಾಸ್ತ್ರದ ಪಾಠ

ಹುಲುಗಪ್ಪ ಕಟ್ಟೀಮನಿ

ಮೈಸೂರು ರಂಗಾಯಣದಿಂದ ನಿವೃತ್ತಿ ಪಡೆದದ್ದಾಯ್ತಲ್ಲ. ಆದರss ಆಯ್ದ ಕಾಯಕಕ್ಕ ನಿವೃತ್ತಿ ಅನ್ನೂದ ಇಲ್ಲಲ್ಲ. ನಿವೃತ್ತಿಯ ಹಿರಿತನ ಒಂದು ನಮೂನಿ ಸಣ್ಣವನನ್ನಾಗಿ ಮಾಡತದ. ಅಂದರ ಇನ್ನು ಮ್ಯಾಲಿಂದನss ಹೊಸ ಆಟ ಶುರುವಾಗ್ತದ. ಈ ಮೂವತ್ತೆರಡು ವರ್ಷ ಮೇಷ್ಟ್ರು ಹಾಕಿದ ಅಡಿಪಾಯದಲ್ಲಿ ಆಟ ಆಡಿದ ಜಗತ್ತು ಪೂರಾ ಭಾವನಾಮಯವಾಗಿತ್ತು. ಭಾಳ ಮಂದಿ ಹೊರಗಿನ ಜಗತ್ತಿಗೆ ಸ್ವಾಗತ ಕೋರಿದರು. ಹ್ಞಾಂ... ಇದೀಗ ನೀವು ಲೋಕಾರ್ಪಣೆ ಆಗುವ ಸಮಯ ಅಂದರು. ಹೌದು, ಈಗೀಗ ಅನ್ನಿಸಲಿಕ್ಕೆ ಶುರು ಆಗೇದ, ಹೊರಗಿನ ಜಗ ಭಾಳ ಚಂದದ.

ಕಲಬುರ್ಗಿ ರಂಗಾಯಣದ ನಿರ್ದೇಶಕ ನನ್ನ ನೀನಾಸಂ ಗೆಳೆಯ ಪ್ರಭಾಕರ ಜೋಷಿ, ‘ನಮ್ಮಲ್ಲಿಗೆ ಬಾ, ನಮ್ಮ ಹುಡುಗರ ಜೊತೆ ಅನುಭವ ಹಂಚಿಕೋ ಮಾರಾಯ’ ಅಂತ ಅಲವತ್ತುಕೊಂಡಿದ್ದ. ‘ಆತು ತಗೋ ಬರ್ತೇನಿ. ಮೇಷ್ಟ್ರು ಕಾರಂತರು ಎಲ್ಲರಿಗೂ ಕೊಟ್ಟಾಂಗ ನನಗೂ ನಾಕು ನಾಕು ಕಾಳು ಬಿತ್ತೋ ಬೀಜ ಕೊಟ್ಟಾರ. ಅವನ್ನ ಹಿಡುಕೊಂಡು ಬರ್ತೇನಿ. ಹಿಂದೆ ದ್ವಾಪರಯುಗ ಮುಗುದು ತ್ರೇತಾಯುಗದ ಮಧ್ಯಂತರದೊಳಗ ಕಾಮ, ಕ್ರೋಧಾದಿಗಳು, ಅನಾಚಾರಗಳು ತಲೆದೋರಿದುವಂತ. ಆಗ ಬ್ರಹ್ಮನು ತಾನು ಸೃಷ್ಟಿಸಿದ ನಾಲ್ಕು ವೇದಗಳಿಂದಾನss ಪಠ್ಯ, ಗೀತ, ಅಭಿನಯ, ರಸಗಳನ್ನು ಆಯ್ದು, ಪೋಣಿಸಿ ಇದು ಐದನೇ ವೇದ ಅಂದರ ‘ನಾಟ್ಯವೇದ’ ಅಂತ ಹೆಸರಿಟ್ಟನಂತ. ಆಮ್ಯಾಲ ಭರತಮುನಿಗೆ ಲೋಕಕಲ್ಯಾಣಕ್ಕಾಗಿ ಇದನ್ನು ಆಡಿಸು ಅಂತ ಕೊಟ್ಟನಂತ. ನಾವು ರಂಗಾಯಣದ ಕಲಾವಿದರು ಕಾರಂತರಲ್ಲೇ ಭರತಮುನಿಯನ್ನ ಕಂಡವರು. ಅಂದಾಗ ಗುರು ಕೊಟ್ಟ ಬೀಜಕ್ಕ ಜಾತಿ ಅಂತಿಲ್ಲ, ಧರ್ಮ ಅಂತಿಲ್ಲ, ಪಂಥ ಅಂತಿಲ್ಲ, ಬಿತ್ತಿದಲ್ಲಿ ಬೆಳೆಯೋ ಗುಣ ಅವುಕ್ಕದ’ ಅಂತೇಳಿದ್ದೆ.

ಅಷ್ಟರಾಗ ಶಿವಮೊಗ್ಗ ರಂಗಾಯಣದ ನಿರ್ದೇಶಕ ಸಂದೇಶ ಜವಳಿಯವರು ತಮ್ಮ ಕಲಾವಿದರು ಲಾಕ್‌ಡೌನ್ ಸಮಯದಾಗ ಕಳೆದುಹೋದಾರು ಎನ್ನುವ ಕಾಳಜಿಯಿಂದ ಆನ್‌ಲೈನ್‌ನಲ್ಲಿ ನಮ್ಮ ಹುಡುಗರ ಜೊತೆ ಸ್ವಲ್ಪಕಾಲ ಕಳೆಯಿರಿ ಅಂತ ಅಂದರು. ನನಗೂ ಹೊಸ ಅನುಭವ. ಆತುss ಅಂತ ಫೋನ್ನಾಗ ಮುಖ ತೂರಿಸಿ, ತೂರಿಸಿ ಭಾವನೆಯ ಬೇರುಗಳು ಅವರವರ ಊರುತನಕ ತಲುಪುವಂಗ ಮಾಡಿದೆ. ಎಲ್ಲೀತನಕ ಅಂದ್ರ ಶರತ್ ಅಂಬೋವ ಅವನ ಊರಾಗ, ಅವನ ಹೊಲದಾಗ, ಮರದ ಕೆಳಗ ಕೂತು ಕುರಿ ಕಾಯ್ತಿದ್ದ. ಅಲ್ಲೀಮಟ ನವರಸಗಳು ಹರ್ದು ಹೋದವು. ದಿನಕ್ಕೊಬ್ಬೊಬ್ಬರ ಪ್ರಶ್ನೆಗೆ ನನ್ನ ಅನುಭವದ ಹಿನ್ನೆಲೆಯೊಳಗ ಉತ್ತರ ಕೊಟ್ಟುಕೋಂತ, ನಾಟ್ಯಶಾಸ್ತ್ರದ ಕಡೆ ಹೊರಳಿ, ಒಂದೊಂದೇ ರಸಗಳ ಅವಲೋಕನ, ಅವುಗಳ ಲಕ್ಷಣ, ಅವುಗಳ ದೇವ್ರು, ಅವುಗಳ ಚಕ್ಬಂದಿ, ಅವುಗಳ ಜಾತಕವನ್ನು ಜಾಲಾಡಿದೆ.

ಈ ನವರಸಗಳ ಫ್ಯಾಮಿಲಿ ಗ್ರೂಪ್ ಫೋಟೊ ಕ್ಲಿಕ್ ಮಾಡಿದರ ಶೃಂಗಾರದ ಪಕ್ಕವೇ ಹಾಸ್ಯ ಕೂರಬೇಕು, ರೌದ್ರದ ಪಕ್ಕವೇ ಬೀಭತ್ಸ ಕೂರಬೇಕು, ಮತ್ತದರ ಪಕ್ಕವೇ ಕರುಣ ಕೂರಬೇಕು. ಶುದ್ಧ ವೀರರಸಕ್ಕೆ ಅಭಿಮನ್ಯುನಾ ಉದಾಹರಣೆ. ಆ ರಸದಲ್ಲಿ ಉತ್ಸಾಹವೇ ಸ್ಥಾಯಿಭಾವ. ಶ್ರೀರಾಮಚಂದ್ರ ಬಿಟ್ಟ ಅಶ್ವಮೇಧದ ಕುದುರೆಯನ್ನು ಕಟ್ಟುವಲ್ಲಿ ಲವ-ಕುಶರು ತೋರಿದ ಪರಿಯೂ ಶುದ್ಧ ವೀರದ್ದೇ. ಇನ್ನು ರೌದ್ರಕ್ಕ ಶುದ್ಧವಾದದ್ದು ರನ್ನನ ಗದಾಯುದ್ಧ. ರೌದ್ರದ ರಸಕ್ಕ ತುತ್ತಾದವನು ಮೈ ಮರಿತಾನss, ಆ ಹೊತ್ತಿಗೆ ತಿಳಿವಳಿಕೀನ ಅವನೊಳಗ ಮಾಯವಾಗಿರುತದss, ಕ್ರೋಧ ಸ್ಥಾಯಿಯಾಗಿ, ಇನ್ನದರ ದೇವರಾಗಿ ರುದ್ರ ಕಣ್ಣು ಬಿಟ್ಟುಗೊಂಡು ಕುಳಿತಿರುತ್ತಾನ. ಹುಬ್ಬೇರಿಸಿಗೊಂಡು, ಉರಿಗಣ್ಣುಗಳನ್ನ ಬಿಟ್ಟುಗೊಂಡು ಅಂಗೈಗಳನ್ನ ಒಂದಕ್ಕೊಂದು ತಿಕ್ಕೋಂತ ಹುರಿಗೊಂಡಿರ್ತಾನ. ರೌದ್ರಕ್ಕೆ ತುತ್ತಾದವರನ್ನ ನಾನು ಕಾರಾಗೃಹ ರಂಗಭೂಮಿಯಲ್ಲಿ ಬಹಳಷ್ಟು ಜನರನ್ನ ನೋಡೀನಿ. ನಮ್ಮ ನಿಜಜೀವನದಲ್ಲೂ, ಪ್ರಕೃತಿಯಲ್ಲೂ ಈ ನವರಸಗಳನ್ನು ಕಾಣಬಹುದು. ಯಾವ ನಟನೂ ತೋರದ ರೌದ್ರರಸವನ್ನು ಚಂಡಮಾರುತವು ತೋರುತದ.

ರಂಗಭೂಮಿ

ಹಾಂಗ ಕೋಕಿಲಾ ವಸಂತ ಕಾಲದಲ್ಲಿ ಮಾವಿನಮರದ ಮೇಲೆ ಕೂತು ತಳಿರೊಡೆದಿದೆ, ಚಿಗುರೊಡೆದಿದೆ ಬರ್ರಿ ಬರ್ರಿ ಅಂತ ಪ್ರಣಯಿಗಳಿಗೆ ಶೃಂಗಾರ ರಸದ ಆಹ್ವಾನ ನೀಡುತದ. ಮತ್ತೆ ಬರಗಾಲದಲ್ಲಿ ಕೆರೆ ಕಟ್ಟೆಗಳು ಒಣಗಿ, ಬಾಯ್ಬಿರಿದು ದನ ಕರುಗಳ ಬವಣೆ ನೋಡಲಾಗದ ಕರುಣವನ್ನು ಉಂಟು ಮಾಡುತಾವ. ಇನ್ನು ಈ ಗ್ರೂಪ್ ಫೋಟೊದಾಗ ಶೃಂಗಾರಕ್ಕ ವಿಶೇಷವಾದ ಮಣೆನಾ ಹಾಕಬೇಕು. ರಸಗಳ ರಾಜನೇ ಶೃಂಗಾರ. ಇದೊಂದರಲ್ಲೇ ಎಲ್ಲ ರಸಗಳೂ ತಲೆ ಎತ್ತುತಾವ. ಉದ್ಯಾನವನದಲ್ಲಿ ಕಾದು ಕಾದು ಪ್ರಣಯಿ ಬಾರದಿದ್ದಾಗ ‘ಶಂಕಾ’ ಎನ್ನುವ ವ್ಯಭಿಚಾರಿ ಭಾವ ನುಸುಳಿ, ಅದು ಈರ್ಷೆಯಾಗಿ ರೂಪುಗೊಂಡು, ‘ಮತ್ಸರ’ ಎನ್ನುವ ಹೆಸರು ಪಡೆದು ಮುಂದೆ ಅದು ವಿಪರೀತಕ್ಕ ಹೋದಾಗ ‘ರೌದ್ರ’ದ ಮೂಲಕ ಮರಣದಲ್ಲಿ ಮುಕ್ತಾಯ ಹಾಡತದ. ಇದಕ್ಕೆ ‘ಒಥೆಲೊ’ ಸರಿಯಾದ ಉದಾಹರಣೆ. ಹಾಂಗss ಸಂಚಾರಿ ಭಾವಗಳು ಮನುಷ್ಯನ ನರನಾಡಿಗಳಂತೆ ನವರಸಗಳಲ್ಲಿ ಹರಿದಾಡುತಾವ. ಅವುಕ್ಕ ತಡೆ ಎಂಬೋದಿಲ್ಲ.

ಚಪ್ಪರಮನೆ ಶ್ರೀಧರ ಹೆಗ್ಡೆಯವರು ಮಂಥರೆಯಾಗಿ ಕೈಕೇಯಿ ಹತ್ತಿರ ತನ್ನ ನಿಲುವನ್ನು ಸಮರ್ಥಿಸುವ ಪರಿಯೊಂದದ. ಆ ಪರಿಯೊಳಗ ದೈನ್ಯ, ನೋವು, ಅವಮಾನ, ಶಂಕಾ, ಕುತ್ಸಿತ, ಮಸಲತ್ತು, ಸೇಡು ಮೊದಲಾದುವಾಗಿ ಆಕಿಯೊಳಗ ಸಂಚರಿಸದಾ ಇರುವ ಭಾವಗಳಾ ಇಲ್ಲ. ಅಂತು ಶಿವಮೊಗ್ಗ ರಂಗಾಯಣದ ಮಕ್ಕಳಿಗೆ ಇದನ್ನೆಲ್ಲ ಹೇಳಿ ಮುಗಿಸೋ ಹೊತ್ತಿಗೆ ಹೊತ್ತಾಗಿತ್ತು. ಮುಗಿಸಿ ಕಲಬುರ್ಗಿ ರಂಗಾಯಣಕ್ಕ ಹೊಂಡುಬೇಕಾತು. ಹೊಂಟೆ.

***

ಶಿವಮೊಗ್ಗೆಯ ರಂಗಾಯಣದಾಗ ಗರಿಬಿಚ್ಚಿದ ನಾಟ್ಯಶಾಸ್ತ್ರದ ಪಾಠ ಕಲಬುರ್ಗಿಯ ರಂಗಾಯಣದಾಗ ಮುಂದುವರೆದು, ನನ್ನಷ್ಟಕ್ಕ ನನಗಾ ವಿಸ್ಮಯವನ್ನುಂಟು ಮಾಡಿತು. ಇಲ್ಲೀತನ ಆದ ಅನುಭವಕ್ಕ ಕಡೆಗೋಲು ಇಟ್ಟು ಕಡೆದಾಂಗ ಆತು. ಶಿವನಾss... ಅದಾ ಶರೀರ, ಅದಾ ಶಾರೀರಾ, ಅವಾ ಕಣ್ಣು, ಅದಾ ಮೂಗು, ಅದಾ ಬಾಯಿ, ಆದರ ನಟನ ದೇಹದೊಳಗ ಪ್ರವೇಶ ಪಡೆದ ಆತ್ಮ ಮಾತ್ರ ಬ್ಯಾರೆ ಬ್ಯಾರೆ.

ಹುಡುಗರ ಪ್ರಶ್ನೆಗಳಿಗೆ ಉತ್ತರ ಕೊಟ್ಟುಕೋತ ಹೇಳಿದೆ, ‘ನಾವು ರಂಗದ ಮ್ಯಾಲೆ ಬರುವಾಗ, ವೇಷತೊಟ್ಟ ಆತ್ಮದೊಂದಿಗೆ ಬರಬೇಕು. ಅದರ ಹೆಣ ಹೊತ್ತುಗೊಂಡು ಬರಬಾರದು. ಆತ್ಮ ಒಳಹೊಕ್ಕ ದೇಹ ನಮ್ಮದಾss ಆದರೂ ಆ ಆತ್ಮ ನಮ್ಮದಾ ಕಣ್ಣು, ನಮ್ಮದಾ ಕಿವಿ, ನಮ್ಮದಾ ನಾಲಿಗೆಯಿಂದ ಪ್ರೇಕ್ಷಕರೊಂದಿಗೆ ಅನುಸಂಧಾನ ಮಾಡಬೇಕು. ಹಾಂಗ ರಂಗಕ್ಕ ಬಂದ ಎಲ್ಲ ನಟರ ದೇಹದೊಳಗ ವೇಷದ ಆತ್ಮಗಳು. ಹಾಡೋದು, ಹಾಕ್ಯಾಡೋದು, ರಮಿಸೋದು, ಮಸಲತ್ತು ಮಾಡೋದು, ಕತ್ತೀ ಮಸಿಯೋದು, ಮೀಸೀ ತಿರುವೋದು, ಅಳೋದು, ನಗೋದು, ಕನಿಕರಿಸೋದು, ಥೂss‌ತ್ಕರಿಸೋದು, ವ್ಯಾssಕರಿಸೋದು ಮಾಡುತ ಇರತಾವ. ಭರತಮುನಿಯ ಮಕ್ಕಳು ಥೇಟ್ ಹೀಂಗss ರಂಗದ ಮ್ಯಾಲೆ ವೇಷತೊಟ್ಟ ‘ಆತ್ಮ’ದೊಂದಿಗೆ ಬರ್ತಾರ.

ಆಟ ಮುಗಿಯೋತನss ನಮ್ಮ ನಮ್ಮ ಇಡೀ ದೇಹಾನ ಬಾಡಿಗೀ ಬಿಟ್ಟಾಂಗ ಆಗಿರತದ. ನಟನ ದೇಹಕ್ಕ ಮುಪ್ಪು ಬಂದರೂ ಅದು ರಂಗದಮ್ಯಾಲ ಒಮ್ಮೊಮ್ಮೆ ತುಡುಗು ದನ ಓಡ್ಯಾಡಿದಾಂಗ ಮೈದುಂಬಿದ ಕರುವಿನ ಹಾಂಗ ಜಿಗಿದಾಡಬೇಕಾಗ್ತದ. ಆಗ ದೇಹ ತನಗ ಅಂಟಿಕೊಂಡ ಆತ್ಮಕ್ಕ ‘ಇತ್ತಿತ್ತಾss ನನ್ನ ಕೈಲಿ ಏನೂ ಆಗಣಿಲ್ಲೋ ಮಾರಾಯ’ ಅಂತ ಗೋಗರೀತದ. ಒಳಗೊಳಗ ರೋದಿಸ್ತದ (ಇವೆರಡೂ ಒನ್ನಮೂನಿ ಗಂಡ ಹೆಂಡತಿ ಇದ್ದಾಂಗ). ಆದರ ನಟನ ಆತ್ಮ ಇದೀಗ ಕಣ್ಣುಬಿಟ್ಟ ಕರುವಿನ ಹಾಂಗ, ಬೆದಿಗೆ ಬಂದ ಹೋರಿ ಹಾಂಗ ಜೀವನ ಪ್ರೀತಿನ ಅಂಗಳದ ತುಂಬ ಚೆಲ್ಯಾಡಿಕೋಂತ ಮುಪ್ಪಾದ ದೇಹಕ್ಕ ಹೇಳ್ತದ: ‘ಅರೇ...ಮೇರಾ ದೋಸ್ತ್ ಉಠೋ..ಉಠೋ..’ ನಾನು ತೊಡೋ ವೇಷ ಇನ್ನೂ ಬಾಕಿ ಭಾಳ ಉಳ್ದಾವ. ನಾನಿನ್ನೂ ಮುಸಲೋನಿ ಆಗಬೇಕು. ನಟಸಾಮ್ರಾಟದ ಗಣಪತರಾವ್ ದೇಶಮುಖನಾಗಬೇಕು. ಜೋಗಮ್ಮನಾಗಿ ಚೌಡಿಕಿ ಹಿಡುಕೊಂಡು ಎಗರಿ ಎಗರಿ ಕುಣಿದಾಡಬೇಕು. ಕಾಳಿದಾಸನ ವಿಕ್ರಮನಾಗಿ ಊರ್ವಶಿಗಾಗಿ ಹಪಹಪಿಸಬೇಕು. ಗೋಕರ್ಣದ ಗೌಡಶಾನಿ ಎಲೆಅಡಿಕಿ ತಿನ್ನಕೋಂssತ, ತುಟಿ ಕಚ್ಚಿಕೋಂsತ, ಮಂಚದ ತನಾ ಬಂದು ಆ ಮಂಚದ ಐಸಿರಿ ನೋಡಿ, ‘ಅಯ್ಯಾ ಏನು ಚೆಂದೈತ ಯವ್ವss ಏರೋ ಗಂಡಸಿದ್ರ ಈ ಮಂಚದಮ್ಯಾಲೆ ಮಲಗೇನಂದೇನು’ ಅಂತ ಮುಲುಗತ ವಾರೆಗಣ್ಣಿಂದ ಗೌಡಗ ನೋಡಿದಾಗನಾss ವಾಂತಿವಿಲಾಸದ ಚಹಾದಂಗಡ್ಯಾಗ ಮಿರ್ಚಿ ಬಜ್ಜಿ ತಿಂದ ತಪ್ಪಿಗೆ ಕಚ್ಚಿ ಬಿಚ್ಚಿಕೋಂತ ತಂಬಿಗಿ ಹಿಡುಕೊಂಡು ಓಡೋ ಸೊಳಿಕ್ಯ ಗೌಡನಾss ನಾನಾಗಬೇಕು.

ಮತ್ತ ಆ ಚೋರ್ ಗುರುವಿಗೆ ಚಾಂಡಾಲ ಶಿಷ್ಯನಾಗಬೇಕು. ಆ ವೇಷ ತೊಡಬೇಕು, ಈ ವೇಷ ತೊಡಬೇಕು, ತೊಡೋ ವೇಷ ಇನ್ನೂ ಬಾಕಿ ಭಾಳ ಉಳ್ದಾವ, ನೀ ಆಗೋದಿಲ್ಲ ಅಂತ ಅನುಬ್ಯಾಡ. ಅಲ್ಲಿ ಆ ಮುದುಕ ತಲೆತಿರುಕ ಲಿಯರ್ ಕಾಯ್ತುಕೂತಾನ, ‘ನನ್ನನ್ನ ರಂಗದ ಮ್ಯಾಲೆ ಹೊತುಗೊಂಡು ಓಡ್ಯಾಡಲೇ ಹುಡುಗಾ, ಕೂತು ಮಂದಿಗೆ ಹೇಳೋ ನಾಕು ಮಾತು ಉಳುದಾವ,

9ನೇ ಪುಟಕ್ಕೆ...

ಬದುಕಿನ ಪಾಡು ಹಾಡಾಗುವಾಗ...

ರಶ್ಮಿ ಎಸ್.

ಹಾಡ್ತಿದ್ವಿ. ಹಾಡ್ಕೊಂತ ಕೆಲಸ ಮಾಡ್ತಿದ್ವಿ. ಹಿಂಗ ಹಾಡೂದ್ರಿಂದ ಮನಸು ಉಲ್ಲಾಸದಿಂದ ಇರ್ತಿತ್ತು. ದಣಿವು ಗೊತ್ತಾಗ್ತಿರಲಿಲ್ಲ. ಹಾಡೂದ್ರಿಂದ ಕಸುವು ಹೆಚ್ಚಾಗ್ತದ ತಾಯಿ...

ಪಾರ್ವತೆವ್ವ ಹೊಂಗಲ್, ತಮ್ಮ ಗಾನಯಾನದ ಬಗ್ಗೆ ಹೇಳುತ್ತಿದ್ದರು. ಇದೀಗ 65ರ ಹರೆಯ, ಸಾವಿರಗಟ್ಟಲೆ ಹಾಡುಗಳಿವೆ ಅವರ ಸಂಚಿಯಲ್ಲಿ. ಅಷ್ಟೇ ರಾಗಗಳೂ ಅದರಷ್ಟೇ ವಿಷಯ ವೈವಿಧ್ಯಗಳೂ.

ಬದುಕಿನ ಪಾಡನ್ನು ಹಾಡಿನೊಂದಿಗೆ ಹಗುರವಾಗಿಸುವ ಬಗೆಯನ್ನು ನೆನಪಿನ ಬುತ್ತಿಯಂತೆ ಬಿಚ್ಚಿಡುತ್ತಿದ್ದರು. ಬರಗಾಲದಾಗ ಕೂಲಿಗೆ ಹೋಗ್ತಿದ್ವಿ. ಸಸಿ ನೆಡಾಕ ಅಗಿ ತೋಡಬೇಕಿತ್ತು. ಹಂಗ ಗುಂಡಿ ತೋಡುಮುಂದ ಹಾಡ್ತಿದ್ವಿ. ಕೈ ಬಿರುಸಾದ್ವು. ಆದ್ರ ಮನಸು ಹಗುರ ಆಗ್ತಿತ್ತು.

ಹಾಡು ನಮಗೊಂದು ಪರಿಚಯ ತಂದುಕೊಡ್ತು. ಹೋದಲ್ಲೆಲ್ಲ ಪಾರ್ವತೆವ್ವ ಹಾಡು ಹೇಳವಾ ಅಂದ್ರ ಸಂದರ್ಭಕ್ಕ ತಕ್ಕಂಗ ಹಾಡ್ತಿದ್ವಿ. ಕೆಲವೊಮ್ಮೆ ಬೆಳತನಾ ಹಾಡಿದ್ದದ. ಯಾರರೆ ಹಾಡಿದ್ರ ಅದು ಲಗೂನೆ ತಿಳೀತಿತ್ತು. ಓದಿದ್ದಲ್ಲ, ಉರುವು ಹಚ್ಚಿದ್ದಲ್ಲ. ನಮ್ಮದೇನಿದ್ರೂ ಕೇಳಿದ್ದನ್ನ ಹಾಡೂದು. ಮತ್ತ ಹಾಡೂದು, ಹಾಡ್ಕೊಂತ ಅದನ್ನ ಕಲಿಯೂದು. ಹಿಂಗ ಒಂದೆರಡಲ್ಲ ಈಗ ಎಣಸಾಕ ಆಗೂದಿಲ್ಲ ಬಿಡ್ರಿ... ಅಷ್ಟು ಹಾಡದಾವ.

ಹೇಳಿಕೇಳಿ ಜನಪದ ಹಾಡುಗಳಿವು. ಪ್ರಾದೇಶಿಕವಾಗಿ ಬದಲಾಗ್ತಾವ. ಕೆಲವೊಮ್ಮೆ ವೀರಭದ್ರನ ನೆನಸಿದ್ರ, ಇನ್ನು ಕೆಲವೊಮ್ಮೆ ಬಸವಣ್ಣನನ್ನು. ಅವರವರ ಇಷ್ಟದೈವ, ಕುಲದೈವಕ್ಕ ತಕ್ಕಂಗ ಹಾಡು ಬದಲಾಗ್ತಾವ. ಮೊದಲೆಲ್ಲ ಹಾಡುಗಳಲ್ಲಿ ಹೆಣ್ಮಕ್ಕಳು ಹೆಂಗಿರಬೇಕು ಅನ್ನೂದೆ ಹೆಚ್ಚು ಪ್ರಚಾರದಲ್ಲಿದ್ದವು. ಆದ್ರ ಗಂಡುಮಕ್ಕಳು, ಬಸುರಿನ್ನ ಹೆಂಗ ನೋಡಬೇಕು, ಕಾಳಜಿ ಮಾಡಬೇಕು ಅಂತನೂ ಹಾಡದಾವ. ಆದ್ರ ಅವು ಹೆಚ್ಗಿ ಬೆಳಕಿಗೆ ಬರಲಿಲ್ಲ. ಕಳ್ಳಕುಬಸದಾಗ (ಮೊದಲ ಮೂರು ತಿಂಗಳ ಗರ್ಭಿಣಿಗೆ ಮನೆಯಲ್ಲಿಯೇ ಮಾಡುವ ಸೀಮಂತ. ಇದಕ್ಕೆ ಯಾರನ್ನೂ ಆಹ್ವಾನಿಸದೇ ಇರುವುದರಿಂದ ಕಳ್ಳಕುಬಸ ಅಂತ ಕರೀತಾರೆ) ಇಂಥಾವು ಹಾಡ್ತೇವಿ.

ಮಾತಿನ ಜಗದಾಗ ಮೂಕಳಾಗಿ ಬದುಕು ತಂಗಿ ಅಂತ ಒಂದು ಸಾಲು ಬರ್ತದ. ಅಲ್ಲಿ ತಂಗಿಯಾದ್ರೇನು, ತಮ್ಮ ಆದ್ರೇನು? ಬರೇ ಮಾತುಗಳು ವಾದ, ಜಗಳಕ್ಕ ಹೋದ್ರ ಮೂಕರಾಗಬೇಕು ಅಂತ. ಹಾಡುಗಳು ತಿಳಕೊಂಡಂಗ ಇರ್ತಾವ. ಬದುಕು ಸಹನೀಯಗೊಳಿಸಾಕ, ಸಂತಸದಿಂದ ಇರಾಕ ಹಾಡ್ತೇವಿ. ಅವೇ ನೀತಿ, ನಿಯಮ ಅಂತನ್ನೂದಕ್ಕಿಂತ ಅವು ಅಂತಃಕರುಣೆಯ ಹಾಡು ಅಂತನ್ಕೊಬೇಕು.

ಒಂದಿಪ್ಪತ್ತು ವರ್ಷಗಳ ಹಿಂದ ನಮಗ ಬೆಂಗಳೂರಿಗೆ ಕರಿಸಿಕೊಂಡು ಹಾಡು ಹೇಳಿಸಿದ್ರು. ಕ್ಯಾಸಿಟ್ ಮಾಡಿದ್ರು. ಬೆಂಗಳೂರು ತೋರಿಸಿದ್ರು. ಊರಿಗೆ ಕಳಿಸಿದ್ರು. ಆಮೇಲೆ ಎಲ್ಲಾ ಕಡೆ ನಾವು ಹಾಡಿದ ಕ್ಯಾಸೆಟ್ ಹಚ್ತಿದ್ರು. ಅಯ್ಯ ನಾವೇ ಹಾಡಿದ್ವು, ನಮ್ಮ ಬಾಯಿ ಮುಚ್ಚಂಗ ಮಾಡಿದ್ವು ಅಂತನಿಸಿತ್ತು. ಆದ್ರ ಮುಂದಿನ ಕ್ಷಣ, ನಾವು ಸತ್ತು ಹೋದ್ರ, ಹಿಂಗರೆ, ಇಷ್ಟರೆ ಹಾಡು ಉಳೀತಾವಲ್ಲ ಅಂತನೂ ಅನಿಸ್ತು.

ರಾಜ್ಯ ಸರ್ಕಾರ ಪ್ರಶಸ್ತಿ ಕೊಟ್ಟು ಗೌರವಿಸಿತು. ನನ್ನಗ ಬಸೂ (ಪತ್ರಕರ್ತ ಬಸವರಾಜ ಹೊಂಗಲ್) ಎಲ್ಲ ಹಾಡುಗಳನ್ನು ಬರದು, ಸಂಗ್ರಹಿಸಿದ. ನನ್ನ ಮಗಳು, ಸೊಸಿ, ಮೊಮ್ಮಗಳು ಹಾಡು ಕಲೀತಾರ. ಹಾಡ್ತಾರ. ವರ್ಷಾನುಗಟ್ಟಲೆ ಈ ಹಾಡು ನಮ್ಮ ಜೊತಿಗೆ ಬಾಳೆ ಮಾಡ್ಕೊಂತ ಬಂದಾವ. ನಮ್ಕೂಡ ಮುಗಿಯೂದಿಲ್ಲ. ನಾವ್ಹೆಂಗ ನಮ್ಮ ಮಕ್ಕಳ ಜೀವದಾಗ ಬದುಕ್ತೇವಿ.. ಹಂಗ ಇವುನು.

ಹಿಂಗ ಮಾತಾಡ್ಕೊಂತ ಪಾರ್ವತೆಮ್ಮ ನಮ್ಮ ಊಟದ ತಾಟಿಗೆ ಹಕ್ಕರಕಿ (ಹೊಲದ ಬದುವಿನಲ್ಲಿ ಬೆಳೆಯುವ ಸೊಪ್ಪು) ಪಚಡಿ ನೀಡಿದ್ರು. ರೊಟ್ಟಿ ಮುರುದು ಹಾಕಿದ್ರು. (ಉಣ್ಣುವಾಗ ಎಣಿಸಬಾರದೆಂಬ ಕಾಳಜಿ. ಹೊಟ್ಟಿ ಹಿಡಿದಷ್ಟು ಉಣ್ಣಬೇಕು. ಲೆಕ್ಕಹಾಕಿ ಉಣ್ಣಬಾರದು ಎಂದು ಈ ಕಡೆಯೆಲ್ಲ ಊಟಕ್ಕೆ ಕುಳಿತಾಗ, ರೊಟ್ಟಿ, ಚಪಾತಿ ಹರಿದು ಹಾಕುತ್ತಾರೆ) ಹೊಟ್ಟಿ ತುಂಬಿತ್ತು. ಮನಸೂನು. ಆದ್ರ ಹಾಡುಗಳಿನ್ನಾ ಖಾಲಿ ಆಗಿರಲಿಲ್ಲ.

ಜನಪದ ಗಾಯಕಿಯರಾದ ದೇವರಹುಬ್ಬಳ್ಳಿಯ ಪಾರ್ವತೆವ್ವ ಹೊಂಗಲ್, ಮಲ್ಲಮ್ಮ ಜೊತೆಗೆ, ವಿಜಯಲಕ್ಷ್ಮಿ ಹೊಂಗಲ್, ಸಂಗೀತಾ ಹಾಗೂ ಸುಜಾತಾ ತಂಡ

ಸಿಂಗಪುರದ 'ಸತ್ತವರ ಬೀದಿ'ಯಲ್ಲಿ

ಸಾಗೋ ಬೀದಿಯ ಎರಡೂ ಬದಿಗಳಲ್ಲಿ ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಸಾವಿನ ಮನೆಗಳು ಆರಂಭವಾದವು. ಇದಕ್ಕೆ ಕಾರಣ ಬಡ ವಲಸಿಗರಲ್ಲಿ ಆಳವಾಗಿ ಬೇರೂರಿದ್ದ ಧಾರ್ಮಿಕ ನಂಬಿಕೆಗಳು. ಕಿಕ್ಕಿರಿದ ಸಾಗೋ ಬೀದಿಯಲ್ಲಿ ಸಾಗುವಾಗ ಎಲ್ಲಿಂದಲೋ ಬಂದು, ಇಲ್ಲಿ ನೆಲೆಸಿ ಯಶಸ್ವಿಯಾಗಿರುವ ಯುವಜನರ ಆತ್ಮವಿಶ್ವಾಸ ಹೊತ್ತ ಮುಖಗಳ ಹಿಂದೆ, ಅಸಹಾಯಕರಾಗಿ ಸಾವಿನ ಮನೆಗಳಲ್ಲಿ ಬಿಡುಗಡೆಗಾಗಿ ಕಾಯುತ್ತಿದ್ದ ವೃದ್ಧರ ನೆರಳುಗಳೂ ಸುಳಿಯುತ್ತವೆ!

ಸಿಂಗಪುರದ ಚೈನಾಟೌನ್‌ನಲ್ಲಿ ತಿಂಡಿ-ತಿನಿಸುಗಳ ಬೀದಿ

ಡಾ.ಕೆ.ಎಸ್.ಚೈತ್ರಾ

ಪ್ರವಾಸ

ಸ್ವಚ್ಛತೆ, ಶಿಸ್ತು, ಸೌಲಭ್ಯ ಸೌಕರ್ಯಗಳ ಜತೆ ಅತ್ಯುತ್ತಮ ತಂತ್ರಜ್ಞಾನ ಮತ್ತು ಮನರಂಜನೆ ಹೀಗೆ ಎಲ್ಲವೂ ಇರುವ ಪುಟ್ಟ ದೇಶ ಸಿಂಗಪುರ. ಚೀನೀಯರು, ಭಾರತೀಯರು ಮತ್ತು ಮಲೈಗಳು ಹೀಗೆ ಬಹುಜನಾಂಗೀಯ ಸಂಸ್ಕೃತಿ ಇಲ್ಲಿಯದು. ಇಲ್ಲಿನ ಅಧಿಕೃತ ಭಾಷೆಗಳಲ್ಲಿ ತಮಿಳೂ ಒಂದಾಗಿದೆ. ಸಿಂಗಪುರವು ಪ್ರವಾಸಿಗರ ಅಚ್ಚುಮೆಚ್ಚಿನ ತಾಣ; ಶಾಪಿಂಗ್ ಮಾಡುವವರ ಸ್ವರ್ಗ. ಇಲ್ಲಿರುವ ಚೈನಾಟೌನ್ ಬಡಾವಣೆಯಲ್ಲಿ ಹೆಸರೇ ಸೂಚಿಸುವಂತೆ ಚೀನಿಯರ ಸಂಖ್ಯೆ ಹೆಚ್ಚು. ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ಬಂದ ಚೀನಿ ವಲಸಿಗರು ಇಲ್ಲಿ ನೆಲೆಸಿದ್ದ ಕಾರಣ ಈ ಹೆಸರು! ಬಹುಮಹಡಿ ಕಟ್ಟಡಗಳು, ಅಗಲ ರಸ್ತೆಗಳು, ಐಷಾರಾಮಿ ಕಾರು ಓಡಾಡುವ ಸಿಂಗಪುರಕ್ಕಿಂತ ಭಿನ್ನ ಚಿತ್ರಣ ಇಲ್ಲಿಯದು. ಕಿರಿದಾದ ಬೀದಿಗಳ ಇದು, ಬುದ್ಧನ ದೇಗುಲ, ಶ್ರೀ ಮಾರಿಯಮ್ಮನ್ ದೇವಸ್ಥಾನ, ಮ್ಯೂಸಿಯಮ್ ಇವೆಲ್ಲವನ್ನೂ ಒಳಗೊಂಡಿರುವ ಮುಖ್ಯ ಸ್ಥಳ. ಇದೆಲ್ಲದರ ಜತೆ ಅಗ್ಗವಾದ ಮೇಡ್ ಇನ್ ಚೈನಾ ವಸ್ತುಗಳು, ದಾರಿಬದಿಯ ತಿಂಡಿ- ಖಾದ್ಯಗಳು ಸಿಗುವುದರಿಂದ ಜನದಟ್ಟಣೆಯ ಪ್ರದೇಶವಾಗಿದೆ. ಕರಿದ ಖಾದ್ಯಗಳ ಪರಿಮಳ ಹೀರುತ್ತಾ, ಒತ್ತೊತ್ತಾದ ಪುಟ್ಟ ಅಂಗಡಿ ನೋಡುತ್ತಾ, ಚೌಕಾಶಿ ಮಾಡುವ ಗ್ರಾಹಕರು-ವರ್ತಕರ ಗಲಾಟೆ ಕೇಳುತ್ತಾ ಥೇಟ್ ನಮ್ಮಲ್ಲಿಯ ಹಳ್ಳಿ ಸಂತೆಯ ಅನುಭವ. ಮಿನುಗುವ ವಿದ್ಯುತ್ ದೀಪಗಳ ಬೆಳಕಿನಲ್ಲಿ, ನಿಶ್ಶಬ್ದವಾದ ಸಿಂಗಪುರದ ಗಗನಚುಂಬಿ ಕಟ್ಟಡ, ಪಾರ್ಕ್ ನೋಡುವುದು ಚೆಂದ; ಆದರೆ ಮುಸ್ಸಂಜೆಯ ವೇಳೆ ಚೈನಾಟೌನ್‌ನಲ್ಲಿ ಜನಪ್ರವಾಹದ ಮೇಲೆ ಬೆಳಗುವ ದೊಡ್ಡ ಕಂದೀಲುಗಳನ್ನು, ಅದು ಸೃಷ್ಟಿಸುವ ಮಾಯಾಲೋಕವನ್ನು ನೋಡುವುದು ನಿಜಕ್ಕೂ ಅವಿಸ್ಮರಣೀಯ. ಈ ಬೆಳಕಿನ ಹಿಂದೆ ಸಾಗೋ ಲೇನ್ ಎಂಬ ಬೀದಿಯಲ್ಲಿ ಬಡವರ, ರೋಗಿಗಳ ನೋವಿನ ದನಿಯೂ ಪಿಸುಗುಡುತ್ತದೆ; ಕೆಲವು ದಶಕಗಳ ಹಿಂದೆ ಇದು 'ಸತ್ತವರ ಬೀದಿ' ಎಂದೇ ಖ್ಯಾತವಾಗಿತ್ತು. ಇಲ್ಲಿದ್ದವು ಸಾವಿನ ಮನೆಗಳು!

ಸಾಗೋ ಲೇನ್

ಸಾಗೋ ಎಂದರೆ ಸಾಬೂದಾನಾ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಇಲ್ಲಿ ಸಾಬೂದಾನಾ ಹಿಟ್ಟು ಮಾಡುವ ಅನೇಕ ಕಾರ್ಖಾನೆಗಳಿದ್ದವು. ವರ್ಷಕ್ಕೆ ಒಟ್ಟು ಸುಮಾರು ಎಂಟುಸಾವಿರ ಟನ್‌ಗಳಷ್ಟು ಹಿಟ್ಟನ್ನು ಉತ್ಪಾದಿಸಲಾಗುತ್ತಿತ್ತು. ಮರದ ತಿರುಳಿನಿಂದ ಮಾಡಲಾದ ಈ ಸಾಬೂದಾನಾದ ಹಿಟ್ಟು ಸಿಹಿತಿಂಡಿ, ರೋಗಿಗಳ ಆಹಾರಕ್ಕಾಗಿ ಬಳಸಲಾಗುತ್ತಿತ್ತು. ಇವುಗಳನ್ನು ಯುರೋಪ್ ಮತ್ತು ಭಾರತಕ್ಕೆ ರಫ್ತು ಮಾಡಲಾಗುತ್ತಿತ್ತು. ಈ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದ ಹೆಚ್ಚಿನವರು ಇದೇ ಪ್ರದೇಶದ ಸುತ್ತಮುತ್ತ ವಾಸಿಸುತ್ತಿದ್ದರು. ಕಾಲಕ್ರಮೇಣ ಈ ಕಾರ್ಖಾನೆಗಳು ಮರೆಯಾದಂತೆ ಈ ಬೀದಿಯಲ್ಲಿ ಇನ್ನಿತರ ವಾಣಿಜ್ಯ ಚಟುವಟಿಕೆ ಆರಂಭವಾಯಿತು. ಆದರೆ ಹಿಂದಿನ ಸಾಗೋ ಲೇನ್ ಹೆಸರು ಮಾತ್ರ ಹಾಗೆಯೇ ಮುಂದುವರಿಯಿತು.

ಸಾವಿನ ಮನೆಗಳ ಸ್ಥಾಪನೆ

ಇದೇ ಬೀದಿಯ ಎರಡೂ ಬದಿಗಳಲ್ಲಿ ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಸಾವಿನ ಮನೆಗಳು ಆರಂಭವಾದವು. ಇದಕ್ಕೆ ಕಾರಣ ಬಡ ವಲಸಿಗರಲ್ಲಿ ಆಳವಾಗಿ ಬೇರೂರಿದ್ದ ಧಾರ್ಮಿಕ ನಂಬಿಕೆಗಳು. ಸಿಂಗಪುರಕ್ಕೆ ಉತ್ತಮ ಭವಿಷ್ಯವನ್ನರಸಿ ಹೆಚ್ಚಿನ ಸಂಖ್ಯೆಯಲ್ಲಿ ಚೀನಾದಿಂದ ವಲಸಿಗರು ಬರುತ್ತಿದ್ದರು. ಅನೇಕರು ತಮ್ಮೊಂದಿಗೆ ಕುಟುಂಬವನ್ನೂ ಕರೆತರುತ್ತಿದ್ದು ಅವರಲ್ಲಿ ತಂದೆ-ತಾಯಿಯರೂ ಇರುತ್ತಿದ್ದರು. ಆರ್ಥಿಕ ಮುಗ್ಗಟ್ಟಿನ ಸಲುವಾಗಿ ಪುಟ್ಟ ಮನೆಗಳಲ್ಲಿ ಕಿಕ್ಕಿರಿದು ನೆಲೆಸುತ್ತಿದ್ದರು. ಅನಾರೋಗ್ಯ, ಮುಪ್ಪು ಹೀಗೆ ಯಾವುದೇ ಕಾರಣದಿಂದ ಸಾವು ಸನ್ನಿಹಿತವಾದಾಗ ಅವರ ಲಾಲನೆ-ಪಾಲನೆ ಮಾಡುವುದು ಕಷ್ಟಸಾಧ್ಯವಾಗಿತ್ತು. ಇದಲ್ಲದೇ ನಡುವಯಸ್ಸಿನಲ್ಲಿ ಸ್ವದೇಶ ಬಿಟ್ಟು ಬಂದವರಿಗೆ ಇಲ್ಲಿ ಬಂಧು ಬಳಗ ಯಾವುದೂ ಇರಲಿಲ್ಲ. ಹೀಗಾಗಿ ರೋಗ/ಮುಪ್ಪು ಬಂದು ಅಂತಿಮ ದಿನ ಎಣಿಸುವಾಗ ಆರೈಕೆ ಹೇಗೆ? ಚೀನೀಯರಲ್ಲಿ ಮನೆಯಲ್ಲಿ ಸಾವು ಸಂಭವಿಸಿದರೆ ಅಶುಭ; ಅಂತಹ ಮನೆಯಲ್ಲಿ ದುಷ್ಟಶಕ್ತಿಗಳು ನೆಲೆಸುತ್ತವೆ ಎಂಬ ನಂಬಿಕೆಯಿದೆ. ಹೀಗಾಗಿ ಸಾವು ಸಂಭವಿಸಿದರೆ ಮಾಂತ್ರಿಕನನ್ನು ಕರೆಸಿ ಅನೇಕ ವಿಧಿ ವಿಧಾನಗಳನ್ನು ಮಾಡಿಸುವುದು ರೂಢಿ. ಇದಕ್ಕೆ ತಗಲುವ ಖರ್ಚು ಬಡ ವಲಸಿಗರಿಗೆ ದೊಡ್ಡ ಹೊರೆಯಾಗಿತ್ತು. ಈ ಖರ್ಚು ತಪ್ಪಿಸಿ, ಅಪಶಕುನ ದೂರಮಾಡಿ ಸಾಯಲೊಂದು ನೆಲೆ ಕಲ್ಪಿಸುವ ಸಲುವಾಗಿ ಹುಟ್ಟಿಕೊಂಡಿದ್ದು ಈ ಸಾವಿನ ಮನೆಗಳು.

ಮನೆಯೊಳಗೆ

ಒತ್ತೊತ್ತಾಗಿ ಕಟ್ಟಿದ ಎರಡಂತಸ್ತಿನ ಈ ಮನೆಗಳಲ್ಲಿ ಮೇಲಿನ ಅಂತಸ್ತಿನಲ್ಲಿ ಮರಣ ಸನ್ನಿಹಿತರಾದವರು ಉಳಿಯುವ ಕೋಣೆಗಳಿದ್ದವು. ಕೆಳಗಿನದು ಅಂತ್ಯಕ್ರಿಯೆಗೆ ಬೇಕಾಗುವ ಸೇವೆ ಒದಗಿಸುವ ಕೋಣೆಯಾಗಿತ್ತು. ಚೀನಾದಿಂದ ವಲಸಿಗರಾಗಿ ಬಂದು ದೈಹಿಕ ಶ್ರಮದ ನಿರ್ಮಾಣ ಮತ್ತು ಜವಳಿ ಕೆಲಸದಲ್ಲಿ ತೊಡಗಿಸಿಕೊಂಡಿದ್ದ ಸಾಮ್‌ಸೂಯ್ ಮಹಿಳೆಯರಿಗೆ ಹೆಚ್ಚಿನ ವೇತನ ದೊರೆಯುತ್ತಿರಲಿಲ್ಲ. ವೃದ್ಧರ ಆರೈಕೆಗೆ ಸಮಯವೂ ಇರಲಿಲ್ಲ. ಅಂತಹ ಮಹಿಳೆಯರು ಈ ಮನೆಗಳ ಪೋಷಕರಾಗಿದ್ದರು. ರೋಗಿಗಳನ್ನು ಸ್ವೀಕರಿಸುವ ಮನೆ ಎಂಬ ಹೆಸರಿನಲ್ಲಿ ಇವುಗಳಲ್ಲಿ ಕೆಲವು ಸರ್ಕಾರದಿಂದ ಲೈಸೆನ್ಸ್ ಕೂಡಾ ಪಡೆದಿದ್ದವು! ಅಲ್ಪ ಪ್ರಮಾಣದ ಶುಲ್ಕ ವಿಧಿಸುತ್ತಿದ್ದ ಇವು ಜನಪ್ರಿಯವಾದರೂ ಸೌಲಭ್ಯ ಏನೂ ಇರಲಿಲ್ಲ. ಪುರುಷರಿಗೆ –ಮಹಿಳೆಯರಿಗೆ ಪ್ರತ್ಯೇಕ ಕೋಣೆ ಇದ್ದರೂ ಛತ್ರದ ಬಗೆಯಲ್ಲಿ ಉಳಿಯುವ ವ್ಯವಸ್ಥೆ. ಗಾಳಿ ಬೆಳಕು ಆಡದ ಕತ್ತಲ ಕೋಣೆಗಳು, ಮುಗ್ಗಲು ವಾಸನೆ, ಕೊಳಕಾದ ಗೋಡೆ-ನೆಲ, ಮಲಗಲು ಗಟ್ಟಿಯಾದ ಮರದ ಮಂಚ, ತಿನ್ನಲು ಸಪ್ಪೆ ಊಟ ಇವುಗಳಿಂದ ಬದುಕುವುದಕ್ಕಿಂತ ಸಾಯುವುದೇ ಮೇಲು ಎನ್ನಿಸುವ ಭಾವನೆ ಸಹಜವಾಗಿತ್ತು. ದಿನಕ್ಕೊಮ್ಮೆ ವೈದ್ಯರು ಬರುತ್ತಿದ್ದರೂ ಅದು ಮರಣದ ಪ್ರಮಾಣಪತ್ರ ನೀಡಲೇ ಹೊರತು ಆರೈಕೆಗಲ್ಲ. ಹಾಗಿದ್ದೂ ಅಂದಾಜಿನ ಪ್ರಕಾರ ತಿಂಗಳಿಗೆ ಎಪ್ಪತ್ತು ಜನ ಇಲ್ಲಿ ಅತಿಥಿಗಳಾಗಿ ಬರುತ್ತಿದ್ದರು ಮತ್ತು ಬಾರದ ಲೋಕಕ್ಕೆ ಪಯಣಿಸುತ್ತಿದ್ದರು. ಸಾವಿನ ಮನೆಗಳ ಕಾರಣದಿಂದ ಸಾಗೋ ಲೇನ್ 'ಸತ್ತವರ ಬೀದಿ' (ಸ್ಟ್ರೀಟ್ ಆಫ್ ದಿ ಡೆಡ್) ಎಂದು ಗುರುತಿಸಲ್ಪಟ್ಟಿತು!

ಸತ್ತವರ ಬೀದಿಯಲ್ಲಿ ಸದ್ದು!

ಸಿಂಗಪುರದಲ್ಲಿ ಹೆಚ್ಚಿದ ಚೀನೀಯರಿಂದ ಈ ಸಾವಿನ ಮನೆಗಳು ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ಬಿಡುವಿಲ್ಲದೇ ಕೆಲಸ ನಿರ್ವಹಿಸಿ ಹೆಚ್ಚಿನ ಲಾಭ ಗಳಿಸಿದವು. ಮಾತ್ರವಲ್ಲ ಸಾವು ವ್ಯಾಪಾರದ ದೃಷ್ಟಿಯಿಂದ ಲಾಭದಾಯಕವಾಯಿತು. ಸಾವಿನ ನಂತರದ ಬದುಕಿನಲ್ಲಿ ನಂಬಿಕೆ ಇರುವ ಚೀನೀಯರಲ್ಲಿ ಮರಣದ ನಂತರ ಮುಂದಿನ ಬದುಕಿಗೆ ಅಗತ್ಯವಿರುವ ವಸ್ತುಗಳನ್ನು ಅಂತ್ಯಸಂಸ್ಕಾರದ ಸಮಯದಲ್ಲಿ ಸುಟ್ಟು ಮೇಲೆ ಕಳಿಸಲಾಗುತ್ತದೆ. ಅಂದರೆ ಕಾಗದದಿಂದ ತಯಾರಿಸಲಾದ ಮನೆ, ಪೀಠೋಪಕರಣ, ವಾಹನ ಇತ್ಯಾದಿ. ಮೃತ ಶರೀರವನ್ನು ಶವಪೆಟ್ಟಿಗೆಯಲ್ಲಿಟ್ಟು ಹೂಗಳಿಂದ ಅಲಂಕರಿಸಲಾಗುತ್ತದೆ. ಇದಲ್ಲದೇ ಮೃತರ ಮರಣಕ್ಕಾಗಿ ಶೋಕಿಸಲು 'ಅಳುವವರನ್ನು' ದುಡ್ಡು ಕೊಟ್ಟು ನೇಮಿಸಲಾಗುತ್ತದೆ. ಹಾಗೆಯೇ ಬೌದ್ಧ ಸನ್ಯಾಸಿಗಳಿಂದ ಮಂತ್ರ ಪಠಣವೂ ಸಾಮಾನ್ಯ. ಹಾಗಾಗಿ ಸಾವಿನ ಬೀದಿಯಲ್ಲಿ ಶೋಕದ ಜತೆ ಸದ್ದು ಹೆಚ್ಚಾಯಿತು. ಸಾಲವನ್ನಾದರೂ ಮಾಡಿ ಮೃತರನ್ನು ಸಂತೋಷಪಡಿಸುವ, ಅವರ ಮುಂದಿನ ಜೀವನಕ್ಕೆ ಅನುಕೂಲ ಮಾಡಿಕೊಡುವ ಚೀನೀಯರ ನಂಬಿಕೆಯಿಂದ ಈ ಸಾವಿನ ಮನೆಗಳ ಸುತ್ತ ಮರದ ಪೆಟ್ಟಿಗೆಗಳ, ಹೂವು, ಕಾಗದದ ಅಲಂಕಾರಿಕ ವಸ್ತು ಮಾರುವ ಸಣ್ಣ ಪುಟ್ಟ ಅಂಗಡಿಗಳು ಭರ್ಜರಿ ವ್ಯಾಪಾರ ನಡೆಸಿದವು. ಮೃತರ ಗೌರವಾರ್ಥ ಏರ್ಪಡಿಸುವ ಔತಣಕ್ಕೆ ಸಾಂಪ್ರದಾಯಿಕ ಖಾದ್ಯಗಳನ್ನು ತಯಾರಿಸುವ ಗಾಡಿಗಳು ಅಲ್ಲೇ ಬೀದಿಯ ಬದಿಯಲ್ಲಿ ಸಾಲುಗಟ್ಟಿ ನಿಂತವು. ಒಟ್ಟನಲ್ಲಿ ಸಾವಿನ ಮನೆಯ ಎದುರು ಬದುಕು ಕಟ್ಟುವ ಪ್ರಯತ್ನ!

ಆದರೆ 1961ರಲ್ಲಿ ಈ ಸಾವಿನ ಮನೆಗಳನ್ನು ಸರ್ಕಾರ ನಿಷೇಧಿಸಿತು. ಹಳೆಯ ಕಾಲದ ಆದರೆ ಇಂದಿಗೂ ಇಲ್ಲಿ ಅಂತ್ಯಕ್ರಿಯೆಗೆ ಸಂಬಂಧಿಸಿದ ವಸ್ತುಗಳನ್ನು ಮಾರುವ ಅನೇಕ ಅಂಗಡಿಗಳಿವೆ. ಕಿಕ್ಕಿರಿದ ಸಾಗೋಲೇನ್‌ನಲ್ಲಿ ಸಾಗುವಾಗ ಎಲ್ಲಿಂದಲೋ ಬಂದು, ಇಲ್ಲಿ ನೆಲೆಸಿ ಯಶಸ್ವಿಯಾಗಿರುವ ಯುವಜನರ ಆತ್ಮವಿಶ್ವಾಸ ಹೊತ್ತ ಮುಖಗಳ ಹಿಂದೆ, ಅಸಹಾಯಕರಾಗಿ ಸಾವಿನ ಮನೆಗಳಲ್ಲಿ ಬಿಡುಗಡೆಗಾಗಿ ಕಾಯುತ್ತಿದ್ದ ವೃದ್ಧರ ನೆರಳುಗಳೂ ಸುಳಿಯುತ್ತವೆ!

❖

ಮುನ್ನೋಟ 29-08-2021 ರಿಂದ 04-09-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಸ್ಥಳ ಬದಲಾವಣೆಯ ನಿರೀಕ್ಷೆಯಲ್ಲಿದ್ದ ಕೆಲವು ಸರ್ಕಾರಿ ನೌಕರರಿಗೆ ಸ್ಥಳ ಬದಲಾವಣೆಯ ಯೋಗ ಇರುತ್ತದೆ. ಗೃಹ ನಿರ್ಮಾಣ ಕಾರ್ಯ ಕ್ರಮೇಣ ವೇಗವನ್ನು ಪಡೆಯುತ್ತದೆ. ವಿದೇಶದಲ್ಲಿರುವ ಬಂಧುಗಳಿಂದ ಧನಸಹಾಯ ದೊರೆಯುತ್ತದೆ. ಕೋರ್ಟ್-ಕಚೇರಿ ಕೆಲಸಗಳಲ್ಲಿ ವಿಳಂಬ ಆದರೂ ನಿಮ್ಮದೇ ಮುನ್ನಡೆ ಇರುತ್ತದೆ. ಹಿತೈಷಿಗಳಿಂದ ನಿಮಗೆ ಉತ್ತಮ ಸಲಹೆ ದೊರೆಯುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ರಾಸಾಯನಿಕ ವಸ್ತುಗಳನ್ನು ತಯಾರಿಸಿ ರಫ್ತು ಮಾಡುವವರಿಗೆ ವ್ಯವಹಾರ ವಿಸ್ತರಣೆಯ ಜೊತೆ ಲಾಭವು ಇರುತ್ತದೆ. ಗೃಹ ನಿರ್ಮಾಣ ಕೆಲಸಗಳು ಶೀಘ್ರ ಗತಿಯಲ್ಲಿ ನಡೆಯುತ್ತವೆ. ಉದ್ದಿಮೆಯನ್ನು ನಡೆಸುವವರು ಕೆಲಸಗಾರರ ಮೇಲೆ ವಿನಾ ಕಾರಣಕ್ಕೆ ಕೋಪಗೊಂಡಲ್ಲಿ ಉತ್ಪಾದನೆಯ ಮೇಲೆ ಪರಿಣಾಮ ಬೀರಬಹುದು, ಎಚ್ಚರವಾಗಿರಿ. ಹೊಸ ಯೋಜನೆಯೊಂದನ್ನು ಕೈಗೆತ್ತಿಕೊಳ್ಳಲು ಉತ್ಸುಕರಾಗುವಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಅನಿರೀಕ್ಷಿತ ಮೂಲದಿಂದ ಆದಾಯ ಹರಿದು ಬರಲಿದೆ. ವಾಹನ ದುರಸ್ತಿ ಮಾಡುವವರಿಗೆ ಹೆಚ್ಚು ಕೆಲಸ ದೊರೆತು ಆದಾಯವೂ ಹೆಚ್ಚುತ್ತದೆ. ಮಕ್ಕಳ ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನವಹಿಸಿರಿ. ವ್ಯಾಪಾರ ವಿಸ್ತರಣೆಗೆ ಸೂಕ್ತವಾದ ಮಾಹಿತಿ ದೊರೆಯುತ್ತದೆ. ಸರ್ಕಾರಿ ಸಂಸ್ಥೆಗಳಿಗೆ ವಸ್ತುಗಳನ್ನು ಪೂರೈಕೆ ಮಾಡಿದವರಿಗೆ ಈಗ ಹಂತ ಹಂತವಾಗಿ ಹಣ ಬಿಡುಗಡೆಯಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಕೈಗೊಂಡ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಹಿರಿಯರ ಪ್ರಶಂಸೆಗೆ ಪಾತ್ರರಾಗುವಿರಿ. ತಾಮ್ರದ ವಸ್ತುಗಳನ್ನು ತಯಾರಿಸುವ ಕುಲುಮೆಗಾರರಿಗೆ ಅನಿರೀಕ್ಷಿತ ವ್ಯವಹಾರದ ಲಾಭವಿದೆ. ಕಲಾವಿದರಿಗೆ ಅವರ ಸಾಮರ್ಥ್ಯವನ್ನು ತೋರಿಸಲು ಅವಕಾಶವೊಂದು ಒದಗಿಬರುತ್ತದೆ. ಕುಟುಂಬದ ಜಟಿಲ ಸಮಸ್ಯೆಗಳನ್ನು ಜಾಣ್ಮೆಯಿಂದ ಬಗೆಹರಿಸಿಕೊಳ್ಳುವಿರಿ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಬೆಳೆದ ಫಸಲಿಗೆ ಉತ್ತಮ ಬೆಲೆ ದೊರೆತು ಕೃಷಿಕರಿಗೆ ಸಂತಸ ಆಗುತ್ತದೆ. ಕೃಷಿ ಕೆಲಸಗಳಲ್ಲಿ ಹೆಚ್ಚಿನ ಉತ್ಸಾಹವನ್ನು ತೋರುವಿರಿ. ಜ್ಞಾನಾರ್ಜನೆಗಾಗಿ ದೂರದೂರಿಗೆ ಹೋಗಬೇಕಾದೀತು. ಜ್ಞಾನದ ಜೊತೆ ಧನಾರ್ಜನೆಯೂ ಆಗುವ ಯೋಗವಿದೆ. ಕ್ರೀಡಾಪಟುಗಳಿಗೆ ಯಶಸ್ಸಿನ ಅಲೆಯ ಮೇಲೇರುವ ಅವಕಾಶಗಳಿವೆ. ರಾಜಕೀಯದಲ್ಲಿರುವವರಿಗೆ ಸೂಕ್ತ ಸ್ಥಾನಮಾನ ದೊರೆಯುವ ಸಾಧ್ಯತೆ ಇದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಗುತ್ತಿಗೆ ಕಾಮಗಾರಿಯನ್ನು ನಡೆಸುತ್ತಿರುವವರಿಗೆ ಹೊಸ ಗುತ್ತಿಗೆಗಳು ದೊರೆತು ಆನಂದವಾಗುತ್ತದೆ. ಕೆಲವೊಂದು ಆಸೆ ಆಕಾಂಕ್ಷೆಗಳು ಈಡೇರದೆ ಮನಸ್ಸಿಗೆ ಬೇಸರವಾಗುತ್ತದೆ. ಮಕ್ಕಳ ಆರೋಗ್ಯದಲ್ಲಿ ಸುಧಾರಣೆಯನ್ನು ಕಂಡರೂ ಅವರ ನಡವಳಿಕೆ ನಿಮಗೆ ಬೇಸರ ತರುತ್ತದೆ. ರೇಷ್ಮೆ ಬಟ್ಟೆಯ ನೇಕಾರರಿಗೆ ಹೊಸ ನೇಯ್ಗೆಯ ಆದೇಶಗಳು ದೊರೆತು ಮುಂಗಡ ಹಣವೂ ದೊರೆಯುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಜಾಹೀರಾತು ಕಂಪನಿಗಳಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಕೆಲವು ಉದ್ದಿಮೆದಾರರು ಜಾಹೀರಾತಿನ ಮೂಲಕ ತಮ್ಮ ವಹಿವಾಟನ್ನು ಹೆಚ್ಚಿಸಿಕೊಳ್ಳುವರು. ಶುಭಕಾರ್ಯಗಳಲ್ಲಿ ಭಾಗವಹಿಸುವ ಅವಕಾಶಗಳಿವೆ. ಆದಾಯವನ್ನು ಹೆಚ್ಚಿಸಿಕೊಳ್ಳಲು ಮಾರ್ಗೋಪಾಯಗಳಿಗಾಗಿ ಚಿಂತನೆ ಮಾಡುವಿರಿ. ಕೆಲವರಿಗೆ ವಾಹನ ಖರೀದಿ ಮಾಡುವ ಆಲೋಚನೆ ಇರುತ್ತದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ರಫ್ತು ಮಾರಾಟಗಾರರಿಗೆ ಉತ್ತಮ ವ್ಯವಹಾರ ನಡೆಯುವುದರಿಂದ ಬೇಡಿಕೆ ಹೆಚ್ಚಾಗಿ ಆದಾಯ ಹೆಚ್ಚುವುದು. ಇರುವ ಉದ್ಯೋಗದಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣುವ ಯೋಗವಿದೆ. ವ್ಯವಹಾರ ಕ್ಷೇತ್ರವನ್ನು ವಿಸ್ತರಿಸಲು ಸ್ನೇಹಿತರ ಸಹಾಯ ಪಡೆಯುವಿರಿ. ಆರ್ಥಿಕತೆಯು ಸ್ಥಿರತೆಯತ್ತ ಸಾಗುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಕೆಲವು ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯಧನ ಬರುವ ಸಾಧ್ಯತೆ ಇದೆ. ಹೊಸ ಕೆಲಸಗಳಿಗೆ ಪ್ರಯತ್ನ ಮಾಡುವವರು ತಮ್ಮ ಸ್ನೇಹಿತರ ವಲಯದಲ್ಲಿ ವಿಚಾರಿಸುವುದು ಒಳ್ಳೆಯದು. ಯಂತ್ರೋಪಕರಣಗಳ ಬಿಡಿಭಾಗಗಳನ್ನು ತಯಾರಿಸಿ ಮಾರುವವರಿಗೆ ವ್ಯವಹಾರ ವೃದ್ಧಿಸುತ್ತದೆ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇದ್ದೇ ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಔಷಧಿ ತಯಾರಿಕಾ ಕಂಪನಿಗಳಿಗೆ ವಿಶೇಷ ಬೇಡಿಕೆಯಿಂದಾಗಿ ಉತ್ತಮ ಲಾಭ ಬರುತ್ತದೆ. ಸ್ವಂತ ಉದ್ದಿಮೆಯನ್ನು ನಡೆಸುತ್ತಿರುವವರು ಕಾಲಗತಿಯಲ್ಲಿ ಚೇತರಿಕೆಯನ್ನು ಕಾಣಬಹುದು. ಹಣಕಾಸಿನ ವ್ಯವಹಾರದಲ್ಲಿ ಬರದೇ ನಿಂತಿದ್ದ ಹಣ ಈಗ ಬರಲು ಆರಂಭಿಸುತ್ತದೆ. ಮನೆ ನಿರ್ಮಾಣ ಮಾಡುವವರ ವ್ಯವಹಾರದಲ್ಲಿ ಚೇತರಿಕೆಯನ್ನು ಕಾಣಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಉದ್ದಿಮೆಯನ್ನು ವಿಸ್ತರಿಸಲು ಸಾಕಷ್ಟು ತಯಾರಿ ಮಾಡುವಿರಿ. ನಿಮ್ಮ ಕಾರ್ಯಕ್ಷೇತ್ರವನ್ನು ವಿದೇಶಗಳಲ್ಲಿ ವಿಸ್ತರಿಸಲು ಅನುಮತಿ ದೊರೆಯುತ್ತದೆ. ರೈತಾಪಿ ವರ್ಗದವರಿಗೆ ಸಹಾಯಧನ ದೊರೆಯುವ ಸಾಧ್ಯತೆಗಳಿವೆ. ವಾಹನ ಖರೀದಿಯ ಸಾಧ್ಯತೆ ಇದೆ. ಸಮಯವರಿತು ಕೆಲಸ ಕಾರ್ಯಗಳನ್ನು ಮಾಡುವುದರಿಂದ ವೃತ್ತಿಯಲ್ಲಿ ಪ್ರಗತಿ ಇರುತ್ತದೆ. ಹಣದ ಹರಿವು ಸಾಮಾನ್ಯವಾಗಿರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಪ್ರಭಾವಿ ವ್ಯಕ್ತಿಗಳ ಜೊತೆ ಓಡಾಡಿಕೊಂಡು ನಿಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನ ಮಾಡುವಿರಿ. ಅನಿರೀಕ್ಷಿತವಾಗಿ ಕೆಲವು ಅಧಿಕಾರಿಗಳಿಗೆ ಉನ್ನತ ಹುದ್ದೆ ಸಿಗುವ ಸಾಧ್ಯತೆ ಇದೆ. ಮಕ್ಕಳಿಗಾಗಿ ಹಣ ಹೊಂದಿಸಬೇಕಾದ ಅನಿವಾರ್ಯ ಎದುರಾಗಬಹುದು. ಧನಾದಾಯದ ಮೂಲಗಳನ್ನು ಹುಡುಕಿ ಆದಾಯ ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುವಿರಿ.

ಪದಬಂಧ 2702



ಮೇಲಿನಿಂದ ಕೆಳಕ್ಕೆ

1. ವಿಜಾತಿ ರಾಜಕಾರಣಿಗಳು ನಡೆಸುವ ಸರ್ಕಾರ 3
2. ಕೊನೆಯಲ್ಲಿ ಕಸವಾಗುವ ದಾನವ 3
3. ಮಂಗಳವನ್ನುಂಟು ಮಾಡುವ ರಾಗ 3
4. ಆಪ್ತರನ್ನು ಕಳೆದುಕೊಂಡ ಅನಾಥ 3
6. ಮರದೊಳಗೆ ಮೊಸಳೆ 3
8. ಸಮಾಜದಲ್ಲಿ ಹಾದಿ ತಪ್ಪಿದ ವ್ಯಭಿಚಾರ ಪದ್ಧತಿ 3
9. ಬಲಿಯನ್ನು ಪಾತಾಳಕ್ಕೆ ತುಳಿದ ವಿಷ್ಣು ಅವತಾರ 3
10. ಹೂಗಿಡಬಳ್ಳಿಗಳ ತೋಟ 3
11. ಕನ್ನಡಿಗ ಈ ರಾಮನ ಭಂಟ 3
12. ವಿರಳವಾದ ಕರ್ಮ 3
14. ಅರುಣಾಚಲದಲ್ಲಿ ನೆಲಸಿದ ದಾರ್ಶನಿಕ 3
15. ವಿಜಯನಗರದಲ್ಲಿ ನಾಣ್ಯವಾದ ಸೂಕರ 3
17. ಕಳ್ಳತನದಿಂದ ಒಳನುಗ್ಗು 3
18. ಅಡವಿಯಲ್ಲಿ ಎಡವಿ ನಿಧಾನಗತಿ 3
19. ವನದಲ್ಲಿ ಮಾಡುವ ಅಗ್ನಿ ಕಾರ್ಯ 3
20. ಸೂರ್ಯಚಂದ್ರರು ಗ್ರಸ್ತರಾದಾಗ ಸಿಗುವ ಹಣ 3
21. ಹಾರದ ಅಂಗಿ ಧರಿಸಿರುವ ಕಾವೇರಿಯ ಅಣೆಕಟ್ಟು 3
22. ಮಾನ ಮರ್ಯಾದೆಗಳಿಂದ ತುಂಬಿದ ಗೌರವ ಸತ್ಕಾರ 3
23. ಒಳ್ಳೆಯ ಗೆಲುವು 3
25. ಕಷ್ಟಕರ 3

ಎಡದಿಂದ ಬಲಕ್ಕೆ

1. ಸವಿಯ ಜೊತೆ ಸ್ವರ ದೀರ್ಘವಾಗಿ ಸೇರಿದೆ 4
3. ಕೈಯಲ್ಲಿ ಸೇರಿಹೋದದ್ದು 4
5. ಆಶ್ರಮದಲ್ಲಿ ಕಷ್ಟದ ಕೆಲಸ 2
7. ಕರೆಗೆ ಓಗೊಡುವ ನೆರವಿನ ನುಡಿ 5
10. ಹಕಾರ ರಹಿತ ವ್ಯಾಘ್ರ ಶಬ್ದದ ಧ್ವನಿ 2
11. ನಾಶಪಡಿಸಿ ಒಳ್ಳೆಯದನ್ನು ಮಾಡುವ ಶಿವನ ದ್ವಿನಾ 5
13. ನಾಡಿಯುಳ್ಳ ಮನುಷ್ಯನ ಎರಡು ಅವತಾರ 5
16. ಜಾತಿ, ಧರ್ಮಗಳನ್ನು ಮೀರಿ ವಿಶ್ವಪಥದಲ್ಲಿ ಸಾಗಬೇಕಾದ ಮನುಷ್ಯ ಕುಲ, ರಾಷ್ಟ್ರಕವಿಯ ಸಂದೇಶ ನೆನಪಿಗೆ ಬರುತ್ತದೆ 5
19. ಸಮಾಜದ ಕೆಲಸಕ್ಕೆ ದುಡ್ಡು ಸೇರಿಸುವ ಕಾರ್ಯ 5
21. ವೈಭವದಿಂದ ಮೆರೆದ ಹಂಪಿ ಇಂದು ಹೀಗೆ 2
22. ಇನ್ನೂ ಕಾಣಬೇಕೆನಿಸುವ, ಮನಸ್ಸಿಗೆ ಹಿತವೆನಿಸುವ ಸ್ವಪ್ನ 5
24. ಹಿಂದು ಮುಂದಾದ ರವಿಕೆ ಬಟ್ಟೆ 2
26. ಬೆಟ್ಟ ಕಾಡು-ನಮ್ಮ ಪ್ರಾಕೃತಿಕ ಸಿರಿ 4
27. ಕಾಲದೇವನಿಗೆ ಮೀಸಲಾದ ಜಾಗ 4

ಪದಬಂಧ ಉತ್ತರ -2701

ಮೇಲಿಂದ ಕೆಳಕ್ಕೆ

1. ಜನಪರ 2.ತವರಮನೆ 3.ನಾರದಪುರಾಣ 4.ದಯಾವತಿ 7. ಮಹಾವರ 9.ಮನ 11.ಮಧುರಕವನ 12.ಗುಡಿ 13.ರುಕ್ಮಿಣಿ 14.ನಾಕನರಕ 16. ಮನಸಾರೆ 17.ಕರಗ

ಎಡದಿಂದ ಬಲಕ್ಕೆ

1.ಜಗದ್ವಿಖ್ಯಾತ 3.ನಾಮಪದ 5.ಪರಮಹರ 6.ದಕ್ಷದೇವ 7.ಮರ 8.ಮತಾಪು 9.ಮನೆ 10.ವರಾಗಮನ 12.ಗುಣವಂತರು 14.ನಾಡಿ 15.ರಜಕ 16.ಮಣಿ 17.ಕರಣಿಕ 18.ನವಿರುಜನ 19.ಗತಿಹೀನ 20.ಕಮಲಧರೆ

ಭರತನ ಮಕ್ಕಳಿಗೆ ನಾಟ್ಯಶಾಸ್ತ್ರ...

8ನೇ ಪುಟದಿಂದ...

'ನೋಡ್ರಪ್ಪಾss ಮಂದಿಗೋಳss ಮುಪ್ಪಿನಾಗ ಹುಷಾರು ಇರ್ರಿ, ನನ್ನಂಗ ನೀವೂ ಆಗೋದು ಬ್ಯಾಡ, ರೂಪಾಯಿ ಮುರಿಸಿ ಮಕ್ಕಳಿಗೆ ಕೊಟ್ಟರೂ ನಾಕಾಣಿ ನೀವಿಟ್ಟುಕೊಳ್ಳೋದು ಮರಿಬ್ಯಾಡರಿ, ಇದು ಮುಪ್ಪಿನ ಗುಟ್ಟು ಅದ' ಅಂತ ಹೇಳೋದದ ಅಂತ ಅಲುವತ್ತುಕೊಂತ ಕುಂತಾನ ಪಾಪ.

ನೀ ಆಗೋದುಲ್ಲ ಅನುಬಾರದು ಏಳು ಏಳು ಅಂತ ಆತ್ಮವು ದೇಹಕ್ಕ ಒತ್ತಾಯದಲೇ ಒಪ್ಪಿಸತದ. ಆಗ ಈ ನಟನ ದೇಹದೊಳಗ ಮುದುಕ ಲಿಯರ್‌ನ ಆತ್ಮ ಒಳಹೊಕ್ಕು ನಟನ ಕಣ್ಣಿಂದ ಪ್ರೇಕ್ಷಕರನ್ನ ನೋಡಕ ಶುರುವಾಗ್ತದ, ಬಾಯಿ ಮಾತಾಡಲಿಕ್ಕ ಶುರು ಮಾಡ್ತದ, ನಟನ ಎದಿ ಲಿಯರ್‌ನ ಎದಿಯಾಗಿ ಉಬ್ಬತದ, ಕೈ ಕಾಲುಗಳು ಅವನುವಾಗಿ ಉಳಿಯೋದಿಲ್ಲ. ಅವನ ಒಳಹೊಕ್ಕ ಲಿಯರ್‌ನ ಆತ್ಮ ರಂಗದ ತುಂಬ ಓಡ್ಯಾಡಿ, ಗೋಳ್ಯಾಡಿ, ಬಡಬಡಿಸಿ, ಬೀಗಿ ಅಂತೂ ತನ್ನ ಕತಿ ಮುಗಿಸತದ. ಕತಿ ಮುಗೀಯೂತ್ಲೆ ವಿಕ್ರಮರಾಯನ ಬೇತಾಳ ಮರ ಕಂಡ ಕೂಡಲೇ ಸೊಯಿಂಕ್ ಅಂತ ಮ್ಯಾಲೋಗಿ ಮರದಾಗ ನೇತಾಡಿದಂಗ, ತೊಟ್ಟ ಬಟ್ಟಿ ಕಳಚಿದಾಂಗ, ಲಿಯರ್‌ನ ಆತ್ಮ ನಟನ ದೇಹ ಕಳಚಿ ಹೊಂಟ್ ಹೋಗ್ತದ. ಹೋಗಾಗ ಅವನೌನ ಒಂದು ಮಾತು ಕೂಡ ಹೇಳೋದಿಲ್ಲ. ಆದರೂ ಆಟ ಮುಗುದಾದ ಮ್ಯಾಲೆ ನೋಡಾಕ ಬಂದ ಮಂದಿ, 'ಭಲೆ... ಭಲೆ ಶಹಬ್ಬಾಷ್' ಅಂತ ಮೆಚ್ಚುಗೆಯಿಂದ ಹೊಗಳಿದಾಗ ನಟನ ಎದಿ ಉಬ್ಬುತದ, ಆಮೇಲೆ ರಾತ್ರಿ 'ಹೊಗಳಿಕೀ ಮುಳ್ಳು ಚುಚ್ಚಿ' ಅವನ ನಿದ್ರಿ ಕೆಡ್ತದ.

ತೊಟ್ಟ ವೇಷದ ಉಮ್ಮಳ, ಉದ್ವೇಗ, ಉನ್ಮಾದಕ್ಕೊಳಗಾದ ನಟನ ದೇಹ ಹಿಂಡಿದ ಹಿಪ್ಪೆಯಾಂಗ, ಪುಂಡಿ ಸೊಪ್ಪಿನಾಂಗ ಆಗಿರ್ತದ, ನರಳತಿರತದ. ಇದನ್ನ ನೋಡಲಾರದ ಆತ್ಮ ರಮಿಸಿಗೋಂತ ದೇಹಕ್ಕ 'ಹೆಂಡದಂಗಡಿಗೆ ಹೋಗೋಣು ನಡಿ ನೋವು ಕಮ್ಮಿ ಆಗತದ' ಅಂತ ಕೈಹಿಡುಕೊಂಡು ನಡೀತದ.

ಇಲ್ಲಿ ನಾಟ್ಯಶಾಸ್ತ್ರದ ಹಿನ್ನೆಲೆಯಲ್ಲಿ ಮುದುಕ ಲಿಯರ್‌ನ ಕತಿ ನೋಡ್ಹೋದಾದರ, ಅವ ಇದ್ದದ್ದನ್ನೆಲ್ಲ ಮಕ್ಕಳಿಗೆ ಹಂಚಿಕೊಟ್ಟಾಗ ಅವನಲ್ಲಿ ಹಮ್ಮಿತ್ತು, ಬಿಮ್ಮಿತ್ತು. ಜೊತೆಗೆ ಹೆಡ್ಡತನವೂ ಇತ್ತು. ತೊಗೊಂಡ ತಪ್ಪು ನಿರ್ಧಾರಕ್ಕ ದೈನ್ಯವು ಮನ ಕರಗುವಂತೆ ಇಲ್ಲಿ ಹರಿದಾಡಿತ್ತು. ಮಕ್ಕಳೆದುರು ಅವ ಮಂಡಿ ಊರಿ ಕೂತಾಗ, ಅವನ ಪರಗಟ್ಟಿದ ಪಾತ್ರಗಳು ವಿಷಾದದಲ್ಲಿ ಲೊಚಗುಡುತಾವ. ಮುಂದ ಅವನದ್ದು 'ಬುರುಗಾಗಿ ಕರಗಿದ ಬದುಕು.' ಹಮ್ಮಿನ ರಾಜನಾಗಿದ್ದಾಗ ಕಂಡರಿಯದ ಜನರನ್ನ, ಕಾಣದ ತಾಣಗಳನ್ನ ಕಾಣತಾನ, ಮಕ್ಕಳು ತೋರದ ಪ್ರೀತಿಯನ್ನ ಸೂರಿಲ್ಲದ ಹೆಸರಿಲ್ಲದ ಮುಖಗಳಲ್ಲಿ ಕಾಣುತಾನ. ಮುಪ್ಪಿನಲ್ಲಿ ಒದಗಿದ ಈ ಬದುಕಿಗೆ ಥೂತ್ಕರಿಸುತಾನ, ವ್ಯಾಕರಿಸುತಾನ.

ಮೊದಲು ಆವೇಗ, ಉದ್ವೇಗದಿಂದ ಶುರುವಾಗಿ, ಆಮ್ಯಾಲ ಅದು ಉನ್ಮಾದಕ್ಕ ತಿರುಗಿ, ಎತ್ತರೆತ್ತರದ ಗುಡ್ಡದ ಮ್ಯಾಲ ನಿಂತು, ಮೇಘಗಳ ಆರ್ಭಟಕ್ಕ ಎದೆ ತೆರೆದು, ತಲೆ ಕೊಡ ಕೊಡವಿ, ಸುಡು ಸುಡು ನನ್ನ ನೆತ್ತಿಯನ್ನು ಎಂದು ಗಹಗಹಿಸಿದನೋ, ಗೋಳಾಡಿದನೋ, ತೊದಲಿದನೋ ಹೇಶರಿಸಿದನೋ ಒಂದೂ ಗೊತ್ತಾಗುವುದಿಲ್ಲ. ಎತ್ತರದ ಬಂಡೆಯ ಮ್ಯಾಲೆ ಉನ್ಮಾದದಲ್ಲಿ ಘೀಳಿಡುವ ಇವನ ಆರ್ಭಟಕ್ಕ ಮೇಘಗಳೂ ಕರಗಿ, ಕನಿಕರಿಸಿ ಸ್ಮೃತಿದಪ್ಪಿದ ಇವನ ಮ್ಯಾಲೆ ಧೋ...ಧೋ... ಎಂದು ಮಳಿ ಸುರುಸತಾವ.

ಹುಲುಗಪ್ಪ ಕಟ್ಟೀಮನಿ ಅವರು ನಿರ್ದೇಶಿಸಿರುವ 'ಜತೆಗಿರುವನು ಚಂದಿರ' ನಾಟಕದ ದೃಶ್ಯ

ಇವನ ಕತಿಯೊಳಗ ಪ್ರೇಕ್ಷಕನು 'ಅಯ್ಯೋ ಪಾಪ' ಅಂದಾಗಲೇ ಕರುಣ ರಸದ ಹಿನ್ನೆಲೆಯಲ್ಲಿ ವ್ಯಭಿಚಾರಿ ಭಾವಗಳು, ಸಂಚಾರಿ ಭಾವಗಳು ಎಗ್ಗಿಲ್ಲದೆ ಓಡಾಡಿರುತಾವ. ಇವನ ಈ ದುರ್ಗತಿಯಲ್ಲಿ ಗರ್ವ, ಹತಾಷೆ, ಮುಜುಗರ, ಕ್ರೋಧ, ಹೊಯ್ದಾಟ, ಅವಮಾನ, ಭ್ರಮೆ, ಉದ್ವೇಗ, ಉನ್ಮಾದ, ಶೋಕಗಳು ಭಾಗಿಯಾದರೆ, ಅವನ ಮಕ್ಕಳು ಮತ್ತು ಅವರನ್ನು ಸುತ್ತುವರಿದ ಪಾತ್ರಗಳಲ್ಲಿ ಸೋಗು, ಆಸೆ, ಅಸೂಯೆ, ಈರ್ಷೆ, ವ್ಯಭಿಚಾರ, ಸಂಚು, ದ್ವೇಷ, ಮಸಲತ್ತು, ಕತ್ತಿಮಸೆಯುವ ವ್ಯಭಿಚಾರಿ ಭಾವಗಳಿಂದ ವಿನ್ಯಾಸಗೊಂಡಾವ. ಇಲ್ಲಿ ಮಸಲತ್ತು ಮಾಡೋದಕೂ ಕತ್ತೀ ಮಸೆಯೋದಕೂ ವ್ಯತ್ಯಾಸ ಅದ. ಇವು ವ್ಯಭಿಚಾರಿ ಭಾವದೊಳಗ ಮೈದಾಳ್ತವ. ಉನ್ನತವಾದದ್ದನ್ನ ನೋಡಲು, ಸಹಿಸಲು ಅಸಾಧ್ಯವಾಗಿ, ಈರ್ಷೆಯ ಕಾವು ಹೆಚ್ಚಾಗಿ, ಉರಿದುರಿದು, ಆತ್ಮಶಮನಕ್ಕಾಗಿ ಹಪಹಪಿಸಿ ಉನ್ನತವಾದದ್ದರ ಅವನತಿಗಾಗಿ ತಂತ್ರ-ಕುತಂತ್ರಗಳಿಂದ ಸಂಚು ರೂಪಿಸಿ, ಅಳೆದುss,ಸುರಿದುss ಮತ್ತೆ ಅಳೆದು, ಮತ್ತೆ ಸುರಿದು ತೂssಗಿ, ತೂssಗಿ ಆಮ್ಯಾಲ ನಿರ್ಧರಿತ ಸಂಚಿನ ಮುಂದಿನ ಕ್ರಿಯೆಯಾಗಿ ಮನುಷ್ಯ ಕತ್ತಿಮಸೆಯಲು ತೊಡಗುತ್ತಾನೆ. ಹೀಂಗ ಸಣ್ಣ ಸಣ್ಣ ವ್ಯತ್ಯಾಸ ಇರತಾವ. ಉದ್ವೇಗನಾ ಬ್ಯಾರೆ, ಉನ್ಮಾದನಾ ಬ್ಯಾರೆ ಇರ್ತದ. ಈ ಒಂಬತ್ತು ರಸಗಳು ಒಂದಕ್ಕೊಂದು ಅಂತರವಾಗಿ ನಿರ್ಮಿಸಿದ, ಬೃಹದಾಕಾರದ ಬಂಗಲೆಗಳೋಪಾದಿಯಲ್ಲಿ ಒಂಟೊಂಟಿಯಾಗಿ ನಿಂತಿರತಾವ. ಒಂದರ ವಿನ್ಯಾಸದಂತೆ ಇನ್ನೊಂದಿಲ್ಲ.

ಶೃಂಗಾರದ ಬಂಗಲೆಯ ಮೆಟ್ಟಿಲ ಮ್ಯಾಲೆ ರತಿ ಕೂತಿರತಾಳ, ಹಾಸ್ಯದ ಬಂಗಲೆಯ ಮೆಟ್ಟಿಲಮ್ಯಾಲೆ ಹಾಸ ಕುಣಿತಾ ಇರತದ, ಕರುಣ ರಸದ ಮೆಟ್ಟಿಲ ಮ್ಯಾಲೆ ಶೋಕ ಕಣ್ಣೀರಾಕ್ತ ಇರತದ, ವೀರದ ಬಂಗಲೆಯ ಮುಂದೆ ಉತ್ಸಾಹವು ಅದರ ಸ್ಥಾಯಿ ಭಾವವಾಗಿ, ಭಿಡೆ ಇಲ್ಲದೆ ತಲೆ ಎತ್ತಿ ಜಿಗಿದಾಡತ ಇರತದ, ಇನ್ನು ದೂರದಿಂದಲೇ ಗೊತ್ತಾಗತದ ಇದು ರೌದ್ರದ ಹೆಬ್ಬಾಗಿಲು ಅಂತ. ಅಲ್ಲಿ ಕ್ರೋಧ ಇಣುಕಿಹಾಕತದ, ಭಯಾನಕದ ಬಂಗಲೆಯೊಳಗ, ನರಿಗಳು ಊಳಿಟ್ಟಾಂಗ, ಯಾರೋ ನರಳಿದಾಂಗ ಭಾಸವಾಗತದ, ಇನ್ನು ಬೀಭತ್ಸದ ಬಂಗಲೆ ಹತ್ತರ ಹೋದವರು ಅದರ ಮೆಟ್ಟಿಲ ಮ್ಯಾಲೆ ಕೂತ ಅಸಹ್ಯನ ನೋಡಲಾರದ ಕಣ್ಣುಮುಚ್ಚಿ ಮುಖ ಸಿಂಡರಿಸಿ ವ್ಯಾಕರಿಸತಾರ, ಹಾಂಗ ಅದ್ಭುತದ ಬಂಗಲೆಗೆ ಬಂದಾಗ ಬೆರಗಿನಿಂದ, ಸೋಜಿಗದಿಂದ ಕಣ್ಣು ಬಾಯಿ ಅರಳತಾವ, ಹುಬ್ಬೇರತದ.

ಕೊನೇದಾಗಿ ಶಾಂತದ ವಿನ್ಯಾಸವೇ ಬೇರೆ. ಈ ಎಲ್ಲ ಬಂಗಲೆಗಳ ಮುಂದೆ ಹಾಯ್ದು ಬಂದದ್ದೆಲ್ಲ ಸುಳ್ಳೆನಿಸಿ ನಿರ್ಭಾವದಿಂದ ನಿಂತ ಗೊಮ್ಮಟ ನೆನಪಾಗುತಾನ, ತಾಯಿ ಎದೆ ಹಾಲು ಕುಡಿದು ತೊಟ್ಟಿಲಲ್ಲಿ ಮಲಗಿದ ಮಗು ನೆನಪಾಗತದ. ಇವನ್ನೆಲ್ಲ ನನ್ನ ಈ ನಿರಂತರ ಮೂವತ್ತೈದು ವರ್ಷದ ರಂಗದ ಮ್ಯಾಲಿನ ಅನುಭವದೊಂದಿಗೆ ಕಲಬುರಗಿ, ಶಿವಮೊಗ್ಗ ರಂಗಾಯಣದ ಯುವ ಕಲಾವಿದರ ಜೋಡಿ ಹಂಚಿಕೊಂಡೀನಿ. ನನಗ ಅನುಸತದ ಹುಡುಗರದೇನೂ ತಪ್ಪಿಲ್ಲ. ತಪ್ಪೆಲ್ಲ ನಮ್ಮದದ. ಹುಡುಗರಿಗೆ ಅವರ ಭಾವಕೋಶದ ಸ್ವಿಚ್ ಎಲ್ಲದ ಅಂತ ಗೊತ್ತು ಇರೋದಿಲ್ಲ. ಕತ್ತಲ ಕ್ವಾಣ್ಯಾಗ ತಡಕ್ಯಾಡಿಕೋಂತ ಕೈಹಿಡಿದು ಕರಕೊಂಡುಹೋಗಿ ತೋರಿಸಿಕೊಡಬೇಕು. ಪ್ರತೀ ಒಬ್ಬಾವಗ ಈ ಸ್ವಿಚ್‌ಗಳು ಇದ್ದಾ ಇರ್ತಾವ. ಒಂದೊಂದು ರಸಕ್ಕೂ ಒಂದೊಂದರಂಗ ಇರ್ತಾವ. ಅವು ಆನ್ ಆಗಿಬಿಟ್ಟರ ಈ ಸಂಚಾರಿ, ವ್ಯಭಿಚಾರಿ ಭಾವಗಳು ಎಗ್ಗಿಲ್ಲದ ಹರಿದಾಡತಾವ.

'ಟಿಪ್ಪುವಿನ ಕನಸುಗಳು' ನಾಟಕದಲ್ಲಿ ಟಿಪ್ಪು ಪಾತ್ರಧಾರಿಯಾಗಿ ಹುಲುಗಪ್ಪ ಕಟ್ಟೀಮನಿ

❖

ಭೀಮಾತೀರದ 'ಬೆರಗು'

ನಿಂಗಪ್ಪ ಮುದೇನೂರು

ಕನ್ನಡನಾಡಿನ ಎಷ್ಟೊಂದು ನದಿಗಳಿಗೆ ಪಾವಿತ್ರ್ಯದ ಚಹರೆಯಿದೆ. ಕ್ರಿ.ಶ. 9ನೇ ಶತಮಾನದ ಕವಿ ಶ್ರೀವಿಜಯ ನಾಡಿನ ಕುರಿತು ಅಭಿಮಾನದಿಂದ ಮಾತನಾಡುತ್ತಾ 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್' ಎಂದಿದ್ದು ನಮ್ಮ ಬಹುತೇಕ ಕವಿಗಳಿಗೆ, ಸಿನಿಮಾ ಸಾಹಿತಿಗಳಿಗೆ ವರವಾಯಿತು. ತಮಿಳು ಸಂಗಂ ಸಾಹಿತ್ಯ, ಕನ್ನಡದ ಕಾವ್ಯ ಜಗತ್ತು ಕಾವೇರಿಯನ್ನು ಸಾಂಸ್ಕೃತಿಕ ಮನೆಮಗಳಂತೆ ಬಿಂಬಿಸಿದವು.


ರಮೇಶ ಕತ್ತಿ

ಇತ್ತ ತುಂಗಭದ್ರೆಯೂ ಅಷ್ಟೇ. 'ಗಂಗಾ ಸ್ನಾನ ತುಂಗಾ ಪಾನ' ಎನ್ನುವ ಗಾದೆಯ ಬದುಕು ಮೇಳೈಸಿ ಹಂಪೆಯ ಹರಿಹರನಿಂದ, ದಾಸರ ಸಂಕೀರ್ತನೆಗಳಿಂದ ಹಲವು ಮಹಾತ್ಮೆಗಳಿಗೆ ಒಳಗಾಯಿತು. ಅಷ್ಟೇ ಏಕೆ, ತುಂಗಭದ್ರೆಯ ಕುರಿತು ಹಲವು ಕಾವ್ಯ, ಕಥೆ, ಕಾದಂಬರಿಗಳೇ ರಚನೆಗೊಂಡವು. ನಮ್ಮ ಕೃಷ್ಣೆ, ಗೋದಾವರಿಯರೂ ಕನ್ನಡ, ತೆಲುಗು ಬಾಂಧವ್ಯದಲ್ಲಿ ನಳನಳಿಸಿ ನಮ್ಮ ಬುರ್ರಕಥಾ ಈರಮ್ಮನೊಡಲ ಕಥನ ಕಾವ್ಯಗಳಲ್ಲಿ ಪ್ರಸ್ತಾಪಗೊಂಡು ಜೀವಸೆಲೆಯಾಗಿ ಹರಿದು ಬಂದರು. ಇಂದಿಗೂ ಕಾವೇರಿ, ತುಂಗಭದ್ರೆ, ನೇತ್ರಾವತಿ, ಕೃಷ್ಣೆ, ಗೋದಾವರಿಯರು, ಗಂಗೆ, ಯಮುನೆ, ಸರಸ್ವತಿಯರು ಹರಸುತ್ತಲೇ ಬಂದಿದ್ದಾರೆ ನಾಡವರನ್ನು, ಈ ದೇಸಿಗರನ್ನು. ಇದು ಭೌತಿಕ ಚಹರೆ ಅಷ್ಟೇ ಅಲ್ಲ, ಸಾಹಿತ್ಯ ಸಂಸ್ಕೃತಿಗಳನ್ನು ಸಂಗಮಿಸುವ ಪರಿಯೂ ಹೌದು. ನಾಗರಿಕತೆಯ ಬದುಕಾಗಲೀ ಮನುಷ್ಯ ಪಾತಳಿಯ ಜೀವಸಂಕುಲವಾಗಲೀ ಬದುಕಿ ಬಾಳಿದ್ದು, ಕಾಲಸಂಘರ್ಷಗಳ ನಡುವೆ ಸಮತೆಯ ಹಾಡ ಕಟ್ಟಿದ್ದು ಇಲ್ಲಿಯೇ.

> ಭೀಮಾ ತೀರದ ಕಡಣಿ ಎಂಬ ಹಳ್ಳಿ ಸಾಹಿತ್ಯದಲ್ಲಿ ಉಂಟು ಮಾಡಿರುವ ಸಂಚಲನ ಬಲು ದೊಡ್ಡದು. ಈ ಪುಟ್ಟ ಊರಿನಲ್ಲಿ ಸೋಮವಾರ (ಆಗಸ್ಟ್ 30) ನಡೆಯಲಿರುವ ಕಾರ್ಯಕ್ರಮದಲ್ಲಿ 28 ಕೃತಿಗಳು ಬಿಡುಗಡೆಗೊಳ್ಳಲಿವೆ. ಸಾಹಿತ್ಯ ಲೋಕ ಬೆರಗಿನಿಂದ ಈ ಊರಿನತ್ತ ಗಮನಹರಿಸುತ್ತಿದೆ

ಅದೇ ಕನ್ನಡ ನಾಡಿನಲ್ಲಿಯೇ ಬದುಕಿ, ಕನ್ನಡ-ಮರಾಠಿ ಬಾಂಧವ್ಯ ಮೂಡಿಸಿರುವ ಗಡಿನಾಡಿನ ಈ ಚೆಲುವೆ ಭೀಮೆಯ ಒಡಲಿನ ಕುರಿತು ಸಂತಸದ ಹಾಡುಗಳಿಗಿಂತ ದುಃಖ ದುರಂತದ ಕಥೆಗಳೇ ಮೂಡಿನಿಂತಿವೆ! ಭೀಮಾ ತೀರದಲ್ಲಿ, ಭೀಮಾ ತೀರದ ಹಂತಕರು ಎಂದೆಲ್ಲ ಮನುಷ್ಯ ಬಾಳಿನ ಪ್ರೇಮವನ್ನೇ 'ರಕ್ಕಸ' ರೂಪದಲ್ಲಿ ಚಿತ್ರಿಸಿದ ಬರವಣಿಗೆಗಳು ಬಂದದ್ದು, ಸಿನಿಮಾಗಳು ಬಂದದ್ದು ನಾಡಿನ ದುರ್ದೈವವೆಂದೇ ಭಾವಿಸಬಹುದು. ಬಡತನ, ಮನುಷ್ಯಸಹಜ ದೌರ್ಬಲ್ಯ, ಸಾಮಾಜಿಕ, ಸಾಮುದಾಯಿಕ ಸಂಗತಿಗಳಿಗೆ ಫ್ಯೂಡಲ್ ಮನೋಭಾವ ಬೆರೆತು ಒಂದೆರಡು ತಲೆಮಾರುಗಳನ್ನೇ ಪಾಪದ ಕೂಪಕ್ಕೆ ತಳ್ಳುವ ಕಾರ್ಯಗಳು ಆತ್ಯಂತಿಕವಾಗಿ ನಡೆದ ಕಾಲಮಾನವೂ ನಮ್ಮ ಕಣ್ಣಮುಂದೆ ಹಾದು ಹೋಯಿತು.

ಸಾಹಿತ್ಯದ ಉಪಾಸಕರಾದ ಮಧುರಚೆನ್ನರು ಭೀಮಾ ತೀರದಲ್ಲೇ ಬಾಳಿದ್ದರು. ಇದೇ ನೆಲದಲ್ಲಿ ಜನಿಸಿದ ಸಿಂಪಿ ಲಿಂಗಣ್ಣ, ಗಲಗಲಿ, ರಾನಡೆ, ಜನಪದ ಗೀಗೀಪದದ ಗಾರುಡಿಗ, ಆಶುಕವಿ ಕಡಣಿ ಕಲ್ಲಪ್ಪ, ಲಾವಣಿಕಾರ ಖಾಜಾಬಾಯಿ ಅವರಂತಹವರು ನಾಡಿನ ಸಂಸ್ಕೃತಿಯನ್ನು ಬೆಳಗಿದ್ದು ಕಡಿಮೆ ಸಾಧನೆಯೇ? ಇಲ್ಲಿನ ಸಾಹಿತ್ಯದ ಸಾಧಕರಾದ ಶಂಕರ ಬೈಚಬಾಳ ಅವರನ್ನು, ನಮ್ಮ ಸಿದ್ಧರಾಮ ಉಪ್ಪಿನ ಅವರನ್ನು ಕೇಳಿದರೆ, ಇಲ್ಲಿ ಜನಪದ ರಹಸ್ಯಗಳ ಆಗರವೇ ಇದೆ ಎಂದು ಹೇಳುವುದು ಯಾವ ಅತಿಶಯೋಕ್ತಿಯೂ ಅಲ್ಲ.

ಸ್ವಾತಂತ್ರ್ಯ ಹೋರಾಟಕ್ಕೆ, ಹಲವು ಸಂತರ ಜೀವನಕ್ಕೆ, ಮಕ್ಕಳ ಸಾಹಿತ್ಯದ ಕಣಜಕ್ಕೆ, ಚರಿತ್ರೆ ಶೋಧಿಸುವ ಸಂಶೋಧಕರಿಗೆ, ಹಲವು ವಿದ್ವತ್ ಪ್ರತಿಭೆಗಳಿಗೆ ಈ ನೆಲ ದಿವ್ಯ ಸೋಪಾನವಾದರೂ ಇಲ್ಲಿ ಕೆಂಪುರಕ್ತದ ಕಲೆಗಳನ್ನು ಸೃಷ್ಟಿಸಿದ ಅಕ್ಷರಗಳೇ ಜನಪ್ರಿಯಗೊಂಡ ಕಾರಣಕ್ಕೆ ಇಲ್ಲೊಂದು ಅಂಧಕಾರದ ಸುರಂಗವೇ ನಿರ್ಮಾಣವಾಯ್ತು. ಒಂದು ಯುವ ತಲೆಮಾರು ವಿಸ್ಮೃತಿಗೆ ಜಾರುವ ಅಪಾಯಕ್ಕೀಡಾಯ್ತು. ಎಲೆಮರೆಯ ಕಾಯಿಯಂತೆ ತಮ್ಮ ಪಾಡಿಗೆ ತಾವು ನಾಡನ್ನು ವಿಶಿಷ್ಟವಾಗಿ, ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಜೀವಂತಗೊಳಿಸಿದ ಈ ನೆಲದ ಚರಿತ್ರೆಗೆ ಸಣ್ಣ ಊನವಾದದ್ದನ್ನು ನಾವ್ಯಾರೂ ಮರೆತಿಲ್ಲ. ಆಯಿತು, ಗಾಯಗೊಂಡ ತಕ್ಷಣ ಅದನ್ನು ಮಾಯಿಸಲು ಏನೆಲ್ಲಾ ಕಾರ್ಯ, ಸಂಗತಿಗಳು ಜರುಗಿದವು. 'ಬತ್ತಿರುವ ಭೂಮಿ, ಬಿಕ್ಕುತ್ತಿರುವ ರೈತ'ನೆಂದೋ, 'ಬತ್ತುತ್ತಿರುವ ಭೀಮೆ, ಉಕ್ಕುತ್ತಿರುವ ವೇದನೆ'ಯೆಂದೋ ನೈಸರ್ಗಿಕವಾಗಿ ಹಾಡಿಕೊಂಡಿದ್ದವರಿಗೆ ಆಗ ಬರಸಿಡಿಲಂತೆ ಬಂದೊದಗಿತ್ತು ಭೀಮಾತೀರದಲ್ಲಿ ಕೊಲೆಗಿಲೆ, ಭೀಮಾ ತೀರದ ಹಂತಕರು. ಇದಿಷ್ಟೇ ಈ ನಾಡಿನ, ಈ ನೆಲದ ಸದ್ಯದ ಇತಿಹಾಸ ಎಂದ ಮಹನೀಯರಿಗೆ ಉತ್ತರವಾಗಿ ಭೀಮಾತೀರದ ಜನಪದ ರಶ್ಮಿಗಳೇ ಕಣ್ಣಮುಂದೆ ಹಾದು ಬಂದವು.

ವಿಜಯಲಕ್ಷ್ಮಿ ಕತ್ತಿ

ನಾವು ಬರೆಯಬೇಕಾದ ಚರಿತ್ರೆ, ಸಾಂಸ್ಕೃತಿಕ ನಕ್ಷೆ, ವಿವರಣೆಯುಳ್ಳ ಇತಿಹಾಸ ಸಾಗಬೇಕಾದುದು, ನಮ್ಮ ಪೂರ್ವಸೂರಿ ಕವಿರಾಜಮಾರ್ಗಕಾರ ಶ್ರೀವಿಜಯ ಹೇಳಿಕೊಟ್ಟ ವಿವೇಕದ ಬೆಳಕಿನಲ್ಲಿ. ಈ ನೆಲದ ಅಂತಹ ವಿವೇಕದ ಕಾರ್ಯವನ್ನು ಛಲದಿಂದ ಮುನ್ನಡೆಸುತ್ತಿರುವ ಯುವಕ ರಮೇಶ ಕತ್ತಿ. ಭೀಮೆಯ ಒಡಲಿನಿಂದಲೇ ಹರಡಿನಿಂತ ಸಮತೆ ಹೂವಿನಂತಹ ಸಹೃದಯ ಬರಹಗಾರನೀತ. ಕಾವ್ಯ ಬರೆಯಲು ಶ್ರೀವಿಜಯನಿಗೆ ನೃಪತುಂಗನ ಆಸರೆ, ಒಪ್ಪಿಗೆಯಿತ್ತು. ಆದರೆ, ಈ ಯುವಕನಿಗೆ ತನ್ನ ಸುತ್ತಲಿನ ಪರಿಸರವೇ ಪ್ರೇರಣೆ ಮತ್ತು ಬದುಕು. ಆತನನ್ನು ಕೇಳಿದರೆ ಮುಗ್ಧತೆಯ ಭಾವದಿಂದ ಹೇಳಿದ್ದು, ಸ್ಮರಿಸಿದ್ದು ತನ್ನ ದೊಡ್ಡಪ್ಪ ಶಿವಾನಂದ ಮಾಸ್ತರರನ್ನು. ಈಗ ಪುಟ್ಟ ಬೋಧಿಮರದಂತೆ ಬೆಳಲಾಗಿ ತುಂಬುತ್ತಿರುವ ಈ 'ಬೆರಗು ಪ್ರಕಾಶ'ನದ ಹುಟ್ಟು-ಪ್ರೇರಣೆಯ ಹಿಂದೆ ಏನೆಲ್ಲಾ ಬದುಕಿನ ಸ್ವಾರಸ್ಯಕರ ಕತೆಗಳಿವೆ.

ದೊಡ್ಡಪ್ಪ, ಮನೆ ಪರಿಸರದಲ್ಲಿ ಹಳಗನ್ನಡ ಕಾವ್ಯ ಓದುತ್ತಿದ್ದದ್ದು, ಭಾಮಿನಿ ಷಟ್ಪದಿಯಲ್ಲಿ ಕೆಂಭಾವಿ ಭೋಗಣ್ಣ, ಪುಂಡ ಲಿಂಗೇಶ್ವರ ಪುರಾಣ ಬರೆದದ್ದು, ಸತ್ಯವಾನ ಸಾವಿತ್ರಿ ನಾಟಕವನ್ನು ಬರೆದು ಆಡಿಸಿದ ಪ್ರೇರಣೆ ಒಂದೆಡೆಯಾದರೆ, 1996ರ ಸಿಂದಗಿ ತಾಲ್ಲೂಕು ಬಂಡಾಯ ಸಾಹಿತ್ಯ ಸಂಘಟನೆಯ ಮೂಲಕ ರಾಜ್ಯ ಮಟ್ಟದಲ್ಲಿ ಮೊದಲ ಕಾರ್ಯಕ್ರಮವನ್ನು ಹಮ್ಮಿಕೊಂಡು ಬರಹ ಮತ್ತು ಪ್ರಕಾಶನದಂತಹ ಪುಸ್ತಕ ಸಂಸ್ಕೃತಿಯ ಪ್ರೀತಿಗೆ ವಿವೇಕದ ದಾರಿ ತೆರೆದಿದ್ದು ಇನ್ನೊಂದೆಡೆ.

ಬೆರಗು ಪ್ರಕಾಶನ ಹುಟ್ಟುಹಾಕಿ, ಇಂತಹ ದುರಿತ ಕಾಲಮಾನದಲ್ಲಿ ಆತ ಪ್ರಕಟಿಸಿದ ಕೃತಿಗಳ ಸಂಖ್ಯೆ ಬರೋಬ್ಬರಿ ಐವತ್ತು! ಒಂದು ವಿಶ್ವವಿದ್ಯಾಲಯವೋ ಅಕಾಡೆಮಿಯೋ ಪ್ರಾಧಿಕಾರವೋ ಮಾಡಬಹುದಾದ ಕೆಲಸವನ್ನು ದಣಿವರಿಯದ ಈ ಪಯಣಿಗ ನಾಲ್ಕೇ ವರ್ಷಗಳಲ್ಲಿ ಐವತ್ತು ವೈವಿಧ್ಯಮಯ ಕೃತಿಗಳನ್ನು ಪ್ರಕಟಿಸುವ ಮೂಲಕ ಹಲವು ಕನ್ನಡಂಗಳ ಚೆಲುವನ್ನು ಬಿತ್ತಿದಾತ. ನಾಡಿನ ಬಹುಶ್ರುತ ಲೇಖಕರನ್ನು ಒಟ್ಟಾಗಿಸುವ ಪ್ರೀತಿಯ ಕಾರ್ಯವನ್ನು ಮಾಡಿದಾತ. ಈತ ಮಾಡಿದ ಮೊದಲ ಕಾರ್ಯ ನೆಲದ ಧೀಮಂತಿಕೆಯನ್ನು ಸಾಹಿತ್ಯಿಕವಾಗಿ ಎತ್ತರಿಸಿದ್ದು. ಈಗ ಬಿಡುಗಡೆಗೊಳ್ಳುತ್ತಿರುವ ಇಪ್ಪತ್ತೆಂಟು ಕೃತಿಗಳಲ್ಲಿ ಹಲವು ಈ ನೆಲದ ಅಂತಃಸತ್ವದ ಸ್ಮೃತಿ ಬರಹಗಳಿವೆ. ತನ್ನ ದೊಡ್ಡಪ್ಪನ ಕಾವ್ಯವನ್ನೂ ಆತ ಪ್ರಕಟಿಸುವುದನ್ನು ಮರೆತಿಲ್ಲ.

ಯಾರ ಸ್ಮರಣೆಯಲ್ಲಿ ಈ ಪ್ರಕಾಶನ ಸಂಸ್ಥೆ ಬೆಳೆಯಿತೋ, ಅದೇ ನಾಡಿನ ಬಹುದೊಡ್ಡ ಸಂಶೋಧಕ, ವಚನ ಸಾಹಿತ್ಯಕ್ಕೆ ತಾತ್ವಿಕ ಸಂಶೋಧನೆಯ ರೂಪ ನೀಡಿ ನಮ್ಮಿಂದ ಮರೆಯಾದ ಇದೇ ಮಣ್ಣಿನ ಫಲವತ್ತಾದ ಬನಿ, ಹಿರಿಯಜೀವ ಡಾ. ಎಂ.ಎಂ. ಕಲಬುರ್ಗಿಯವರ ನೆನಪಿನಲ್ಲಿ ಪ್ರತೀ ವರ್ಷ ಮಾಡುವ ಈ ಶ್ರಮದಾಯಕ ಕಾರ್ಯಕ್ಕೆ ಈಗ ನಾಡೇ ಬೆರಗಾಗಿದೆ. ಗೀಗಿ ಗಾರುಡಿಗ ಕಡಣಿ ಕಲ್ಲಪ್ಪನ ಕುರಿತಾದ ಕೃತಿಯನ್ನು ರಮೇಶ ಮೊದಲು ಪ್ರಕಟಿಸುವ ಮೂಲಕ ತನ್ನದೂ ಒಂದು ಬೀಜರೂಪಿ ಪ್ರಕಾಶನ ಆರಂಭವಾಯಿತು ಎಂಬ ಆತ್ಮವಿಶ್ವಾಸ ತಂದುಕೊಂಡ. ಪ್ರಕಾಶನ ಸಂಸ್ಥೆಗೆ ಬೆನ್ನೆಲುಬಾಗಿ ನಿಂತಿರುವುದು ಆತನ ಪತ್ನಿ ವಿಜಯಲಕ್ಷ್ಮಿ. ಆಕೆ ಸಾಹಿತ್ಯದ ನಿಜವಾದ ಪರಿಚಾರಿಕೆ ಎಂದರೆ ತಪ್ಪಾಗಲಿಕ್ಕಿಲ್ಲ.



ಸಾಹಿತ್ಯ ಸಾಧನೆ

ನೆಲದ ಮರೆಯ ನಿಧಾನದಂತೆ ಆರಂಭವಾದ ಈ ಸಾಹಿತ್ಯಯಾನ, ನಾವು ನಮ್ಮ ಸಾಧಕರೆಂದು ತನ್ನ ನೆಲಮೂಲ ಸಂಸ್ಕೃತಿಯ ಚಹರೆಗಳನ್ನು ಗುರುತಿಸುವ ಬಹುದೊಡ್ಡ ಪ್ರಯತ್ನ ಮಾಡಿದ್ದು ಪ್ರಾದೇಶಿಕತೆಯ ದೃಷ್ಟಿಯಿಂದ ಮಹತ್ವದ್ದು ಮತ್ತು ಇದು ನಾಡಿನ ಅಭಿಮಾನದ ದ್ಯೋತಕ. ನಮ್ಮ ರಾಜಕಾರಣ ಎಷ್ಟೇ ಗಡಿಗಳನ್ನು, ತಾಲ್ಲೂಕುಗಳನ್ನು, ಜಿಲ್ಲೆಗಳನ್ನು ಪ್ರಾದೇಶಿಕವಾಗಿ ವಿಭಾಗಿಸಿದರೂ ಜನಪದ ಮೂಲ ಸ್ಥಳನಾಮಗಳನ್ನೇ ಪಲ್ಲಟಿಸಿದರೂ ಅದರ ಜೀವ ಬೇರುಗಳ ತಂತುಗಳನ್ನು ಕಡಿಯಲಾಗದು. ಕತ್ತಿಯಂತಹ ನವತರುಣರು ಇದನ್ನು ಸಾಂಸ್ಕೃತಿಕವಾಗಿ ಬೆಸೆಯಬಲ್ಲರು. ಮಾರ್ಗದರ್ಶಕ ಎಚ್.ಟಿ. ಪೋತೆ ಹಾಗೂ ಸಿದ್ಧರಾಮ ಉಪ್ಪಿನ ಅವರಂತಹ ಹಿರಿಯರ ಚೈತನ್ಯವನ್ನು ಜೊತೆಗಿಟ್ಟುಕೊಂಡು ಏಕಲವ್ಯನಂತೆ ಸಾಗುವ ಇವರ ಪರಿಯೇ ನನಗಂತೂ ವಿಸ್ಮಯ!

ಈಗ ಒಂದೇ ಸೂರಿನಡಿ ನಾಡಿನ ಇಪ್ಪತ್ತೆಂಟು ಕೃತಿಗಳು ಬೆಳಕು ಕಾಣುತ್ತಿವೆ. ಹೂಲಿ ಶೇಖರ, ಸಂಗಮೇಶ ಉಪಾಸೆ, ಪುಂಡಲೀಕ ಕಲ್ಲಿಗನೂರು, ಶಂಕರ ಬೈಚಬಾಳ, ರಾಜಕುಮಾರ ಬಡಿಗೇರ, ಉಪ್ಪಿನ ಮುಂತಾದ ಹಿರಿಯರ ಕೃತಿಗಳಿಂದ ಹಿಡಿದು, ಕಿರಿಯ ಬರಹಗಾರ ಮಂಜುನಾಥನವರೆಗೆ ಈ ಸಾಹಿತ್ಯದ ಸುಗಂಧ ಹರಡಿ ನಿಂತಿದೆ. ಜೊತೆಗೆ ಹಲವು ಲೇಖಕರ ಚೊಚ್ಚಲ ಕೃತಿಗಳನ್ನು ಪ್ರಕಟಿಸುವ ಮೂಲಕ ಸಾಹಿತ್ಯದ ಮುಖ್ಯವಾಹಿನಿಗೆ ಅವರನ್ನು ಕರೆತರುವ ಕೈಂಕರ್ಯವಂತೂ ಇನ್ನಷ್ಟು ಶ್ಲಾಘನೀಯ.

ಪುಸ್ತಕ ಪ್ರಕಾಶನವು ಪುಸ್ತಕದ ಉದ್ಯಮವಾದ ಈ ಹೊತ್ತಿನಲ್ಲಿ ಇದನ್ನೆಲ್ಲ ಪ್ರಾಣವಾಯುವಿನಂತೆ ಕಾಪಾಡುವ ಶಕ್ತಿ ಖಂಡಿತ ರಮೇಶ ಅವರಂಥ ಯುವ ಗೆಳೆಯರಿಗಿದೆ. ವಿಜಯಲಕ್ಷ್ಮಿ ಅವರಂತಹ ಛಲಗಾತಿ ಹೆಣ್ಣು ಮಗಳಿಗಿದೆ. ನಾಡಿನ ಲೇಖಕರನ್ನು ತನ್ನ ಪ್ರದೇಶಕ್ಕೆ ಆಹ್ವಾನಿಸಿ, ಪುಸ್ತಕಗಳನ್ನು ಬಿಡುಗಡೆಗೊಳಿಸಿ, ಅವರನ್ನು ಸನ್ಮಾನಿಸಿ, ಅವರವರ ಕೃತಿಗಳ ಮೂಲಕ ಅವರನ್ನು ಬೀಳ್ಕೊಡುವ ಈ ಕಾರ್ಯ ಸಾಹಿತ್ಯದ ತವರ ಪ್ರೀತಿಯಂತಹ ಕಾರ್ಯ. ಆಗಸ್ಟ್ 30ರಂದು ಕಡಣಿಯಲ್ಲಿ ಒಂದು ಮರೆಯಲಾಗದ ಸಾಹಿತ್ಯದ ಸಾಂಸ್ಕೃತಿಕ ಹಬ್ಬ. ಕೋವಿಡ್‌ನಂತಹ ಸಂಕಷ್ಟದ ಕಾಲದ ನೋವನ್ನು ಈ ಸಾಹಿತ್ಯದ ಗೆಳೆಯ, ಕನ್ನಡದ ಹಿತೈಷಿ ಕಡಿಮೆ ಮಾಡಬಲ್ಲ ಎಂಬುದಕ್ಕೆ ಈ ನುಡಿತೇರ ಯಾನವೇ ಸಾಕ್ಷಿ.

ಬೆರಗು ಸಾಹಿತ್ಯ ಪ್ರಶಸ್ತಿ ಮೂಡಿಸಿದ ಸಂಚಲನ ಕೂಡ ದೊಡ್ಡದು. ಈ ವರ್ಷ ಧೀರೇಂದ್ರ ನಾಗರಹಳ್ಳಿಯವರ 'ಹಳ್ಳದ ದಂಡೆ ಮತ್ತು ಕಳ್ಳಿ ಸಾಲು' ಎಂಬ ಕಥಾ ಸಂಕಲನಕ್ಕೆ ಈ ಪ್ರಶಸ್ತಿ ದೊರೆತಿದೆ. ಬೆರಗು ಪ್ರಕಾಶನ ಈಗ ರಮೇಶ್, ವಿಜಯಲಕ್ಷ್ಮಿ ಅವರದಲ್ಲ. ಇದು ಈ ನಾಡಿನದು, ಈ ಪ್ರಕಾಶನದ ಪ್ರೀತಿ, ಅಭಿಮಾನ ಕಟ್ಟಿಕೊಂಡಿರುವ ಲೇಖಕರದು. ಇದನ್ನು ಕರುಳರಿತು ಬಾಳಿಸಬೇಕಾದಂಥವರು ಅವರೇ. ಈ ಬೆರಗು ಬೆಳೆಯಬೇಕು. ನಾಡಿನ ತುಂಬಾ ಸಾಹಿತ್ಯದ ಬೆರಗನ್ನು ಮೂಡಿಸುವ ಕೆಲಸವನ್ನು ಮುಂದುವರಿಸಬೇಕು ಎಂಬುದಷ್ಟೇ ಹಾರೈಕೆ. ❖

ತಾಳವಾದ್ಯ ಹೊರಡಿಸುವ ಭಾವತರಂಗ

ಎಸ್. ದಿವಾಕರ್

'ಗಾಯಕ ಹಾಡುವುದು ಶಬ್ದಗಳನ್ನು; ಆ ಶಬ್ದಗಳು ಭಾವೋದ್ವೇಗದ ಅನುಭವವನ್ನು ತುಂಬಿಕೊಂಡಿರುತ್ತವೆ. ಉದಾಹರಣೆಗೆ, 'ನಹಿ ಆಯೇ ಸಾವರಿಯಾ ಫಿರ್ ಆಯೇ ಬದರಿಯಾ' (ನನ್ನ ಇನಿಯ ಇನ್ನೂ ಬರದಿದ್ದರೂ, ಕಪ್ಪು ಮೋಡಗಳಂತೂ ಬಂದುಬಿಟ್ಟಿವೆ) ಎಂಬ ಸಾಲನ್ನು ತೆಗೆದುಕೊಳ್ಳಿ. ಇಲ್ಲಿರುವ ಕೆಲವೇ ಶಬ್ದಗಳು ನಮಗೆ ಖಿನ್ನತೆಯನ್ನು, ನಿರಾಶೆಯನ್ನು, ಅಭಿಲಾಶೆಯನ್ನು ಅರ್ಥಮಾಡಿಸುವುದಷ್ಟೇ ಅಲ್ಲ, ಅವುಗಳನ್ನು ಅನುಭವಿಸುವಂತೆಯೂ ಮಾಡುತ್ತವೆ. ಗಾಯಕ ಈ ಒಂದೇ ಸಾಲನ್ನು ಇಪ್ಪತ್ತು ನಿಮಿಷ ಹಾಡಬಹುದು. ಆ ಇಪ್ಪತ್ತು ನಿಮಿಷಗಳಲ್ಲಿ ಅವನು ಆ ಸಂಕೀರ್ಣ ಭಾವಗಳನ್ನು ಐವತ್ತು ವಿಭಿನ್ನ ಬಗೆಗಳಲ್ಲಿ ಅಭಿವ್ಯಕ್ತಗೊಳಿಸಬಹುದು ಮತ್ತು ಐವತ್ತು ವಿಭಿನ್ನ ರೀತಿಗಳಲ್ಲಿ ತುಂಬ ಸೂಕ್ಷ್ಮವಾಗಿ ಲಯಕ್ಕೆ ಹೊಂದಿಕೊಳ್ಳುತ್ತಿರಬಹುದು. ಅದೇ ಒಬ್ಬ ಪಕ್ಕವಾದ್ಯಗಾರ ಅವನ ಗಾಯನವನ್ನು ಶ್ರೋತೃಗಳಿಗಾಗಿ ಇನ್ನೊಂದೇ ಎತ್ತರಕ್ಕೆ ಕೊಂಡೊಯ್ಯಬಲ್ಲ.' ಇದು ಪ್ರಸಿದ್ಧ ತಬಲಾ ಜಾದೂಗಾರ ಜಾಕಿರ್ ಹುಸೇನ್ ಸಂದರ್ಶನವೊಂದರಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ. ಆ ಇನ್ನೊಂದು ಎತ್ತರ ಯಾವುದು? ಅದು ಉಂಟುಮಾಡುವ ಸಂಕೀರ್ಣಾನುಭವ ಎಂಥದು? ಕೃಷ್ಣಪ್ರಕಾಶ ಉಳಿತ್ತಾಯರ 'ಸುಘಾತ' ಈ ಪ್ರಶ್ನೆಗಳಿಗೆ ಅನೇಕ ನಿದರ್ಶನಗಳ ಮೂಲಕ ಉತ್ತರಿಸಿ, ವಿಶದೀಕರಿಸುವ ಒಂದು ಅಪರೂಪದ ಪುಸ್ತಕ.



ಪು: 220
₹150

ಸುಘಾತ: ಚೆಂಡೆ-ಮದ್ದಳೆ ನಾದಾಂತರಂಗ
ಲೇ: ಕೃಷ್ಣಪ್ರಕಾಶ ಉಳಿತ್ತಾಯ
ಪ್ರ: ಯಕ್ಷಗಾನ ಅಕಾಡೆಮಿ, ಬೆಂಗಳೂರು
ಸಂ: 7760356424

ಭಾವವೈವಿಧ್ಯವನ್ನು ಅಭಿವ್ಯಕ್ತಿಸುವ ಪ್ರಕ್ರಿಯೆಯಲ್ಲಿ ತಾಳವಾದ್ಯಗಾರನೊಬ್ಬ ಮುಖ್ಯ ಗಾಯಕನಷ್ಟೇ ಪರಿಣಾಮಕಾರಿಯಾಗಲು ಸಾಧ್ಯವೇ? ಸಾಧ್ಯ ಎಂದು ಈ ಪುಸ್ತಕವನ್ನು ಓದುವ ಪೂರ್ವದಲ್ಲಿ ನನಗೆ ಗೊತ್ತಿರಲಿಲ್ಲ. ಉಳಿತ್ತಾಯರು ಸ್ವತಃ ಒಬ್ಬ ಪರಿಣತ ಚೆಂಡೆ-ಮದ್ದಳೆ ವಾದಕರು. ಅವರಿಗೆ ನಮ್ಮ ಶಾಸ್ತ್ರೀಯ ಸಂಗೀತದ ಶಾಸ್ತ್ರಭಾಗದಲ್ಲಿ ಹೇಗೋ ಹಾಗೆ ಅದರ ಪ್ರಯೋಗಭಾಗದಲ್ಲೂ ವಿಶೇಷ ಪರಿಶ್ರಮವಿದೆ. ಜೊತೆಗೆ ವಾದನ ಕಲೆಯ ಅಮೂರ್ತ ಸೂಕ್ಷ್ಮಗಳನ್ನು ಭಾಷೆಯಲ್ಲಿ ಮೂರ್ತಗೊಳಿಸಬಲ್ಲ ಭಾಷಾ ಕೌಶಲವೂ ಉಂಟು.

ಈ ಪುಸ್ತಕದಲ್ಲಿ ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ ಮೃದಂಗವಾದನದ ವೈಶಿಷ್ಟ್ಯ, ಯಕ್ಷಗಾನದ ನಾದವೈಭವ, ಗಾನಾನುಸಂಧಾನ, ತಿತ್ತಿತ್ತೈ ತಾಳ, ಯಕ್ಷಗಾನ ಕಲೆಯ ಹಿಮ್ಮೇಳ, ನೃತ್ಯ, ವಾದನಗಳ ಲಾಸ್ಯ, ಚಕ್ರತಾಳ ಇತ್ಯಾದಿ ವಿಷಯಗಳ ಬಗ್ಗೆ ತೀರ ಆಳವಾದ ವಿಶ್ಲೇಷಣೆಯಿದೆ. ಎರಡನೆಯ ಭಾಗದಲ್ಲಿ, ಪರಿಣತ ಚೆಂಡೆ-ಮದ್ದಳೆ ವಾದ್ಯಗಾರರ ನುಡಿಸಾಣಿಕೆಯನ್ನು ಕುರಿತ ಅತ್ಯಂತ ಅಪೂರ್ವವಾದ ಒಳನೋಟಗಳಿವೆ. ಈ ವಾದ್ಯಗಾರರಾದರೋ ಯಕ್ಷಗಾನ ರಂಗದಲ್ಲಿ ತುಂಬ ಹೆಸರಾದವರು. ಪುಂಡಿಕಾಯ್ ಕೃಷ್ಣ ಭಟ್, ದಿವಾಣ ಭೀಮ ಭಟ್ಟ, ಲಕ್ಷ್ಮೀಶ ಅಮ್ಮಣ್ಣಾಯ, ಮಾಂಬಾಡಿ ಸುಬ್ರಹ್ಮಣ್ಯ ಭಟ್, ಪದ್ಯಾಣ ಶಂಕರನಾರಾಯಣ ಭಟ್, ಮಣಿಮುಂಡ ಸುಬ್ರಹ್ಮಣ್ಯ ಶಾಸ್ತ್ರಿ, ತಲೆಂಗಳ ಗೋಪಾಲಕೃಷ್ಣ ಭಟ್, ಅಡೂರು ಗಣೇಶ ರಾವ್, ಅನಂತ ಪದ್ಮನಾಭ ಪಾಠಕ್, ಶಂಕರ ಭಾಗವತ್ ಯಲ್ಲಾಪುರ, ಪೆರುವಾಯಿ ನಾರಾಯಣ ಭಟ್ಟ, ಪದ್ಯಾಣ ಜಯರಾಮ ಭಟ್, ದೇಲಂತಮಜಲು ಸುಬ್ರಹ್ಮಣ್ಯ ಭಟ್ ಮುಂತಾದವರ ಸ್ವೋಪಜ್ಞ ಶೈಲಿ, ನುಡಿಸಾಣಿಕೆಯ ವೈಶಿಷ್ಟ್ಯ, ವೈಯಕ್ತಿಕ ಛಾಪು ಮೊದಲಾದವುಗಳನ್ನು ಕೆಲವು ಸೂಕ್ತ ಸಂದರ್ಭಗಳ ವಿವರಣೆಯ ಸಮೇತ ಚಿತ್ರಿಸಲಾಗಿದೆ.

ವಿಮರ್ಶೆ

ವಾದ್ಯವಾದನದಲ್ಲಿ ಎರಡು ಬಗೆಯುಂಟು. ಒಂದು, ಗಾಯಕನ ಹಾಡಿನ ಲಯವನ್ನು ಅನುಸರಿಸುವ ತಾಳಧರ್ಮ. ಇನ್ನೊಂದು, ಗಾಯಕ ಹೊಮ್ಮಿಸುವ ಭಾವವನ್ನು ಇಮ್ಮಡಿಸುವಂಥ ವಾದಕ ಮನೋಧರ್ಮ. ಒಬ್ಬ ಸಮರ್ಥ ವಾದಕನಲ್ಲಿ ಈ ಎರಡೂ ಬೇರೆ ಬೇರೆಯಾಗದೆ ಹೇಗೆ ಪರಸ್ಪರ ಹೊಂದಿಕೊಂಡಿರುತ್ತವೆ, ಹೊಂದಿಕೊಂಡಿರಬೇಕು ಎಂಬುದನ್ನು ತುಂಬ ಮಾರ್ಮಿಕವಾಗಿ ವಿವರಿಸುತ್ತವೆ ಉಳಿತ್ತಾಯರ ಈ ಮಾತುಗಳು: 'ವಾದಕನು ಗಾನದೊಂದಿಗೆ 'ಅದ್ವೈತ ಭಾವ' ಹೊಂದಿದರೆ ವಾದಕನಿಗೆ 'ಕೈಕಟ್ಟುವ' ಅಪಾಯವೇ ಹೆಚ್ಚು. ಅನ್ಯನಾಗಿ ನಿಂತರೆ ಭಾವಪೂರ್ಣತೆಯೊಂದಿಗಿನ ಮನೋಧರ್ಮೀಯ ಪ್ರಸ್ತುತಿ ಆಗದಿರುವ ಕೊರತೆಯೂ ಬರುತ್ತದೆ. ವಾದಕನಿಗೆ 'ಅನ್ಯ'ನಾಗುವಿಕೆ ಮತ್ತು 'ಒಂದಾಗು'ವಿಕೆಯ ಸಾಮರ್ಥ್ಯ ಇದ್ದರಂತೂ ಸೌಭಾಗ್ಯವೇ ಸರಿ. ಕೀರ್ತಿಶೇಷ ಪಾಲ್ಘಾಟ್ ಮಣಿ ಅಯ್ಯರ್ ಅಂಥವರಿಂದ ಅದು ಸಾಧಿತವಾಗಿತ್ತು. ಈ ಸಾಮರ್ಥ್ಯ ವಿಶೇಷದಿಂದಲೇ ವಾದಕನಾದವನಲ್ಲಿ ರಾಗದ ಭಾವವನ್ನೂ ಕೃತಿ ಭಾವವನ್ನೂ ಮತ್ತೂ ಮುಂದಕ್ಕೆ ಹೋದರೆ ತಾಳದ (ಕಾಲದ) ಭಾವವನ್ನೂ ಅಭಿವ್ಯಕ್ತಿಸುವುದಕ್ಕೆ ಸಾಧ್ಯವಾಗುವುದು.'

ಈ ಪುಸ್ತಕದಲ್ಲಿ ಎಲ್ಲ ಕಡೆಯೂ ವಿಷಯ ಇಷ್ಟು ಸರಳವಾಗಿಲ್ಲ, ಸ್ಪಷ್ಟವೂ ಆಗಿಲ್ಲ. ಉದಾಹರಣೆಗೆ, ದೇಲಂತಮಜಲು ಸುಬ್ರಹ್ಮಣ್ಯ ಭಟ್ಟರ ವಾದನ ಶೈಲಿಯ ಬಗ್ಗೆ 123ನೆಯ ಪುಟದಲ್ಲಿರುವುದನ್ನು ನೋಡಿ: 'ಚೆಂಡೆಯ ಉರುಳಿಕೆಯಲ್ಲಿ ಇವರು ಮಂಡಿಸುವ ಕ್ರಮದಲ್ಲಿ ಪಾಟಾಕ್ಷರಗಳು ತಾಳದೊಂದಿಗೆ ಕಚ್ಚಿ ಸಾಗುವ ರೀತಿ ಮತ್ತು ಅದರಲ್ಲಿರುವ ಸಮಾನ ರೀತಿಯ ಧ್ವನಿ ಹೊಮ್ಮುವಿಕೆ ಅನ್ಯತ್ರ ಅಲಭ್ಯವೆಂದು ಹೇಳದಿರಲು ಸಾಧ್ಯವಿಲ್ಲ. ಅವರ ಚೆಂಡೆಯ ಉರುಳಿಕೆಯ ಶುದ್ಧತೆಗೆ ಮತ್ತು ಸೌಂದರ್ಯಕ್ಕೆ ಮದ್ದಳೆಗಾರರ ಸದಸ್ಸಿನಲ್ಲಿ ವಿಶೇಷ ಗೌರವವಿದೆ. ಧ್ರುತಗತಿಯ ಮಾರವಿ ಏಕ ತಾಳದ ಬಿಡಿತದಲ್ಲಿ ಬರುವ ಉರುಳಿಕೆಯಲ್ಲಿ ಅವರು ತೋರುವ ದ್ವಿ ಕಾಲದ ಉರುಳಿಕೆ ಕೊಡುವ ಸಂತೋಷ ಇದೆಯಲ್ಲ ಅದು ಅನುಭವ ವೇದ್ಯ.' ಸುಭಗ ಸಂವಹನಕ್ಕೆ ಅನುಕೂಲವಾಗುವಂತೆ ಈ ವಾಕ್ಯಗಳಲ್ಲಿ ಅಗತ್ಯವಿದ್ದ ಕಡೆ ಅಲ್ಪವಿರಾಮ ಚಿಹ್ನೆಗಳು ಬೇಕಿದ್ದವು. 'ಕಚ್ಚಿ', 'ಹೊಮ್ಮುವಿಕೆ', 'ಉರುಳಿಕೆ', 'ಸದಸ್ಸು', 'ಬಿಡಿತ' ಇತ್ಯಾದಿ ಪದಗಳಿಗೆ ಸುಲಭಗ್ರಾಹ್ಯವಾದ ಪರ್ಯಾಯ ಶಬ್ದಗಳಿಲ್ಲದಿದ್ದಲ್ಲಿ ಇವುಗಳನ್ನು ವಿವರಿಸಬಹುದಿತ್ತು. ಕೊನೆಯಲ್ಲಿ ಶಬ್ದಾರ್ಥಗಳ ಒಂದು ಪಟ್ಟಿ ಕೊಟ್ಟಿದ್ದರೆ ಇನ್ನೂ ಹೆಚ್ಚು ಪ್ರಯೋಜನವಾಗುತ್ತಿತ್ತು.

ಸಂಗೀತ ಅನಿರ್ವಚನೀಯವಷ್ಟೆ. ಇದಕ್ಕೆ ಚೆಂಡೆ-ಮದ್ದಳೆಯೂ ಹೊರತಲ್ಲ. ವಿದ್ವಾಂಸ ಎಂ.ಎ.ಹೆಗಡೆಯವರು ಹೇಳಿರುವಂತೆ, 'ಚೆಂಡೆ-ಮದ್ದಲೆಗಳ ನಾದಸೌಂದರ್ಯವನ್ನು ಸವಿಯುತ್ತೇವೆ; ಚಪ್ಪಾಳೆ ತಟ್ಟುತ್ತೇವೆ; ತಲೆದೂಗುತ್ತೇವೆ; ಉದ್ಗಾರವನ್ನು ಹೊರಡಿಸುತ್ತೇವೆ. ಆದರೆ ಮಾತಿನಲ್ಲಿ ವಾದನದ ಸ್ವಾರಸ್ಯವನ್ನು ಸೆರೆ ಹಿಡಿಯಲು ಸೋಲುತ್ತೇವೆ. ಹಾಗಾಗಿ ವಾದನಗಳ ಬಗೆಗಾಗಲಿ, ವಾದಕರ ಬಗೆಗಾಗಲಿ ಬಂದ ಬರಹಗಳು ಕಡಿಮೆ. ಬಂದವುಗಳಲ್ಲಿಯೂ ಕೌಶಲದ ಸ್ವರೂಪವನ್ನು ವಿಶ್ಲೇಷಿಸುವ ಪ್ರಯತ್ನ ತೀರ ವಿರಳ.'

'ಸುಘಾತ' ಅಂಥ ವಿರಳ ಕೃತಿಯಾಗಿರುವುದರಿಂದಲೇ ಅದಕ್ಕೆ ವಿಶೇಷ ಮಹತ್ವ. ನನಗೆ ತಿಳಿದ ಮಟ್ಟಿಗೆ ಕನ್ನಡದಲ್ಲಿ ಇಂಥ ಪುಸ್ತಕ ಬಹುಶಃ ಇದೊಂದೇ. ❖

ಕೆ.ಪಿ.ಸತ್ಯನಾರಾಯಣ ಬರೆದ ಕಥೆ ಆಗಂತುಕ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ವಸುಂಧರಾ ಕದಲೂರು ಬರೆದ ಕವಿತೆ ಆ ಊರಿನಲ್ಲಿ...
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಸುಸ್ಥಿರ ಕೃಷಿಯ ಮಾರ್ಗದರ್ಶಿ

ಎರಡು ದಶಕಗಳ ಹಿಂದೆಯೇ ಸಾವಯವ ಕೃಷಿ ಕುರಿತ ಚರ್ಚೆಗಳಲ್ಲಿ 'ಪರ್ಮಾಕಲ್ಚರ್' ಎಂಬ ಶಬ್ದ ಹರಿದಾಡುತ್ತಿತ್ತು. ಅದಾದ ನಂತರ 'ಪರ್ಮಾಕಲ್ಚರ್' ಬಗ್ಗೆ ಕೈಪಿಡಿಗಳು, ಬಿಡಿ ಲೇಖನಗಳು ಪ್ರಕಟಗೊಳ್ಳುತ್ತಿದ್ದವು. ಆದರೆ ಈ ವಿಷಯದ ಕುರಿತು ಒಂದು ಸಮಗ್ರ ಚಿತ್ರಣ ಹಾಗೂ ಮಾಹಿತಿ ನೀಡುವ ಕೃತಿ ಅಗತ್ಯವಿತ್ತು. ಆ ಕೊರತೆ ಈಗ ನಿವಾರಣೆಯಾಗಿದ್ದು, 'ಪರ್ಮಾಕಲ್ಚರ್- ಶಾಶ್ವತ ಕೃಷಿ ಕಲೆ ಮತ್ತು ವಿಜ್ಞಾನ' ಎಂಬ ಪುಸ್ತಕ ಪ್ರಕಟಗೊಂಡಿದೆ.

ಮೊದಲ ಓದು

'ಪರ್ಮಾಕಲ್ಚರ್' ಎಂಬ ಈ ವಿಶಿಷ್ಟ ಕೃಷಿ ಪರಿಕಲ್ಪನೆಯನ್ನು ಹುಟ್ಟು ಹಾಕಿದವರು ಆಸ್ಟ್ರೇಲಿಯಾದ ಬಿಲ್ ಮಾಲಿಸನ್. ಇದನ್ನು ಭಾರತಕ್ಕೆ ಪರಿಚಯಿಸಿದವರಲ್ಲಿ ಪಶ್ಚಿಮ ಬಂಗಾಳದ ಅರ್ಧೇಂದು ಎಸ್. ಚಟರ್ಜಿ ಪ್ರಮುಖರು. ಚಟರ್ಜಿಯವರು, ದಶಕಗಳ ಹಿಂದೆ ಕರ್ನಾಟಕ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ಈ ಪದ್ಧತಿ ಕುರಿತು ರೈತರಿಗೆ ತರಬೇತಿ ನೀಡಿದ್ದಾರೆ. ಹಲವು ಪುಸ್ತಕಗಳನ್ನು ಬರೆದಿದ್ದಾರೆ. ತರಬೇತಿಗಳಲ್ಲಿನ ಮಾಹಿತಿ ಹಾಗೂ ಪುಸ್ತಕಗಳಿಂದ ಸಂಗ್ರಹಿಸಿದ ವಿವರಗಳನ್ನು ವಿ.ಗಾಯತ್ರಿಯವರು ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.

ಪು: 276
₹225

ಪರ್ಮಾಕಲ್ಚರ್ – ಶಾಶ್ವತ ಕೃಷಿಯ ಕಲೆ ಮತ್ತು ವಿಜ್ಞಾನ
ಲೇ: ಅರ್ಧೇಂದು ಎಸ್ ಚಟರ್ಜಿ
ಕನ್ನಡಕ್ಕೆ: ವಿ. ಗಾಯತ್ರಿ
ಪ್ರ: 'ಇಕ್ರಾ', ಬೆಂಗಳೂರು
ಸಂ: 9980074679

'ಪರ್ಮಾಕಲ್ಚರ್' ತತ್ವಗಳು ಅರ್ಥವಾಗುವುದೇ ವಿವಿಧ ವಿನ್ಯಾಸಗಳ ಮೂಲಕ. ಇಡೀ ಪುಸ್ತಕ ಇಂಥ ಹತ್ತು ಹಲವು ವಿನ್ಯಾಸಗಳನ್ನು ತೆರೆದಿಡುತ್ತದೆ. ಕೃಷಿ ಮತ್ತು ನಮ್ಮ ಪರಿಸರ ಹೇಗೆ ಹೊಂದಿಕೊಂಡಿವೆ ಮತ್ತು ಅದರ ವಿನ್ಯಾಸ ಜೋಡಣೆ, ಹೊಲದ ವಿನ್ಯಾಸವನ್ನು ಯಾವ ರೀತಿ ಸಿದ್ಧಪಡಿಸಿಕೊಳ್ಳಬೇಕು, ಕೃಷಿ ಭೂಮಿಯಲ್ಲಿ ಗಿಡ-ಮರಗಳ ಹೊಂದಾಣಿಕೆ ಹೇಗೆ, ಕೈತೋಟದ ಪರಿಕಲ್ಪನೆ ಮತ್ತು ವಿನ್ಯಾಸ, ಕೃಷಿ ಹೊಂಡಗಳ ನಿರ್ಮಾಣ, ಕಾಂಪೋಸ್ಟ್ ತಯಾರಿಸುವ ವಿಧಾನ, ನರ್ಸರಿ ನಿರ್ವಹಣೆ, ಬೀಜ ಸಂರಕ್ಷಣೆ ಸ್ವಾಭಾವಿಕ ವಿಧಾನದಲ್ಲಿ ಕೀಟ ಮತ್ತು ರೋಗ ನಿರ್ವಹಣೆ ಮಾಹಿತಿ... ಹೀಗೆ ಈ ಪುಸ್ತಕ 'ಸುಸ್ಥಿರ ಕೃಷಿ'ಯ ಸಮಗ್ರ ಚಿತ್ರಣವನ್ನು ಒದಗಿಸುತ್ತದೆ. ಮಾತ್ರವಲ್ಲ, ಸುಸ್ಥಿರ ಮತ್ತು ಸಾವಯವ ಕೃಷಿಯಲ್ಲಿ ಪ್ರಾಯೋಗಿಕವಾಗಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ❖

ಅಪ್ಪನ 'ಧ್ಯಾನ'

ಅಶೋಕ್ ಕುಮಾರ್ ಧ್ಯಾನಚಂದ್

'ನಾನು ಭಾರತದ ಒಬ್ಬ ಸಾಮಾನ್ಯ ನಾಗರಿಕ..'

ಅಪ್ಪ ತಮ್ಮ ಪುಸ್ತಕ 'ಗೋಲ್'ನಲ್ಲಿ ಹೀಗೆ ಬರೆದಿದ್ದಾರೆ. ತಮ್ಮ ಜೀವನದುದ್ದಕ್ಕೂ ಅವರು ಬದುಕಿದ್ದು ಹಾಗೆಯೇ. ಸರಳ, ಸಜ್ಜನಿಕೆ, ಸ್ವಾಭಿಮಾನ ಮತ್ತು ದೇಶಭಕ್ತಿ ಅವರ ಜೀವನಶೈಲಿಯಾಗಿತ್ತು. ಯಾವತ್ತೂ ಆಡಂಬರ ಅಥವಾ ತೋರಿಕೆಯ ಜೀವನ ಮಾಡಲೇ ಇಲ್ಲ. ಆದರೆ ನನಗೆ ಇವತ್ತಿಗೂ ಅವರ ಬದುಕಿನ ಬಗ್ಗೆ ಅಚ್ಚರಿ ಮತ್ತು ಅಭಿಮಾನಗಳು ಏಕಕಾಲಕ್ಕೆ ಮೂಡುತ್ತವೆ. ಏಕೆಂದರೆ ತಮ್ಮನ್ನು ಸಾಮಾನ್ಯ ವ್ಯಕ್ತಿ ಎಂದೇ ಪರಿಗಣಿಸಿಕೊಂಡಿದ್ದವರು ಹೊರಜಗತ್ತಿಗೆ 'ಹಾಕಿ ಮಾಂತ್ರಿಕ'ನಾಗಿದ್ದಾರೆ. ಪ್ರತಿಯೊಬ್ಬ ಕ್ರೀಡಾಪ್ರೇಮಿಯ ಮನದಲ್ಲಿ ನೆಲೆಸಿದ್ದಾರೆ. ಇವತ್ತು ಅವರ 116ನೇ ಜಯಂತಿ. ಇಡೀ ದೇಶವೇ ಅವರ ನೆನಪಿನಲ್ಲಿ ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸುತ್ತಿದೆ.

ದೇಶದ ಸ್ವಾತಂತ್ರ್ಯಪೂರ್ವದಲ್ಲಿ ಅವರು ಹಾಕಿ ಕ್ರೀಡೆಯಲ್ಲಿ ಮಾಡಿದ ಸಾಧನೆಯನ್ನು ಸ್ವಾತಂತ್ರ್ಯ ಸಿಕ್ಕು 75 ವರ್ಷಗಳ ನಂತರವೂ ದೇಶವು ಸಂಭ್ರಮಿಸುತ್ತಿದೆ. ಈ ಸುದೀರ್ಘ ಅವಧಿಯಲ್ಲಿ ದೇಶದಲ್ಲಿ ಬಹಳಷ್ಟು ಸ್ಥಿತ್ಯಂತರಗಳು ಆಗಿವೆ. ಹಲವಾರು ಖ್ಯಾತನಾಮರು ಬೆಳಗಿದ್ದಾರೆ. ಇದರಲ್ಲಿ ಕ್ರೀಡಾಕ್ಷೇತ್ರವೂ ಸೇರಿದೆ. ತಾರೆಗಳು ಮಿನುಗುತ್ತಲೇ ಇವೆ. ಆದರೆ ಅಪ್ಪನ ಧ್ಯಾನ ಮಾತ್ರ ನಿರಂತರವಾಗಿದೆ. ಒಬ್ಬ 'ಸಾಮಾನ್ಯ' ವ್ಯಕ್ತಿ ಅಜರಾಮರವಾಗಿರಲು ಹೇಗೆ ಸಾಧ್ಯ?

> ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್ ಅವರ ಜನ್ಮದಿನ ಇಂದು. ಇದನ್ನು ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ.

ಅದಕ್ಕೆ ಕಾರಣ ಅವರು ಈ ದೇಶಕ್ಕೆ ನೀಡಿದ ಅಮೂಲ್ಯ ಕೊಡುಗೆ. ಅವರ ಆಟದಲ್ಲಿ ಅರಳಿದ 1928, 1932 ಮತ್ತು 1936ರ ಒಲಿಂಪಿಕ್ಸ್ ವಿಜಯಗಳು ದಂತಕಥೆಗಳಾಗಿವೆ. ಅವರ ಪ್ರೇರಣೆಯಿಂದಾಗಿಯೇ 1947ರ ನಂತರ ಕಿಶನ್ ಲಾಲ್ ದಾದಾ, ಕೆ.ಡಿ. ಸಿಂಗ್ ಬಾಬು, ಬಲ್ಬೀರ್ ಸಿಂಗ್ ಸೀನಿಯರ್, ಲೆಸ್ಲಿ ಕ್ಲಾಡಿಯಸ್, ಸರದಾರ್ ಉಧಮ್ ಸಿಂಗ್, ಚರಣ್ ಸಿಂಗ್ ಮತ್ತು ವಿ. ಭಾಸ್ಕರನ್ ಅವರಂತಹ ಚಿನ್ನದ ಪದಕ ವಿಜೇತ ನಾಯಕರು ಉದಯಿಸಿದರು.

1980ರ ನಂತರ ನಾಲ್ಕು ದಶಕಗಳ ಕಾಲ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಪದಕ ಒಲಿಯಲಿಲ್ಲ. ಆದರೆ ಆ ಕಾಲದಲ್ಲಿಯೂ ಹಾಕಿ ಉಳಿಯಲು ಮತ್ತು ಬೆಳೆಯಲು ಕೂಡ ಆ ಎಂಟು ಚಿನ್ನದ ಪದಕಗಳ ಕಥೆಗಳೇ ಸ್ಫೂರ್ತಿದಾಯಕವಾದವು. ಅದಕ್ಕೆ ಮೂಲಪುರುಷ ಮೇಜರ್ ಧ್ಯಾನಚಂದ್. ಇತ್ತೀಚೆಗಷ್ಟೇ ಭಾರತ ತಂಡವು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿತು. 41 ವರ್ಷಗಳ ಪದಕದ ಬರ ನೀಗಿತು. ಮಹಿಳಾ ಹಾಕಿ ತಂಡವೂ ವೀರೋಚಿತವಾಗಿ ಆಡಿ ಜನಮನ ಗೆದ್ದಿತು. ಈ ಸಂದರ್ಭದಲ್ಲಿಯೂ ಧ್ಯಾನಚಂದ್ ಅವರ ನೆನಪು ಅನುರಣಿಸಿತು.

ಆದರೆ ನನ್ನ ಪ್ರಾಮಾಣಿಕ ಅನಿಸಿಕೆಯಂತೆ, ಅಪ್ಪ ಕೇವಲ ತಮ್ಮ ಆಟ, ಗಳಿಸಿದ ಗೋಲುಗಳ ಸಂಖ್ಯೆಯಿಂದ ಮಾತ್ರ ಧ್ಯಾನಚಂದ್ ಆಗಿ ರೂಪುಗೊಳ್ಳಲಿಲ್ಲ. ಅದರಾಚೆಗೆ ಇದ್ದ ಅವರ ವ್ಯಕ್ತಿತ್ವ, ಜೀವನ ಶೈಲಿಯ ಪಾತ್ರವೂ ಬಹಳ ದೊಡ್ಡದು. ಈಗಿನ ಕ್ರೀಡಾಪಟುಗಳಿಗೆ ಸಾಧನೆ ಮಾಡಿದರೆ ಕೋಟಿಗಟ್ಟಲೇ ಹಣ, ಉದ್ಯೋಗಗಳು ಲಭಿಸುತ್ತವೆ. ಆ ಕಾಲದಲ್ಲಿ ಏನೂ ಇರಲಿಲ್ಲ. ಹಾಗೆಂದು ಅಪ್ಪನಾಗಲೀ, ಚಿಕ್ಕಪ್ಪ ರೂಪ್ ಸಿಂಗ್ ಅವರಾಗಲೀ ತಮ್ಮತನವನ್ನು ಬಿಟ್ಟುಕೊಟ್ಟವರಲ್ಲ. ಪ್ರಶಸ್ತಿ, ಪುರಸ್ಕಾರ, ಉದ್ಯೋಗ, ಹಣಕ್ಕಾಗಿ ಯಾರ ಮುಂದೆಯೂ ಹೋಗಿ ನಿಲ್ಲಲಿಲ್ಲ. ಬರ್ಲಿನ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದಾಗ ಜರ್ಮನಿಯ ಅಡಾಲ್ಫ್ ಹಿಟ್ಲರ್ ಕೊಟ್ಟ ಆಹ್ವಾನವನ್ನೇ ಸಾರಾಸಗಟಾಗಿ ತಿರಸ್ಕರಿದ್ದ ಅವರ ಸ್ವಾಭಿಮಾನ ಮತ್ತು ದೇಶಾಭಿಮಾನಕ್ಕೆ ಸಾಟಿಯುಂಟೆ. ಅವತ್ತು ಮನಸ್ಸು ಮಾಡಿದ್ದರೆ ಜರ್ಮನಿಯ ಸೇನೆಯ ದೊಡ್ಡ ಹುದ್ದೆ, ಅಲ್ಲಿಯ ನಾಗರಿಕತ್ವ ಪಡೆದು ಇದ್ದುಬಿಡಬಹುದಿತ್ತು. ಆದರೆ ಹಾಗೆ ಮಾಡಿದ್ದರೆ ಬಹುಶಃ ಧ್ಯಾನಚಂದ್ ಅಮರರಾಗುತ್ತಿರಲಿಲ್ಲ.

ಮೀರತ್‌ನಲ್ಲಿ ಸೇನೆಯಿಂದ ನಿವೃತ್ತರಾದ ನಂತರ ನಮ್ಮ ಕುಟುಂಬ ಝಾನ್ಸಿಯಲ್ಲಿ ಕೆಲಕಾಲ ನೆಲೆಸಿತ್ತು. ಆದರೆ ನೌಕರಿಗಾಗಿ ಅವರು ನಮ್ಮನ್ನೆಲ್ಲ ಕರೆದುಕೊಂಡು ದೆಹಲಿಗೆ ಬಂದು ನೆಲೆಸಿದರು. ನಾವು ಚಿಕ್ಕವರಾಗಿದ್ದ ಕಾಲದಲ್ಲಿ ದೇಶದಲ್ಲಿ ಹಾಕಿ ಕ್ರೀಡೆ ಜನಪ್ರಿಯವಾಗಿತ್ತು. ನಮಗೂ ಆಡುವ ಆಸೆ ಇತ್ತು. ಆದರೆ, ನಾನಾಗಲೀ, ಸಹೋದರ ರಾಜಕುಮಾರನಾಗಲೀ ಹಾಕಿ ಆಡುವುದು ಅಪ್ಪನಿಗೆ ಇಷ್ಟವಿರಲಿಲ್ಲ. ಆದರೆ ವಿಧಿಲಿಖಿತ ಬೇರೆಯೇ ಇತ್ತು. ನಾವಿಬ್ಬರೂ ಅವರಿಗೆ ಗೊತ್ತಿಲ್ಲದಂತೆ ಹಾಕಿಪಟುಗಳಾಗಿ ರೂಪುಗೊಂಡೆವು. ಅಣ್ಣ ನನಗಿಂತಲೂ ಚೆನ್ನಾಗಿ ಆಡುತ್ತಿದ್ದ. ಆದರೆ, ಅಪ್ಪ, ಚಿಕ್ಕಪ್ಪ ಇಬ್ಬರೂ ಹಾಕಿ ಆಯ್ಕೆ ಸಮಿತಿಯಲ್ಲಿದ್ದರು. ಸ್ವಜನಪಕ್ಷಪಾತಕ್ಕೆ ಅವಕಾಶ ಕೊಡದೇ ನಮ್ಮಷ್ಟೇ ಚೆನ್ನಾಗಿ ಆಡುತ್ತಿದ್ದ ಬೇರೆ ಮಕ್ಕಳಿಗೆ ಮಣೆ ಹಾಕುತ್ತಿದ್ದರು. ಅದರಿಂದಾಗಿ ನಾವು ಬಂಗಾಳ ಹಾಕಿ ತಂಡದಲ್ಲಿ ಆಡಿದೆವು. ನಮ್ಮ ಪಂದ್ಯಗಳನ್ನು ನೋಡಲು ಅವರು ಒಮ್ಮೆಯೂ ಬರಲಿಲ್ಲ. ನಾನು ಏಷ್ಯನ್ ಗೇಮ್ಸ್‌ನಲ್ಲಿ ಆಡಿದಾಗಲೂ ಅವರು ಪಂದ್ಯ ನೋಡಿರಲಿಲ್ಲ. ಆದರೆ ಒಂದು ಸಲ ಬೆಂಗಳೂರಿನಲ್ಲಿ ನಡೆದಿದ್ದ ರಾಷ್ಟ್ರೀಯ ಟೂರ್ನಿಯಲ್ಲಿ ಆಡಿದ್ದೆವು. ಆ ಟೂರ್ನಿಗೆ ಆಯೋಜಕರು ಅಪ್ಪ ಮತ್ತು ಚಿಕ್ಕಪ್ಪನನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಿದ್ದರು. ಆಗ ಪತ್ರಕರ್ತರು, ಮಗನ ಆಟದ ಬಗ್ಗೆ ಏನು ಹೇಳುತ್ತೀರಿ ಎಂದು ಕೇಳಿದ್ದರು. ಅದಕ್ಕೆ ಅವರು, 'ಹಾಕಿಯಲ್ಲಿ ಅವರು ಕಲಿಯುವುದು ಇನ್ನೂ ಬಹಳಷ್ಟಿದೆ' ಎಂದಿದ್ದರು.

ಮೇಜರ್ ಧ್ಯಾನಚಂದ್

ವೈಯಕ್ತಿಕ ಜೀವನದಲ್ಲಿ ಸಂಕಷ್ಟ ಎದುರಾದಾಗಲೂ ಅವರೂ ಬಾಗಿದವರಲ್ಲ. ನನಗಿನ್ನೂ ನೆನಪಿದೆ. ಅವರಿಗೆ ಕ್ರೀಡಾಕೋಟಾದಲ್ಲಿ ಪೆಟ್ರೋಲ್ ಬಂಕ್, ಗ್ಯಾಸ್ ಏಜನ್ಸಿ ಸಿಗುವುದಿತ್ತು. ನಾನೇ ಅರ್ಜಿ ನಮೂನೆಯನ್ನು ತುಂಬಿ ಅವರ ಮುಂದೆ ಸಹಿ ಮಾಡಲು ಇಟ್ಟೆ. ಏನಿದು ಎಂದು ಕೇಳಿದರು. ವಿವರಿಸಿದೆ. 'ನಾನು ಅವರ (ಸರ್ಕಾರ)ಬಳಿ ಭಿಕ್ಷೆ ಬೇಡಬೇಕಾ. ನಾನು ಅರ್ಹನಾಗಿದ್ದರೆ ಕೊಡಲಿ, ಇಲ್ಲಾ ಬಿಡಲಿ' ಎಂದು ಗುಡುಗಿದ್ದರು. ನಾನು ಅರ್ಜಿಯನ್ನು ಹರಿದು ಹಾಕಿದ್ದೆ. ಸಹೋದರಿಯ ಮದುವೆಯ ಸಂದರ್ಭದಲ್ಲಿ ಹಣದ ಕೊರತೆಯಾದಾಗಲೂ ಪರರ ಬಳಿ ಕೈಯೊಡ್ಡಲಿಲ್ಲ. ತಮ್ಮ ಆಟಕ್ಕಾಗಿ ಲಭಿಸಿದ್ದ ಕಾಣಿಕೆಯನ್ನೇ ಮಾರಿದ್ದರು.

ಇಲ್ಲಿ ನನ್ನ ಚಿಕ್ಕಪ್ಪ ಕ್ಯಾಪ್ಟನ್ ರೂಪ್ ಸಿಂಗ್ ಬಗ್ಗೆ ಹೇಳಲೇಬೇಕು. ಅವರು ಕೂಡ ಧ್ಯಾನಚಂದ್ ಅವರೊಂದಿಗೆ ಎರಡು ಒಲಿಂಪಿಕ್ ಚಿನ್ನದ ಪದಕ ವಿಜೇತರು. ಗ್ವಾಲಿಯರ್‌ನ ಮಹಾರಾಜರ ಸೇನೆಯಲ್ಲಿದ್ದವರು. ಆದರೆ ಜೀವನದುದ್ದಕ್ಕೂ ಎರಡು ಕೋಣೆಗಳಿರುವ ಬಾಡಿಗೆ ಮನೆಯಲ್ಲಿ ಕುಟುಂಬದೊಂದಿಗೆ ಜೀವನ ಸವೆಸಿದರು. ಅವರು ಕ್ಷಯರೋಗಕ್ಕೆ ತುತ್ತಾದಾಗ ಚಿಕಿತ್ಸೆಗಾಗಿ ಧ್ಯಾನಚಂದ್ ಅವರು ಸಹಾಯಾರ್ಥ ಪಂದ್ಯವಾಡಿ ದೇಣಿಗೆ ಸಂಗ್ರಹಿಸಿದರು. 1972ರಲ್ಲಿ ಮ್ಯೂನಿಚ್‌ನಲ್ಲಿರುವ ರಸ್ತೆಯೊಂದಕ್ಕೆ ರೂಪ್ ಸಿಂಗ್ ಅವರ ಹೆಸರು ಇಡಲಾಗಿದೆ. ಆದರೆ ಆ ಕಾಲದಲ್ಲಿ ನಮ್ಮ ಸರ್ಕಾರ, ಸಂಸ್ಥೆಗಳು ಅವರಿಗೆ ಒಂದು ಮನೆಯನ್ನೂ ಕೊಡದಿರುವುದು ನಾಚಿಕೆಗೇಡಿನ ಸಂಗತಿ.

ಇಂದಿನ ಮಕ್ಕಳಿಗೆ ಆ ರೀತಿಯಾಗಬಾರದು. ಕ್ರೀಡಾಪಟುಗಳಿಗೆ ಒಳ್ಳೆಯ ಜೀವನ ಸಿಗಬೇಕು. ಸಮಾಜ, ದೇಶಗಳು ಗೌರವಿಸಬೇಕು. ಆಟಗಾರರೂ ಅಷ್ಟೇ. ತಮಗೆ ಸಿಕ್ಕ ಸವಲತ್ತುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಧ್ಯಾನಚಂದ್ ಅವರಂತೆ ಹಾಕಿ ಆಟಗಾರನಾಗಿ ಬೆಳೆಯಬೇಕು. ಅದರೊಂದಿಗೆ ಸ್ವಾಭಿಮಾನಿಯಾಗಿ, ದೇಶಪ್ರೇಮಿಯಾಗಿಯೂ ರೂಪುಗೊಳ್ಳಬೇಕು. ಏಕೆಂದರೆ ನನ್ನ ತಂದೆ ನಿಜವಾದ ಭಾರತರತ್ನ.

(ಲೇಖಕರು: ಧ್ಯಾನಚಂದ್ ಅವರ ಪುತ್ರ, ವಿಶ್ವ ಹಾಕಿ ಟೂರ್ನಿಯಲ್ಲಿ ಚಿನ್ನದ ಪದಕ ವಿಜೇತರು)

ನಿರೂಪಣೆ: ಜಿ.ಡಿ.

ಕನ್ನಡದಲ್ಲಿ 'ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್'

'ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್' ಕನ್ನಡದ ಕ್ರೀಡಾಪ್ರೇಮಿಗಳನ್ನು ಓದಲು ಹಚ್ಚುವಂತಹ ಕೃತಿ. ಹಲವು ದೇಶಗಳಲ್ಲಿ ಅಭಿಮಾನಿಗಳನ್ನು ಸಂಪಾದಿಸಿರುವ ಧ್ಯಾನಚಂದ್ ಅವರ ಬಾಲ್ಯ, ಕ್ರೀಡಾಜೀವನ, ವೃತ್ತಿಜೀವನ ಮತ್ತು ಕೊನೆಯ ಹಂತದಲ್ಲಿ ಅನುಭವಿಸಿದ ಕಷ್ಟನಷ್ಟಗಳನ್ನು ಮನೋಜ್ಞವಾಗಿ ವಿವರಿಸಿರುವ ಪುಸ್ತಕ ಇದು. ಗಿಂದೂ ಟೋರಾ ಎಂಬ ಭಾರತೀಯ ಜನಪದ ಕ್ರೀಡೆಯೇ ಹಾಕಿ ಆಟದ ಹುಟ್ಟಿಗೆ ಕಾರಣವಾಗಿರಬಹುದು ಎಂಬ ಹೊಳಹು ನೀಡುತ್ತ ಧ್ಯಾನಚಂದ್ ಜೀವನಗಾಥೆಯೊಳಕ್ಕೆ ಕರೆದೊಯ್ಯುವ ಲೇಖಕರ ಬರವಣಿಗೆ ಗಮನ ಸೆಳೆಯುತ್ತದೆ. ಜಾರ್ಖಂಡ್‌ನ ರಾಂಚಿಯಲ್ಲಿ ಪ್ರಾಧ್ಯಾಪಕರಾಗಿರುವ, ಮೂಲತಃ ಹುಬ್ಬಳ್ಳಿಯವರಾದ ಡಾ. ನಾಗ ಎಚ್. ಹುಬ್ಳಿ ಅವರ ಕ್ರೀಡಾಸಕ್ತಿ ಮತ್ತು ಧ್ಯಾನಚಂದ್ ಬಗೆಗಿನ ಅಭಿಮಾನ ಈ ಕೃತಿಯಲ್ಲಿ ಕಾಣುತ್ತದೆ. ಧ್ಯಾನಚಂದ್ ಆಡಿದ ಪಂದ್ಯಗಳು, ಜೀವನದ ಒಳನೋಟಗಳ ಕುರಿತ ಅಧ್ಯಯನವೂ ಒಡಮೂಡಿದೆ. ಒಟ್ಟಾರೆ ಕ್ರೀಡಾ ಕೃತಿಗಳ ಬರ ಎದುರಿಸುತ್ತಿರುವ ಕನ್ನಡ ಭಾಷೆಗೆ ಒಂದು ಉತ್ತಮ ಕೊಡುಗೆ ಇದಾಗಿದೆ. ❖



ಪು: 216
₹220

'ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್'
ಲೇ: ಡಾ. ನಾಗ ಎಚ್. ಹುಬ್ಳಿ
ಪ್ರ: ವಿಕ್ರಂ ಪ್ರಕಾಶನ

ಇದು ಅಮೃತ ಖಂಜಿರ!

ಅವಿನಾಶ್ ಬಿ.

ಶ್ರದ್ಧೆ, ಪರಿಶ್ರಮ ಮತ್ತು ಛಲ–ಇವು ಮೇಳೈಸಿದರೆ ಕಲಾಮಾತೆ ಒಲಿಯುತ್ತಾಳೆ. ಈ ಸೇವ್ಯ-ಸೇವಕ ಭಾವದಿಂದಲಷ್ಟೇ ಕಲೆ ಮತ್ತು ಕಲಾವಿದ ಇಬ್ಬರೂ ಔನ್ನತ್ಯಕ್ಕೇರಬಲ್ಲರು. ಈ ಮಾತಿಗೆ ಖಚಿತ ಉದಾಹರಣೆಯೆಂದರೆ, ಖಂಜಿರ ಎಂಬ ಪುಟ್ಟ ವಾದ್ಯವು ಸಂಗೀತ ಕಛೇರಿಗಳಲ್ಲಿ ಪ್ರಧಾನ ಸ್ಥಾನಕ್ಕೇರಿದ ಬಗೆ. ಇದರ ಹಿಂದೆ ಅದೆಷ್ಟೋ ಸಂಗೀತ ವಿದ್ವಾಂಸರ ಶ್ರಮವಿದೆ. ಈ ಕಾಲದಲ್ಲಿ ಖಂಜಿರವನ್ನು ಒಲಿಸಿಕೊಂಡು, ಅಳಿಯುತ್ತಿರುವ ವಾದ್ಯನಾದವೊಂದರ ಝೇಂಕಾರವನ್ನು ಮೆರೆಸಿದ ತೀರಾ ಅಪರೂಪದ ಕಲಾವಿದರಲ್ಲಿ ಪ್ರಮುಖ ಹೆಸರು ಬೆಂಗಳೂರಿನ ಸಂಗೀತ ವಿದ್ವಾನ್ ಅಮೃತ್.

> ಮನ ಕೆರಳಿಸುವ ಆಧುನಿಕತೆಯ ಗದ್ದಲದ ಉಪದ್ವ್ಯಾಪಗಳ ನಡುವೆ, ಮನಶ್ಶಾಂತಿ ನೀಡಬಲ್ಲ, ಮನವರಳಿಸುವ ಕಲೆಯು ಮೊಬೈಲ್ ಫೋನ್‌ನ ಗೀಳು ಬಿಟ್ಟ ಮಕ್ಕಳಿಗಷ್ಟೇ ಒಲಿಯುವ ಕಾಲವಿದು. ಪರಿಶ್ರಮದಿಂದ ಪಕ್ಕ ವಾದ್ಯ 'ಖಂಜಿರ' ಈಗ ಪ್ರಧಾನ ವಾದ್ಯವಾಗಿ ಸಂಗೀತ ಕಛೇರಿಗಳಲ್ಲಿ ಪ್ರಧಾನ ಸ್ಥಾನ ಅಲಂಕರಿಸುತ್ತಿದೆ. ಇದರ ಹಿಂದಿನ ಪರಿಶ್ರಮ, ಶ್ರದ್ಧೆ, ಛಲದ ದಾರಿಯನ್ನು ವಿವರಿಸಿದ್ದಾರೆ ಬೆಂಗಳೂರು ಬಸವನಗುಡಿಯ ಸಂಗೀತ ವಿದ್ವಾಂಸ ಅಮೃತ್ ಖಂಜಿರ.

ಎರಡೂ ಕೈಗಳಲ್ಲಿ ನುಡಿಸುವ ವಾದ್ಯಗಳ ನಾದವನ್ನು ಒಂದೇ ಕೈಯಲ್ಲಿ ಪಡಿಮೂಡಿಸಬಲ್ಲ ಚಾಕಚಕ್ಯತೆಯ ಅಗತ್ಯವಿದೆ ಖಂಜಿರಕ್ಕೆ. ಬಹುತೇಕ ಮೂಲೆಗುಂಪಾಗುತ್ತಿದ್ದ ಖಂಜಿರ ಇದೀಗ ಸಂಗೀತ ಕಛೇರಿಗಳಲ್ಲಿ, ತಾಳ ವಾದ್ಯ ಗೋಷ್ಠಿಗಳಲ್ಲಿ ಕೇಂದ್ರ ಸ್ಥಾನವನ್ನು ಅಲಂಕರಿಸಲು ಸಾಧ್ಯವಾಗುತ್ತಿದೆ ಎಂದರೆ ಅದಕ್ಕೆ ಅಮೃತ್ ಸಹಿತ ಹಲವು ಕಲಾವಿದರ ಕೊಡುಗೆ ಬಹಳಷ್ಟಿದೆ.

ಬೆರಳುಗಳ ಮೂಲಕವೇ ಪವರ್‌ಫುಲ್ ನುಡಿಸಾಣಿಕೆ, ವೇಗದ ನುಡಿತ, ವೈವಿಧ್ಯ ಮತ್ತು ಶಾಸ್ತ್ರೀಯತೆ ಮೇಳೈಸಿ ಈ ವಾದನವು ದೇಶ-ವಿದೇಶದ ಸಂಗೀತಪ್ರಿಯರಲ್ಲಿ ಹುಚ್ಚೆಬ್ಬಿಸುವಂತೆ ಮಾಡಿದವರಲ್ಲಿ ಪ್ರಮುಖರು ಅಮೃತ್. ಆಕಾಶವಾಣಿಯ 'ಎ' ಶ್ರೇಣಿಯ ಮೃದಂಗ ಕಲಾವಿದರಾಗಿದ್ದರೂ, ಅವರು ಖಂಜಿರವಾದಕರೆಂದೇ ಪ್ರಸಿದ್ಧಿ ಪಡೆದಿದ್ದಾರೆ. ಅಷ್ಟೇ ಅಲ್ಲ, ಹಲವಾರು ವಯಲಿನ್ ಕಛೇರಿಗಳನ್ನೂ ನಡೆಸಿಕೊಟ್ಟಿರುವ ಬಹುಮುಖಿ ಪ್ರತಿಭೆ. ಇವರು ಖಂಜಿರದಲ್ಲಿ ಎ ಟಾಪ್ ಶ್ರೇಣಿಯ ಅತಿ ಕಿರಿಯ ಕಲಾವಿದ.

ಕಲೆಯ ಮೇಲಿನ ಒಲವು ಮತ್ತು ಖಂಜಿರವೆಂಬ ಪುಟ್ಟ ತಾಳವಾದ್ಯಕ್ಕೆ ದೊಡ್ಡ ಹೆಸರು ತಂದುಕೊಡಬೇಕೆಂಬ ತುಡಿತ ಎಷ್ಟಿದೆಯೆಂದರೆ, ಅವರು ತಮ್ಮ ಹೆಸರನ್ನೇ ಅಮೃತ್ ಖಂಜಿರ ಎಂದೇ ಬದಲಿಸಿಕೊಂಡಿದ್ದಾರೆ.

ಖಂಜಿರದ ಉಗಮ

ಈ ಪುಟ್ಟ ಚರ್ಮವಾದ್ಯವನ್ನು ಖಂಜಿರ, ಖಂಜರಿ ಎಂದೂ ಹೇಳುತ್ತಾರೆ. 18ನೇ ಶತಮಾನದ ಕೊನೆಯಲ್ಲಿ, ಬಹುಶಃ 1870-80ರ ಸುಮಾರಿಗೆ ಈ ವಾದ್ಯವನ್ನು ಸೃಷ್ಟಿ ಮಾಡಿದವರು ಪುದುಕೋಟ್ಟೈ ಮಾಂಪುಂಡ್ಯ ಪಿಳ್ಳೈ. ಪುದುಕೋಟ್ಟೈ ಸಂಸ್ಥಾನದ ಲೈಟ್ ವಾಚ್‌ಮನ್ ಆಗಿ ಕೆಲಸ ಮಾಡುತ್ತಿದ್ದವರು. ಕತ್ತಲಾದ ತಕ್ಷಣ ಎಣ್ಣೆ ಹಾಕಿ ದೀಪ ಹಚ್ಚುವುದು ಅವರ ಕಾಯಕ. ಆದರೆ ಸಂಗೀತ ಪ್ರಿಯ. ತಪಟ್ಟೆ ಅಥವಾ ಕೈಯಲ್ಲಿ ನುಡಿಸೋ ತಮಟೆಯ ರೀತಿಯ ವಾದ್ಯದಲ್ಲಿ ಒಂದು ಕೈಯಲ್ಲೇ ನುಡಿಸುವ ಪ್ರಾವೀಣ್ಯವನ್ನು ಅವರ ತವಿಲ್ ಗುರುಗಳು ಗಮನಿಸಿ, ವಾದ್ಯವೊಂದನ್ನು ಸಂಶೋಧಿಸಬಾರದೇಕೆ ಎಂದು ಕೇಳಿದ ಪರಿಣಾಮ, ಮಾಂಪುಂಡ್ಯ ಪಿಳ್ಳೈ ಅವರು ಸಾಕಷ್ಟು ಸಂಶೋಧನೆ ಮಾಡಿ, ಈ ಚರ್ಮವಾದ್ಯವನ್ನು ರೂಪಿಸಿದರು. ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಇದರ ನಾದವು ಒಗ್ಗಿಕೊಂಡಿತು.

ಮೃದಂಗದಿಂದ ಖಂಜಿರದತ್ತ

ಖಂಜಿರವನ್ನು ಸೋಲೋ (ಏಕವಾದ್ಯ ಪ್ರದರ್ಶನ) ಮೂಲಕ, ಸಂಗೀತ ಕಛೇರಿಯೊಂದರ ಪ್ರಧಾನ ವಾದ್ಯವಾಗಿ ಬೆಳೆಸಿದ ಅಮೃತ್ ಅವರನ್ನು ಖಂಜಿರ ಎಂಬ ತಾಳವಾದ್ಯವು ಸೆಳೆದುಕೊಂಡ ಬಗೆಯೇ ಅನನ್ಯ.

ವಯಲಿನ್ ವಿದ್ವಾಂಸ ಕೀರ್ತಿಶೇಷ ಬಸವನಗುಡಿ ಜಿ.ನಟರಾಜ್‌ರ ಪುತ್ರ ಅಮೃತ್ ಮೂರೂವರೆ ವಯಸ್ಸಿಗೆ ಹಾಡುಗಾರಿಕೆ, 5ನೇ ವಯಸ್ಸಿಗೆ ವಿ. ಎಂ.ವಾಸುದೇವ ರಾವ್ ಅವರಲ್ಲಿ ಮೃದಂಗಾಭ್ಯಾಸ ಆರಂಭಿಸಿ 7ನೇ ವಯಸ್ಸಿಗೇ ವೇದಿಕೆಗಳಲ್ಲಿ ಪ್ರದರ್ಶನ ನೀಡುವಷ್ಟು ತಯಾರಾಗಿದ್ದರು. ನಂತರ ಮೃದಂಗ ವಿದ್ವಾನ್ ಎ.ವಿ.ಆನಂದ್ ಅವರಲ್ಲಿ ವಿದ್ವತ್ತನ್ನು ಹೆಚ್ಚಿಸಿಕೊಂಡರಾದರೂ, ಮೃದಂಗದ ರಂಗಪ್ರವೇಶಕ್ಕೆ ಮೊದಲು ಖಂಜಿರ ಪಕ್ಕವಾದ್ಯ ಹಿಡಿಯಲಿ ಎಂಬ ಗುರುಗಳ ಒತ್ತಾಸೆಯೊಂದಿಗೆ ಅಮೃತ್ ಅವರ ಖಂಜಿರದ ಬಾಂಧವ್ಯ ಆರಂಭವಾಯಿತು.

ಆ ಸಂದರ್ಭದಲ್ಲಿ ಕಾರೈಕುಡಿ ಮಣಿಯವರು ಹೊರತಂದಿದ್ದ 'ಶ್ರುತಿಲಯ' ಕ್ಯಾಸೆಟ್ ಕೇಳುವ ಹುಚ್ಚು ಬಾಲಕ ಅಮೃತ್‌ಗೆ. ಖಂಜಿರದ ನಾದವು ಅವರನ್ನು ಇನ್ನಿಲ್ಲದಂತೆ ಸೆಳೆದುಕೊಂಡು, ಕ್ಯಾಸೆಟ್ ಪ್ಲೇಯರ್‌ನಲ್ಲಿ ರಿವೈಂಡ್ ಮಾಡಿ, ನಿಲ್ಲಿಸಿ, ಪ್ಲೇ ಮಾಡುತ್ತಾ, ಖಂಜಿರದಲ್ಲಿ ಅಭ್ಯಾಸ ಮಾಡಿ ಏಕಲವ್ಯನ ತೆರನಾಗಿ ಸಾಧನೆ ಮಾಡಿದರು. ನುಡಿಸಿದವರು ಯಾರೆಂದು ತಿಳಿಯದೆಯೇ ಸತತ ಪರಿಶ್ರಮದಿಂದ ಅಭ್ಯಾಸ ಮಾಡಿದರು. 'ಖಂಜಿರ ನುಡಿಸಿದರೆ ಈ ರೀತಿ ನುಡಿಸಬೇಕು' ಎಂದು ನಿಶ್ಚಯಿಸಿದ ಈ ಬಾಲಕ. ಪ್ರಖ್ಯಾತ ಖಂಜಿರ ವಾದಕ, ಚೆನ್ನೈನ ವಿದ್ವಾನ್ ಜಿ.ಹರಿಶಂಕರ್ ಅವರೇ ಖಂಜಿರ ನುಡಿಸಿದ್ದೆಂಬ ವಿಷಯ ತಿಳಿಯುತ್ತಲೇ, ಆ ಗುರುಗಳನ್ನು ಅರಸಿ ಹೊರಟರು ಅಮೃತ್.

ಬೆಂಗಳೂರಿನಿಂದ ಹುಡುಕಿಕೊಂಡು ಬಂದು, ಹಲವು ಬಾರಿ ವಿನಂತಿಸಿದ ಬಳಿಕ ಶಿಷ್ಯನಾಗಿಸಿಕೊಳ್ಳಲು ಒಪ್ಪಿದ್ದರು ಹರಿಶಂಕರ್. ಆದರೆ ಈ ಯುವಕನ ಸಾಧನೆ ನೋಡಿ ತಮ್ಮಲ್ಲಿನ ವಿದ್ವತ್ತನ್ನೆಲ್ಲ ಹಸ್ತಾಂತರಿಸಿಬಿಟ್ಟಿದ್ದರವರು. ಖಂಜಿರ ಕಲಿಕೆಗಾಗಿಯೇ ಕೇಂದ್ರ ಸರ್ಕಾರದಿಂದ ಸ್ಕಾಲರ್‌ಶಿಪ್ ಕೂಡ ಸಿಕ್ಕಿತು. ಅದಾಗಲೇ ಖಂಜಿರ ನುಡಿಸುತ್ತಿದ್ದರೂ, ಸೊಲ್ಲುಗಳು, ಉರುಟುಗಳನ್ನು ಪ್ರಯೋಗಿಸಬೇಕಿದ್ದರೆ ಅದಕ್ಕೆ ವಿಶೇಷ ಪಾಠ ಬೇಕೇಬೇಕು. ಆದರೆ, ಕಲಿಕಾ ಹಂತದಲ್ಲೇ ಗುರು ಹರಿಶಂಕರ್ ಅವರು ಇಹಲೋಕ ತ್ಯಜಿಸಿದಾಗ, ಅಲ್ಲೊಂದು ನಿರ್ವಾತ ಸೃಷ್ಟಿಯಾಗಿತ್ತು. ಅಷ್ಟರಲ್ಲಾಗಲೇ ಅನೂಹ್ಯ ವೇಗದಲ್ಲಿ ಅಂದರೆ ಕೇವಲ ಮೂರೂವರೆ ವರ್ಷಗಳಲ್ಲಿಯೇ ತೀವ್ರ ಪರಿಶ್ರಮದ ಮೂಲಕ ಖಂಜಿರದ ನುಡಿ-ನಡೆಗಳ ವೈವಿಧ್ಯವನ್ನು ತಮ್ಮದಾಗಿಸಿಕೊಂಡಿದ್ದರು ಅಮೃತ್.

ಹರಿಶಂಕರ್ ಅವರದು ಕ್ಲಿಷ್ಟವಾದ ಪಾಠಾಂತರ. ಪೂರ್ಣ ಗಮನ ಇರಬೇಕು. ಅದಕ್ಕೂ ಸಿದ್ಧಪಥ್ಯವಿದೆ ಎಂಬುದು ಗೊತ್ತಾಗಿದ್ದೇ ಅಲ್ಲಿ ಹೋದಮೇಲೆ. ಅಲ್ಲಿಂದ ಶುರು ಮಾಡಿದ್ದೇ 'ತ ಧಿ ತೋಂ ನ' ಆರಂಭಿಕ ಪಾಠ. 'ಅವರು ನನ್ನ ಖಂಜಿರವಾದನದ ದಿಕ್ಕನ್ನು ಪೂರ್ತಿ ಬದಲಿಸಿಬಿಟ್ಟರು. ಖಂಜಿರದ ಬಗ್ಗೆ ನನಗಿದ್ದ ಧೋರಣೆಯನ್ನು ಬದಲಿಸಿಬಿಟ್ಟರು. ಖಂಜಿರ ಕಲಿಸಿದ ಅವರು, ಅದರ ಶಿಖರಕ್ಕೇ ಕೈಹಿಡಿದು ಒಯ್ದರು. ಏಳೆಂಟು ವರ್ಷ ಕೇಳಿಕೊಂಡೇ ಕಲಿತಿದ್ದ ಖಂಜಿರದ ದಿಕ್ಕು ಬದಲಿಸಿದ ಮಹಾನ್ ಗುರುಗಳವರು' ಎಂದು ಸ್ಮರಿಸುತ್ತಾರೆ ಅಮೃತ್.

ವಿದೇಶಿಗರ ಮನ್ನಣೆ

ತವಿಲ್‌ನಂತಹ ತಾರಸ್ಥಾಯಿಯ ವಾದ್ಯದ ಜೊತೆಗಿನ ಜುಗಲ್‌ಬಂದಿಯಲ್ಲಿ ಸುಮಧುರ ಖಂಜಿರವನ್ನೂ ಮೆರೆಸಿದ ಸಂದರ್ಭದಲ್ಲಿ ವಿಶ್ವವಿಖ್ಯಾತ ತವಿಲ್ ವಾದಕ ಎ.ಕೆ.ಪಳನಿವೇಲು ಹಾಗೂ ತಬಲಾ ಮಾಂತ್ರಿಕ ಉಸ್ತಾದ್ ಜಾಕಿರ್ ಹುಸೇನ್ ಶಹಬ್ಬಾಸ್ ಹೇಳಿದ್ದಾರೆಂದರೆ ಅಮೃತ್ ಅವರ ವಾದನ ಸಾಮರ್ಥ್ಯದ ಅರಿವಾದೀತು.

2019ರಲ್ಲಿ ನಡೆದ 'ಗ್ಲೋಬಲ್ ಸಾಯಿ ಸಿಂಫೋನಿ'ಯಲ್ಲಿ ಘಟಾನುಘಟಿಗಳಾದ ಕಾರೈಕುಡಿ ಮಣಿ (ಮೃದಂಗ), ಗಣೇಶ್-ಕುಮರೇಶ್ (ವಯಲಿನ್), ರಾಜೇಶ್ (ಮ್ಯಾಂಡೊಲಿನ್), ಸುರೇಶ್ ವೈದ್ಯನಾಥನ್ (ಘಟಂ), ಶಶಾಂಕ ಸುಬ್ರಹ್ಮಣ್ಯಂ (ಕೊಳಲು), ಪಂ.ದೇಬಶಿಷ್ ಭಟ್ಟಾಚಾರ್ಯ (ಗಿಟಾರ್), ಸುಧಾ ರಘುನಾಥನ್ (ಹಾಡುಗಾರಿಕೆ), ಜರ್ಮನಿಯ ಹೈನರ್ ವಿಬರ್ನಿ, ಸೆನೆಗಲ್‌ನ ಪೇಪ್ ಸಮೋರಿ ಸೆಕ್ (ಆಫ್ರಿಕನ್ ಕಾಂಗೋ), ಮೌರಿಟಾನಿಯಾ ಶೆಯಿಕ್ ಲೇಬ್ಲಾಡ್ ಮುಂತಾದವರೊಂದಿಗೆ ಅಮೃತ್ ಅವರು ಖಂಜಿರವನ್ನೂ ನುಡಿಸುವ ಮೂಲಕ, ಅಂತರರಾಷ್ಟ್ರೀಯ ವೇದಿಕೆಯಲ್ಲಿ ಸೈ ಎನ್ನಿಸಿಕೊಂಡವರು. ಯುಟ್ಯೂಬ್‌ನಲ್ಲಿರುವ ಈ ವಿಡಿಯೊವನ್ನು 41 ಲಕ್ಷಕ್ಕೂ ಹೆಚ್ಚು ಮಂದಿ ವೀಕ್ಷಿಸಿದ್ದಾರೆ.

ಜೋರ್ಡಾನ್‌ನಲ್ಲಿ ಮೆಹಮೆಟ್ ಅಕಟೆ, ರಿಶ್ಲೂ ಲಾಹಿರಿ ಹಾಗೂ ನಾಸಿರ್ ಸಲಾಮೇ ಅವರಿಂದ ಅಲ್ಲಿನ ವಾದ್ಯಗಳ ಜುಗಲ್‌ಬಂದಿ ಕಾರ್ಯಕ್ರಮದಲ್ಲಿ ಅಮೃತ್ ತಮ್ಮ ಖಂಜಿರ ವಾದನ ವೈಖರಿಯಿಂದ ಕಲಾವಿದರನ್ನು, ಪ್ರೇಕ್ಷಕರನ್ನು ನಿಬ್ಬೆರಗಾಗಿಸಿದ್ದರು. ಚಪ್ಪಾಳೆ-ಶಿಳ್ಳೆಗಳಿಂದಲೇ ತುಂಬಿಹೋಗಿತ್ತು ಸಭಾಂಗಣ.

ಜೆರುಸಲೇಂನ ಅಬ್ರೋಸ್ ಕೊಸಿಮೊವ್, ಮಾರ್ಕ್ ಮೋಶಾಯೆವ್, ಅಲೆಕ್ಸ್ ಟೋಬಿಯಸ್, ಆಂಡ್ರೀ ಪಿಕ್ಕಿಯೋನಿ ಜೊತೆಗೆ ಖಂಜಿರದ ತಾಳವಾದ್ಯ ಒಡನಾಟವನ್ನು ಸಂಯೋಜಿಸುವಲ್ಲಿ ಮತ್ತು ಆ ಕಾರ್ಯಕ್ರಮ ಯಶಸ್ವಿಯಾಗಿಸುವುದರಲ್ಲಿ ಅಮೃತ್ ಪಾತ್ರ ಹಿರಿದು. ಇಂಥದ್ದೇ ಅದೆಷ್ಟೋ ಪ್ರದರ್ಶನಗಳ ಮೂಲಕ ಸಂಗೀತಕ್ಕೆ ಎಲ್ಲೆ ಇಲ್ಲ ಎಂಬುದು ಸಾಬೀತಾಗುವುದರೊಂದಿಗೆ, ಹೋದಲ್ಲೆಲ್ಲಾ ಖಂಜಿರ ಕುರಿತ ಉಪನ್ಯಾಸ, ಪ್ರದರ್ಶನಗಳ ಮೂಲಕ ಪುಟ್ಟ ವಾದ್ಯದ ಸಾಧ್ಯತೆಗಳು ಅಪರಿಮಿತ ಎಂಬುದನ್ನು ಲೋಕಮುಖಕ್ಕೆ ತೋರಿಸಿಕೊಟ್ಟವರು ಅಮೃತ್.

ಎಲ್ಲಿ ಕಲಿಯುವುದು?

ಖಂಜಿರ ಕ್ಲಿಷ್ಟ ವಾದ್ಯ ಹೌದು. ಮೃದಂಗ, ಘಟಂ, ತವಿಲ್ - ಇವುಗಳಿಗಿಂತ ಭಿನ್ನ. ಇದನ್ನು ಕಲಿಯಲು ಆಸಕ್ತಿ ಇರುವವರಿಗಾಗಿಯೇ ಪಠ್ಯ ಸಿದ್ಧಪಡಿಸಿ, ವ್ಯವಸ್ಥಿತವಾದ ಪ್ರೋಗ್ರಾಮಿಂಗ್ ಮತ್ತು ಲರ್ನಿಂಗ್ ಮೆಥಡಾಲಜಿ ಮೂಲಕ ಆನ್‌ಲೈನ್‌ನಲ್ಲಿ ಲಭ್ಯವಿರುವ ಕೋರ್ಸ್ ಒಂದನ್ನು ಆರಂಭಿಸಿದ್ದಾರೆ ಅಮೃತ್. ಇದು ಲಾಕ್‌ಡೌನ್ ಕಾಲದಲ್ಲಿ ಅವರು ಮಾಡಿದ 'ಸಮಯದ ಸದುಪಯೋಗ'. ಖಂಜಿರ ಕಲಿಕಾಸಕ್ತರಿಗೆ ಇದು ಅತ್ಯುತ್ತಮ ಆಯ್ಕೆ. ಆದರೆ ಸತತ ಪರಿಶ್ರಮ ಬೇಕೇಬೇಕು ಎನ್ನುತ್ತಾರೆ ಅಮೃತ್. ಆಸಕ್ತಿ ತೋರಿ ಬಂದು ಶಿಷ್ಯರಾದವರಿಗೆ ಮನೆಯಲ್ಲೇ ಅವರು ಪಾಠ ಹೇಳಿಕೊಡುತ್ತಿದ್ದಾರೆ.

ಕಲೆಯಿಂದಲ್ಲವೇ ಕಲಾವಿದ...

'ಕಲೆಯಿಂದ ಕಲಾವಿದ. ಕಲೆಯ ಸಾಧ್ಯತೆಗಳನ್ನೆಲ್ಲ ಅವಲೋಕಿಸಿ, ತಮಗೆ ಹೆಸರು ತಂದುಕೊಟ್ಟ ವಾದ್ಯಕ್ಕೂ ಹೆಸರು ತಂದುಕೊಡುವುದು ಅವನ ಕರ್ತವ್ಯ. ಜನಮಾನಸದಿಂದ ದೂರವಾಗುವಂತಿದ್ದ ವಾದ್ಯವನ್ನು ಪೋಷಿಸಿಕೊಂಡು ಹೋಗುವುದು, ಮುಂದಿನ ಪೀಳಿಗೆಗೆ ದಾಟಿಸುವುದು ಕಲಾವಿದನ ಜವಾಬ್ದಾರಿ' ಎನ್ನುತ್ತಾರೆ ಅಮೃತ್ ಖಂಜಿರ. ಮೂರೂವರೆ ದಶಕಗಳಲ್ಲಿ ಅವರು ದೇಶದ ಎಲ್ಲ ಪ್ರಮುಖ ಸಂಗೀತೋತ್ಸವಗಳು, ಆಕಾಶವಾಣಿ, ದೂರದರ್ಶನ, ಸಂಗೀತ ಸಭಾಗಳಲ್ಲಿ ಸಂಗೀತ ಕ್ಷೇತ್ರದ ಬಹುತೇಕ ಹಿರಿಯರಿಗೆ ಮೃದಂಗಕ್ಕೆ ಸಾಥಿಯಾಗಿದ್ದಾರೆ ಎಂಬುದು ಬಹುತೇಕರಿಗೆ ತಿಳಿದಿಲ್ಲ. ಕಾರಣ, ಅವರು ಖಂಜಿರದಲ್ಲಿ ಮಾಡಿದ ಸಾಧನೆ.

ವೀಣೆ ಶೇಷಣ್ಣ, ಪಿಟೀಲು ಚೌಡಯ್ಯ, ಕದ್ರಿ ಗೋಪಾಲನಾಥ್ (ಸ್ಯಾಕ್ಸೊಫೋನ್), ಜಾಕಿರ್ ಹುಸೇನ್ (ತಬಲ), ಡಾ.ರಮಣಿ (ಕೊಳಲು), ಕಾರೈಕುಡಿ ಮಣಿ- ಪಾಲ್ಘಾಟ್ ಮಣಿ (ಮೃದಂಗ), ಮಂಜುನಾಥ್ ಹಾಗೂ ವಿಕ್ಕು ವಿನಾಯಕರಾಮ್ (ಘಟಂ), ರವಿಶಂಕರ್ (ಸಿತಾರ್), ಶ್ರೀನಿವಾಸ್ (ಮ್ಯಾಂಡೊಲಿನ್), ಕನ್ಯಾಕುಮಾರಿ (ವಯಲಿನ್) ಮುಂತಾದವರೆಲ್ಲರೂ ವಾದ್ಯದ ಸಾಧ್ಯತೆಗಳನ್ನು ಸಂಶೋಧಿಸುತ್ತಾ ಹೋದರು ಮತ್ತು ಆ ವಾದ್ಯಗಳನ್ನೂ ಜಗತ್ಪ್ರಸಿದ್ಧವಾಗಿಸಿದರು. ಸಿದ್ಧಿಯಿಂದ ಪ್ರಸಿದ್ಧಿ ಪ್ರಾಪ್ತಿಯಾಯಿತು. ಅದೇ ಹಾದಿಯಲ್ಲಿ ಖಂಜಿರದಲ್ಲಿ ಹೆಸರು ಮಾಡುತ್ತಿದ್ದಾರೆ ಅಮೃತ್.

ಸೋಲೊ ಕಛೇರಿ

ಸಂಗೀತ ಕಛೇರಿಗಳಲ್ಲಿ ಪಕ್ಕವಾದ್ಯವಾಗಿದ್ದ ಖಂಜಿರಕ್ಕೆ ಪ್ರಧಾನ ತಾಳವಾದ್ಯದ ಸ್ಥಾನ ನೀಡಿ, ಏಕಮಾತ್ರ ತಾಳವಾದ್ಯದ ಪ್ರತ್ಯೇಕ ಕಛೇರಿಯನ್ನೇ ನುಡಿಸಿ ಸಾಧಿಸಿ ತೋರಿಸಿದವರು ಅಮೃತ್. ಫ್ಯೂಶನ್ ಸಂಗೀತದಲ್ಲಿ ಖಂಜಿರವನ್ನು ಅನ್ಯರು ಬಳಸಿದ್ದಾರಾದರೂ, ಶಾಸ್ತ್ರೀಯ ಸಂಗೀತದಲ್ಲಿ ಖಂಜಿರದ ಸೋಲೋ ಕಛೇರಿಯಲ್ಲಿ ಸದ್ಯ ಅಮೃತ್ ಹೆಸರು ಹೆಚ್ಚು ಕೇಳಿಬರುತ್ತಿದೆ.

ಎರಡು ದಶಕಗಳ ಕಾಲ ಕಾರೈಕುಡಿ ಆರ್.ಮಣಿ ಅವರ 'ಶ್ರುತಿಲಯ' ತಾಳವಾದ್ಯ ಸಮೂಹದಲ್ಲಿ ಪ್ರಮುಖ ಸದಸ್ಯರಾಗಿ ಖಂಜಿರವನ್ನು ಮೆರೆಸಿದರಲ್ಲದೆ, ಜಾಗತಿಕ ಸಿಂಫೋನಿಯಲ್ಲಿ ಸೋಲೋ ಕಲಾವಿದರಾಗಿ ಜರ್ಮನಿ, ಚೀನಾ, ಮೆಕ್ಸಿಕೊ, ಜೆರುಸಲೇಂ, ಓಹಿಯೋ, ಬಾಸ್ಟನ್, ಅರಿಜೋನಾಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಆರ್ಯಭಟ ಯುವ ಪ್ರಶಸ್ತಿ, ಖಂಜಿರ ಪ್ರವೀಣ, ಅನನ್ಯ ಯುವ ಪುರಸ್ಕಾರ, ಸಲ್ಲರಿ ಗಾನ ಲಯ ವಿಟಗಾರ, ಯುವ ಕಲಾ ಭಾರತಿ, ಲಯ ಪ್ರತಿಭಾಮಣಿ, ನಾದ ಜ್ಯೋತಿ ಪುರಸ್ಕಾರ, ಗುರು ಕಲಾಶ್ರೀ, ಸತ್ಯಶ್ರೀ, ಲಲಿತ ಕಲಾ ಸುಮ ಮುಂತಾದ ಬಿರುದು-ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ರೂಪಾಂತರಿ ಮಾಯಾ ಚೌಕ

ಇಲ್ಲಿ ಕೊಟ್ಟಿರುವ ಮಾಯಾಚೌಕ ವಿಶಿಷ್ಟವಾಗಿದೆ. ಏಕೆಂದರೆ ಮೊದಲ ಮಾಯಾಚೌಕದ ಎಲ್ಲಾ ಸಂಖ್ಯೆಗಳನ್ನು ಅಕ್ಷರದಲ್ಲಿ ಬರೆದು ಆ ಅಕ್ಷರಗಳನ್ನೇ ಎಣಿಸಿ ಮತ್ತೆ ಸಂಖ್ಯೆ ಬರೆದರೆ ಅದೂ ಒಂದು ಮಾಯಾಚೌಕ ಆಗುತ್ತದೆ. ಇದು ಒಂದು ರೂಪಾಂತರಿ ಮಾಯಾಚೌಕ.

5	22	18	= 45
28	15	2	= 45
12	8	25	= 45
45 45	45	45	45

ಇದನ್ನೇ ಅಕ್ಷರಗಳಲ್ಲಿ ಬರೆದಾಗ

Five - twenty two - eighteen
Twenty eight - fifteen - two
Twelve - eight - twenty five

ಈ ಅಕ್ಷರ ಎಣಿಸಿ ಸಂಖ್ಯೆಯಲ್ಲಿ ಬರೆದಾಗ

4	9	8	= 21
11	7	3	= 21
6	5	10	= 21
21 21	21	21	21

ಶಬ್ದಗಳೊಡನೆ ಸರಸ



ಇಲ್ಲಿರುವ ದರ ಎಂಬ ಪದಕ್ಕೆ ಅದರ ಸುತ್ತಲೂ ಇರುವ ಚಿಕ್ಕ ವೃತ್ತದಲ್ಲಿ ಒಂದೊಂದು ಅಕ್ಷರ ತುಂಬಿ ದರ ಎಂಬ ಪದದಿಂದ ಅಂತ್ಯವಾಗುವ 8 ಪದಗಳನ್ನು ರಚಿಸಬಲ್ಲಿರಾ?
ಉದಾ:- ಕಂದರ, ಚಾದರ.

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಿರಿ

1. Sale = ________
2. Read = ________
3. Meal = ________
4. Rate = ________
5. Lime = ________
6. Deal = ________
7. Hate = ________
8. Stop = ________
9. Iran = ________
10. Name = ________

ಟ್ವೆಂಟಿ – 20 ಮ್ಯಾಚ್

ಎಡಭಾಗದ ಪಡೆನುಡಿಗಳಿಗೆ ಬಲಭಾಗದ ಅರ್ಥ ಹೊಂದಿಸಿರಿ

1. ಕಾಲಿಗೆ ಬುದ್ಧಿ ಹೇಳು	A ಗೌರವಸ್ಥ
2. ಎಂಜಲಿಗೆ ಕೈಯೊಡ್ಡು	B ಸುಲಭ
3. ಎಣ್ಣೆ ಸೀಗೆಕಾಯಿ	C ಮೋಸಮಾಡು
4. ಏಳು ಕೆರೆ ನೀರು ಕುಡಿದಂವ	D ಗರ್ವ ತುಂಬು
5. ಕಾಲುಹಿಡಿ	E ಬದ್ಧ ವೈರತ್ವ
6. ಕಿವಿ ನಿಗುರು	F ಅಧೀನನಾಗು
7. ಕಿವಿ ತುಂಬು	G ಅನುಭವಶಾಲಿ
8. ಕುರಿ ಕೋಣ ಬೀಳು	H ಕಾಟ ಕೊಡುವವನು
9. ಒಂದು ಕೈ ನೋಡು	I ಓಡಿಹೋಗು
10. ಕೈಜಾರು	J ಶಕ್ತಿ ಪ್ರದರ್ಶಿಸು
11. ಚಪ್ಪಡಿ ಎಳೆ	K ಬೇಡಿಕೊಳ್ಳು
12. ತೂಕದ ವ್ಯಕ್ತಿ	L ಸಹಾಯ
13. ದಿವಾಳಿ ಏಳು	M ಕೇಳುವುದಕ್ಕೆ ಆತುರ
14. ದಿನ ತಳ್ಳು	N ಸಮಯ ಕಳೆ
15. ನಕ್ಷತ್ರಿಕ	O ಹಂಗಿಗೆ ಒಳಗಾಗು
16. ನಾಮ ಹಾಕು	P ಎಲ್ಲವನ್ನೂ ಕಳೆದುಕೊಳ್ಳುವ
17. ನೀರು ಕುಡಿದ ಹಾಗೆ	Q ಚಾಡಿ ಹೇಳು
18. ನೆತ್ತಿಗೇರು	R ಬೇರೆಯವರ ವಶವಾಗು
19. ಬಗಲಿಗೆ ಬೀಳು	S ನಾಶಮಾಡು
20. ಬೆನ್ನು ಬಲ	T ಬಹಳ ಪ್ರಯಾಸವಾಗು

ಡಣ್ಣ ಚಿಕ್ಕು ಕೇಶ್ರುಷ್ಣು ಕಥೆಯ

ರಾಣಿ ಅಬ್ಬಕ್ಕ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ರಾಣಿ ಅಬ್ಬಕ್ಕ ತುಳುನಾಡಿನ ಅರಸಿಯಾಗಿದ್ದಳು. ಬಂದರು ನಗರಿ ಉಳ್ಳಾಲ ಅವಳ ರಾಜಧಾನಿಯಾಗಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಈ ರಾಣಿಯದು ಅಗ್ರಪಂಕ್ತಿಯಲ್ಲಿ ನಿಲ್ಲುವ ಹೆಸರು

ಗೋವಾವನ್ನು ಆಕ್ರಮಿಸಿಕೊಂಡಿದ್ದ ಪೋರ್ಚುಗೀಸರು ತಮ್ಮ ಗಮನವನ್ನು ದಕ್ಷಿಣದ ಕರಾವಳಿಗೆ ತಿರುಗಿಸಿದರು. ಅವರ ಕಣ್ಣಿಗೆ ಬಿದ್ದ ಬಂದರುಗಳಲ್ಲಿ ಉಳ್ಳಾಲ ಕೂಡ ಒಂದಾಗಿತ್ತು



ಉಳ್ಳಾಲ ಆ ಕಾಲದಲ್ಲಿ ಪ್ರಮುಖ ಬಂದರಾಗಿತ್ತು. ಮಸಾಲೆ ಸಾಮಗ್ರಿಗಳನ್ನು ರಫ್ತು ಮಾಡುವ ಮುಖ್ಯ ಕೇಂದ್ರವಾಗಿದ್ದ ಈ ಬಂದರಿನ ಮೇಲೆ ಹಿಡಿತ ಸಾಧಿಸಲು ಪೋರ್ಚುಗೀಸರು ಹವಣಿಸುತ್ತಿದ್ದರು

ಉಳ್ಳಾಲದ ಜನರನ್ನು ಎತ್ತಿಕಟ್ಟಿ ತುಳುನಾಡನ್ನು ಸುಲಭವಾಗಿ ಕೈವಶ ಮಾಡಿಕೊಳ್ಳುವ ಪೋರ್ಚುಗೀಸರ ಕುತಂತ್ರ ಫಲ ನೀಡಲಿಲ್ಲ. ಹೀಗಾಗಿ ಅವರು ಯುದ್ಧದಿಂದ ಗೆಲ್ಲಲು ಹಾತೊರೆದರು

ಮಾವ ತಿರುಮಲರಾಯನಿಂದ ಯುದ್ಧ ತಂತ್ರಗಳನ್ನು ಕಲಿತಿದ್ದ ಅಬ್ಬಕ್ಕ ಮುಂಚೂಣಿಯಲ್ಲಿ ನಿಂತು ವೀರಾವೇಶದಿಂದ ಹೋರಾಡಿ ಪೋರ್ಚುಗೀಸ್ ಸೈನ್ಯವನ್ನು ಹಿಮ್ಮೆಟ್ಟಿಸಿದಳು



ತುಳುನಾಡಿನ ಹೆಮ್ಮೆಯ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿದ್ದ ಈ ರಾಣಿಯ ಸವಿನೆನಪಿಗಾಗಿ ಉಳ್ಳಾಲದಲ್ಲಿ ಅವಳ ಪ್ರತಿಮೆಯನ್ನೂ ಸ್ಥಾಪಿಸಲಾಗಿದೆ

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಕರಿ 2. ಕುಲ 3. ಸರಿ 4. ಗರ
5. ಬೇರು 6. ಕೊಳ 7. ನರ 8. ಸರ

1.		ವಾ		5.		ಪ್ಪ	
2.		ಟಾ		6.		ಟಿ	
3.		ಗ		7.		ಚೇ	
4.		ತ್ಕ		8.		ಲೂ	

ಮಜ ಮಜ ಮಜಕೂರದ ಆಗಸ್ಟ್ 22ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದ ಹಿಗ್ಗು

1. ಜೀವನ 2. ಗುಜರಿ 3. ನನಗೆ 4. ಸದರಿ
5. ಹರಿಣಿ 6. ಸದಸ್ಯ 7. ಜಗಳ 8. ಮುಕುರು

ಅದಲು ಬದಲು ಕಂಚಿ ಕದಲು ...

1. ನೀ ದಡ್ಡ ಗುರು 2. ಯಾಲಕ್ಕಿ ಹಾರ
3. ಮನೆ ಕೆಲಸ 4. ವಾಯು ವಿಕಾರ

ಟ್ವೆಂಟಿ 20 ಮ್ಯಾಚ್

1-N	2-H	3-F	4-J	5-I
6-D	7-G	8-E	9-P	10-L
11-B	12-A	13-C	14-M	15-Q
16-S	17-K	18-O	19-T	20-R

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಸಮನ್ಯು ಎಚ್. ಎಸ್., ಬೆಂಗಳೂರು

ಗಮಿಕ ಕೆ.ಪಿ., ಶಿಕಾರಿಪುರ

ಸಿಂಚನಾ ನೇಸರ್ಗಿ ಬೈಲಹೊಂಗಲ (ಬೆಳಗಾವಿ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಯೂತ್ ಬಾಕ್ಸಿಂಗ್: ಫೈನಲ್‌ಗೆ ವಿಶ್ವಾಮಿತ್ರ

ನವದೆಹಲಿ (ಪಿಟಿಐ): ವಿಶ್ವ ಯೂತ್ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ವಿಶ್ವಾಮಿತ್ರ ಚೋಂಗ್‌ಥಮ್ ಸೇರಿದಂತೆ ಭಾರತದ ಮೂವರು ದುಬೈನಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

51 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ವಿಶ್ವಾಮಿತ್ರ ಅವರು ಶುಕ್ರವಾರ ನಡೆದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ 5–0ಯಿಂದ ತಜಿಕಿಸ್ತಾನದ ಅಬ್ದುರ್ ಅಖಿವೊಂಜೊಡಾ ಅವರನ್ನು ಪರಾಭವಗೊಳಿಸಿದರು.

ಸುರೇಶ್ ವಿಶ್ವನಾಥ್ (48 ಕೆಜಿ) ಮತ್ತು ಜಯದೀಪ್ ರಾವತ್ (57 ಕೆಜಿ) ಪ್ರಶಸ್ತಿ ಸುತ್ತಿಗೆ ತಲುಪಿದ ಇನ್ನುಳಿದ ಇಬ್ಬರು.

ಸೆಮಿಫೈನಲ್ ಬೌಟ್‌ನಲ್ಲಿ ಸುರೇಶ್ 5–0ಯಿಂದ ಬಹರೇನ್‌ನ ಫ್ಯಾಡೆಲ್ ಸಯೀದ್ ಅವರನ್ನು ಸೋಲಿಸಿದರೆ, ರಾವತ್ 3–2ರಿಂದ ಕಿರ್ಗಿಸ್ತಾನದ ಬೆಕ್ ಬೊಲ್ ಮುರಾಸ್‌ಬೆಕೊವ್ ಎದುರು ಗೆದ್ದು ಮುನ್ನಡೆದರು.

ಮಹಿಳೆಯರ 70 ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿದ್ದ ಲಾಶು ಯಾದವ್ ಮತ್ತು ದೀಪಕ್ (ಪುರುಷರ 70 ಕೆಜಿ) ಸೆಮಿಫೈನಲ್‌ಗಳಲ್ಲಿ ಸೋತು ಕಂಚಿನ ಪದಕಗಳಿಗೆ ಸಮಾಧಾನಪಟ್ಟರು.

ಲಾಶು ಅವರು 0–5ರಿಂದ ಕಜಕ ಸ್ತಾನದ ಗೌಖಾರ್ ಶೈಬೆಕೊವ್ ಎದುರು ಮತ್ತು ದೀಪಕ್ 1–4ರಿಂದ ಕಜಕಸ್ತಾನದ ಅಲಿಯಸ್ಕರೊವ್ ಬಾಕ್‌ಬರ್ಜೆನ್ ಎದುರು ನಿರಾಸೆ ಅನುಭವಿಸಿದರು.

ಟೋಕಿಯೊ ಪ್ಯಾರಾಲಿಂಪಿಕ್ಸ್: ಪ್ರಶಸ್ತಿ ಸುತ್ತಿಗೆ ದಾಪುಗಾಲಿಟ್ಟ ಭಾರತದ ಟಿಟಿ ಆಟಗಾರ್ತಿ

ಭಾವಿನಾ ಚಿನ್ನಕ್ಕೆ ಇನ್ನೊಂದೇ ಹೆಜ್ಜೆ

ಟೋಕಿಯೊ (ಪಿಟಿಐ): ಜನಿಸಿದ 12ನೇ ತಿಂಗಳಿಗೇ ಪೋಲಿಯೊದಿಂದಾಗಿ ಕಾಲುಗಳ ಬಲ ಕಳೆದುಕೊಂಡ ಭಾವಿನಾ ಬೆನ್ ಬದುಕಿನಲ್ಲಿ ಛಲ ಕಳೆದುಕೊಳ್ಳಲಿಲ್ಲ. ಈ ಆತ್ಮವಿಶ್ವಾಸ ಅವರನ್ನು ದೇಶಕ್ಕೆ ಐತಿಹಾಸಿಕ ಚಿನ್ನ ತಂದುಕೊಡುವತ್ತ ದಾಪುಗಾಲಿಡುವಂತೆ ಮಾಡಿದೆ. ಟೋಕಿಯೊ ಪ್ಯಾರಾಲಿಂಪಿಕ್ಸ್‌ನ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ಫೈನಲ್ ತಲುಪಿರುವ ಅವರು ಪ್ರಶಸ್ತಿಗೆ ಇನ್ನೊಂದೇ ಹೆಜ್ಜೆ ದೂರ ಇದ್ದಾರೆ.

34 ವರ್ಷದ ಭಾವಿನಾ ಬೆನ್, ಶನಿವಾರ ನಡೆದ ಮಹಿಳಾ ಸಿಂಗಲ್ಸ್ ಕ್ಲಾಸ್ ಫೋರ್ ವಿಭಾಗದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ 7-11, 11-7, 11-4, 9-11, 11-8ರಿಂದ ಚೀನಾದ ಮಿಯಾವೊ ಜಾಂಗ್ ಅವರನ್ನು ಪರಾಭವಗೊಳಿಸಿದರು.

ವೀಲ್‌ಚೇರ್‌ನಲ್ಲಿ ಆಡುವ ಭಾವಿನಾ, ಸೆಮಿಫೈನಲ್ ಪಂದ್ಯದ ಮೊದಲ ಗೇಮ್ ಕೈಚೆಲ್ಲಿದರು. ಆದರೆ ಪುಟಿದೆದ್ದು ನಂತರದ ಎರಡು ಗೇಮ್‌ಗಳನ್ನು ತಮ್ಮದಾಗಿಸಿಕೊಂಡರು.

ಮೂರನೇ ಗೇಮ್ ಅನ್ನು ಕೇವಲ ನಾಲ್ಕು ನಿಮಿಷ ಗಳಲ್ಲೇ ಜಯಿಸಿದರು. ಆದರೆ ನಾಲ್ಕನೇ ಗೇಮ್‌ನಲ್ಲಿ ತಿರುಗೇಟು ನೀಡಿದ ಜಾಂಗ್ ಗೆದ್ದು ಬೀಗಿದರು. ನಿರ್ಣಾಯಕ ಐದನೇ ಗೇಮ್‌ನಲ್ಲಿ ಭಾವಿನಾ 5–0 ಮುನ್ನಡೆ ಗಳಿಸಿದರು. ಆದರೆ ಪುಟಿದೆದ್ದ ಜಾಂಗ್ ಸ್ಕೋರ್‌ಅನ್ನು 5–9ಕ್ಕೆ ತಂದರು. ಮತ್ತೆ ಸತತ ಮೂರು ಪಾಯಿಂಟ್ಸ್ ಗಳಿಸಿ ಹಿನ್ನಡೆಯನ್ನು 8–9ಕ್ಕೆ ತಗ್ಗಿಸಿಕೊಂಡರು. ಈ ವೇಳೆ ಸ್ವಲ್ಪ ವಿರಾಮ ತೆಗೆದುಕೊಂಡ ಭಾವಿನಾ ಬಳಿಕ ಚೇತೋಹಾರಿ ಆಟವಾಡಿದರು. ಸತತ ಎರಡು ಪಾಯಿಂಟ್ಸ್ ಸಂಗ್ರಹಿಸಿ ಗೇಮ್ ಹಾಗೂ ಪಂದ್ಯ ಜಯಿಸಿ ಸಂಭ್ರಮದಲ್ಲಿ ಮಿಂದೆದ್ದರು.

ಪ್ರಧಾನಿ ಅಭಿನಂದನೆ: ಭಾವಿನಾ ಬೆನ್ ಪಟೇಲ್ ಅವರನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.

ಜಾವೆಲಿನ್ ಥ್ರೊನಲ್ಲಿ ಭಾಟಿ ವಿಫಲ: ಭಾರತದ ಜಾವೆಲಿನ್ ಥ್ರೊ ಸ್ಪರ್ಧಿ ರಂಜೀತ್ ಭಾಟಿ ಪ್ಯಾರಾಲಿಂಪಿಕ್ಸ್‌ನಿಂದ ಹೊರಬಿದ್ದರು. ಪುರುಷರ ಎಫ್57 ವಿಭಾಗದಲ್ಲಿ ಅವರು ಸ್ಪರ್ಧಿಸಿದ್ದರು.

ಭಾವಿನಾಬೆನ್ ಗೆಲುವಿನ ಸಂಭ್ರಮ– ಪಿಟಿಐ ಚಿತ್ರ

ಪ್ರೀಕ್ವಾರ್ಟರ್ ಫೈನಲ್‌ಗೆ ರಾಕೇಶ್

ಭಾರತದ ರಾಕೇಶ್ ಕುಮಾರ್ ಅವರು ಆರ್ಚರಿ ಸ್ಪರ್ಧೆಯಲ್ಲಿ ಪ್ರೀಕ್ವಾರ್ಟರ್‌ಫೈನಲ್ ತಲುಪಿದ್ದಾರೆ. ಆದರೆ ಇನ್ನೊಬ್ಬ ಸ್ಪರ್ಧಿ ಶ್ಯಾಮಸುಂದರ್ ಸ್ವಾಮಿ ಎರಡನೇ ಸುತ್ತಿನಲ್ಲಿ ಸೋತು ಹೊರನಡೆದರು. ರಾಕೇಶ್ 144–131ರಿಂದ ಹಾಂಗ್‌ಕಾಂಗ್‌ನ ಕ ಚೆನ್ ಎನ್‌ಗಾಯ್ ಎದುರು ಗೆಲುವು ಸಾಧಿಸಿದರು.

ಮುಂದಿನ ಪಂದ್ಯದಲ್ಲಿ ಅವರು ಮಂಗಳವಾರ ಸ್ಲೋವೆಕಿಯಾದ ಮರಿಯನ್ ಮ್ಯಾರೆಸಾಕ್ ಅವರನ್ನು ಎದುರಿಸುವರು.

ಎರಡನೇ ಸುತ್ತಿನಲ್ಲಿ ಬೈ ಪಡೆದಿದ್ದ ಶ್ಯಾಮಸುಂದರ್ ಅವರು 139-142ರಿಂದ ಅಮೆರಿಕದ, ಎರಡೂ ಕೈಗಳಿರದ ಮ್ಯಾಟ್ ಸ್ಟಟ್‌ಮನ್ ಎದುರು ಸೋಲು ಅನುಭವಿಸಿದರು. ಮ್ಯಾಟ್ ಅವರು ಕಾಲಿನ ಸಹಾಯದಿಂದಲೇ ಆರ್ಚರಿಯಲ್ಲಿ ಸ್ಪರ್ಧಿಸುತ್ತಾರೆ.

ತತಿಯಾನಗೆ 18ನೇ ಪದಕ

ಟೋಕಿಯೊ (ಎಎಫ್‌ಪಿ): ಅಮೆರಿಕದ ವೀಲ್‌ಚೇರ್ ರೇಸಿಂಗ್ ದಂತಕತೆ ತತಿಯಾನ ಮ್ಯಾಕ್‌ಫ್ಯಾಡನ್ ಪ್ಯಾರಾಲಿಂಪಿಕ್ ಇತಿಹಾಸದಲ್ಲಿ 18ನೇ ಪದಕ ತಮ್ಮದಾಗಿಸಿಕೊಂಡರು.

ಮಹಿಳೆಯರ ಟಿ54 ವಿಭಾಗದ 5 ಸಾವಿರ ಮೀಟರ್ಸ್ ಸ್ಪರ್ಧೆಯಲ್ಲಿ ಶನಿವಾರ ಅವರು ಕಂಚಿನ ಪದಕ (ಕಾಲ: 11 ನಿಮಿಷ 0.5 ಸೆಕೆಂಡು) ಗೆದ್ದರು. 2008ರಿಂದ ಅವರು ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿದ್ದಾರೆ. ಚಿನ್ನವು ಅಮೆರಿಕದ ಸುಸಾನ್ನಾ ಸ್ಕ್ಯಾರೋನಿ ಅವರ ಪಾಲಾಯಿತು. ಅವರು 10 ನಿಮಿಷ. 52.57 ಸೆಕೆಂಡು (ಪ್ಯಾರಾಲಿಂಪಿಕ್ಸ್ ದಾಖಲೆ) ಸಾಧನೆ ಮಾಡಿದರು.

ಕಬಡ್ಡಿ: ಹೊಸ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂಡವನ್ನು ಬಲಪಡಿಸುವ ಕನಸು ಹೊತ್ತುಕೊಂಡಿರುವ 12 ಫ್ರಾಂಚೈಸ್ ಗಳು ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) ಟೂರ್ನಿಯ ಎಂಟನೇ ಆವೃತ್ತಿಯಲ್ಲಿ ಹೊಸ ಆಟಗಾರರನ್ನು ತಮ್ಮತ್ತ ಸೆಳೆಯಲು ಪ್ರಯತ್ನಿಸಲಿವೆ. ಆಟಗಾರರ ಹರಾಜು ಭಾನುವಾರ ಮುಂಬೈಯಲ್ಲಿ ಆರಂಭಗೊಳ್ಳಲಿದೆ.

ಸ್ಥಳೀಯ ಆಟಗಾರರನ್ನು ಎ,ಬಿ,ಸಿ ಮತ್ತು ಡಿ ವಿಭಾಗಗಳಾಗಿ ವಿಂಗಡಿಸಲಾಗಿದೆ. ‘ಎ’ ವಿಭಾಗದವರಿಗೆ ಗರಿಷ್ಠ ಮೂಲ ಬೆಲೆ ₹ 30 ಲಕ್ಷ ಸಿಗಲಿದೆ. ‘ಬಿ’ ವಿಭಾಗದವರಿಗೆ ₹ 20 ಲಕ್ಷ, ‘ಸಿ’ ವಿಭಾಗದವರಿಗೆ ₹ 10 ಲಕ್ಷ ಮತ್ತು ‘ಡಿ’ ವಿಭಾಗದವರಿಗೆ ₹ 6 ಲಕ್ಷ ಸಿಗಲಿದೆ. ಪ್ರತಿ ತಂಡದಲ್ಲಿ ಕನಿಷ್ಠ ಇಬ್ಬರು ವಿದೇಶಿ ಆಟಗಾರರು ಇರಬೇಕು. ಗರಿಷ್ಠ ನಾಲ್ವರನ್ನು ಖರೀದಿಸಲು ಮಾತ್ರ ಅವಕಾಶವಿದೆ. ಹೊಸ ಯುವ ಆಟಗಾರರ ಪಟ್ಟಿಯಲ್ಲಿ ಸೇರದ, ಈಗಾಗಲೇ ತಂಡದಲ್ಲಿ ಇರುವ ಗರಿಷ್ಠ ಆರು ಆಟಗಾರರನ್ನು ಉಳಿಸಿಕೊಳ್ಳಲು ಫ್ರಾಂಚೈಸ್‌ಗಳಿಗೆ ಅವಕಾಶವಿದೆ.

450 ಹರಾಜಿಗೆ ಲಭ್ಯ ಇರುವ ಆಟಗಾರರು

161 ತಂಡಗಳು ಬಿಡುಗಡೆ ಮಾಡಿರುವ ಆಟಗಾರರು

59 ತಂಡಗಳಲ್ಲಿ ಉಳಿದುಕೊಂಡಿರುವವರು

25 ತಂಡಗಳ ಗರಿಷ್ಠ ಆಟಗಾರರ ಸಂಖ್ಯೆ

300 ಹರಾಜಾಗಬಲ್ಲ ಗರಿಷ್ಠ ಆಟಗಾರರು

ಹರಾಜು: ಆಗಸ್ಟ್ 29ರಿಂದ 31

ಆರಂಭ: ಸಂಜೆ 6.30

ಸ್ಥಳ:ಮುಂಬೈ

ಲೈವ್ ಸ್ಟಾರ್ ಸ್ಪೋರ್ಟ್ಸ್ (30ರಂದು ಮಾತ್ರ)

ಹೈದರಾಬಾದ್ ರೇಸ್

ಸಫ್ರೋನ್ ಆರ್ಟ್ ಗೆಲ್ಲುವ ನಿರೀಕ್ಷೆ

ಟೈಗರ್ ರೋಲ್ ಪ್ಲೇಟ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಸಫ್ರೋನ್ ಆರ್ಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಹ್ಯಾಷ್‌ಟ್ಯಾಗ್ 1, ಸೀಕ್ರೆಟ್ ಕಮಾಂಡ್ 3, ಹರಿಕೇನ್ 6

2ನೇ ರೇಸ್: ಟಾಪ್ ಡೈಮಂಡ್ 7, ಸ್ಪೇಸ್ ವಾಕ್ 5, ಕ್ವಾಲಿಟಿ ವಾರಿಯರ್ 4

3ನೇ ರೇಸ್: ಮೈಂಡ್ ರೀಡರ್ 2, ಎನ್.ಆರ್.ಐ ಮ್ಯಾಜಿಕ್ 1, ಎಕ್ಸ್‌ಪ್ಲೋಸಿವ್ 10

4ನೇ ರೇಸ್: ಎನ್.ಆರ್.ಐ ಸನ್ 2, ಡ್ಯೂ ಡೆಲಿಜೆನ್ಸ್ 6, ಹಾರ್ಸ್ ಓ ವಾರ್ 1

5ನೇ ರೇಸ್: ಸ್ಟೆಕ್ಟಾಕ್ಯುಲ್ ಕ್ರೂಯ್ 11, ಜನರಲ್ ಅಟ್ಲಾಂಟಿಕ್ 3, ಸೀ ಆಫ್ ಕ್ಲಾಸ್ 4

6ನೇ ರೇಸ್: ಲೈಫ್‌ಟೈಮ್ 10, ಕಿಂಗ್‌ಸ್ಟನ್ 6, ಡಿಫರೆಂಟ್ 4

7ನೇ ರೇಸ್: ಸಫ್ರೋನ್ ಆರ್ಟ್ 10, ಮಿರಾನ 4, ಸ್ಟ್ರಾಮ್‌ಜೆಟ್ 2

8ನೇ ರೇಸ್: ಅಶ್ವ ಜಾಹರ್ 4, ಸಿಟಿ ಆಫ್ ಬ್ಲಿಸ್ 1, ಶೋ ಮಿ ಯುವರ್ ವಾಕ್ 6

ಉತ್ತಮ ಬೆಟ್: ಲೈಫ್‌ಟೈಮ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
4,5,6,7,8	2,3,4,5	5,6,7,8

1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
1,2,3	3,4,5	6,7,8

ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ಭಾರತ ತಂಡಕ್ಕೆ ಇನಿಂಗ್ಸ್ ಸೋಲು

ಒಲಿ ದಾಳಿಗೆ ವಿರಾಟ್ ಬಳಗ ದೂಳೀಪಟ

ಲೀಡ್ಸ್ (ಪಿಟಿಐ): ವೇಗಿ ಒಲಿ ರಾಬಿನ್ಸನ್ ಬಿರುಗಾಳಿ ವೇಗದ ಮುಂದೆ ಭಾರತ ತಂಡದ ಹೋರಾಟಕ್ಕೆ ಪೂರ್ಣವಿರಾಮ ಬಿದ್ದಿತು.

ಹೆಡಿಂಗ್ಲೆಯಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ಇನಿಂಗ್ಸ್ ಮತ್ತು 76 ರನ್‌ಗಳ ಜಯ ಸಾಧಿಸಿತು. ಸರಣಿಯಲ್ಲಿ 1–1ರಿಂದ ಸಮಬಲ ಸಾಧಿಸಿತು. ಇಂಗ್ಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 354 ರನ್‌ಗಳ ಮುನ್ನಡೆ ಸಾಧಿಸಿತ್ತು. ಅದಕ್ಕುತ್ತರವಾಗಿ ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ 99.3 ಓವರ್‌ಗಳಲ್ಲಿ 278 ರನ್ ಗಳಿಸಿ ಆಲೌಟ್ ಆಯಿತು.

ರಾಬಿನ್ಸನ್ (65ಕ್ಕೆ5) ಹೊಸ ಚೆಂಡಿನಲ್ಲಿ ಮಾಡಿದ ದಾಳಿಯ ಮುಂದೆ ಭಾರತ ತಂಡದ ಮಧ್ಯಮ ಕ್ರಮಾಂಕ ಕುಸಿಯಿತು. ಶನಿವಾರದ ಆಟದಲ್ಲಿ ವಿರಾಟ್ ಬಳಗವು 19.3 ಓವರ್‌ಗಳಲ್ಲಿ 63 ರನ್ ಗಳಿಸಿ, ಎಂಟು ವಿಕೆಟ್ ಕಳೆದುಕೊಂಡಿತು. ಶುಕ್ರವಾರ ಬ್ಯಾಟಿಂಗ್ ಆರಂಭಿಸಿದ್ದ ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗಳಿಗೆ 215 ರನ್ ಗಳಿಸಿತ್ತು.

ವಿರಾಟ್ ಕೊಹ್ಲಿ –ಎಪಿ ಚಿತ್ರ

ಕ್ರೀಸ್‌ನಲ್ಲಿ 91 ರನ್ ಗಳಿಸಿದ್ದ ಚೇತೇಶ್ವರ್ ಪೂಜಾರ ಮತ್ತು 45 ರನ್ ಗಳಿಸಿದ್ದ ವಿರಾಟ್ ಕೊಹ್ಲಿ ಇದ್ದರು.

ಆದರೆ, ನಾಲ್ಕನೇ ದಿನದಾಟದ ಬೆಳಿಗ್ಗೆ ಆಟ ಮುಂದುವರಿಸಿದ ಇಬ್ಬರಿಗೂ ರಾಬಿನ್ಸನ್ ತಡೆಯೊಡ್ಡಿದರು. ಪೂಜಾರಗೆ ಶತಕ ಬಾರಿಸಲು ಬಿಡಲಿಲ್ಲ. ಅಂತೂ ಇಂತೂ ಅರ್ಧಶತಕ ಗಳಿಸಿದ ವಿರಾಟ್ ಕೊಹ್ಲಿ ಆಟಕ್ಕೂ ರಾಬಿನ್ಸನ್ ಕಡಿವಾಣ ಹಾಕಿದರು.

ಅಜಿಂಕ್ಯ ರಹಾನೆ (10 ರನ್) ಬ್ಯಾಟಿಂಗ್ ವೈಫಲ್ಯ ಮುಂದುವರಿಯಿತು. ಜೇಮ್ಸ್ ಆ್ಯಂಡರ್ಸನ್ ಎಸೆತವನ್ನು ಎದುರಿಸುವಲ್ಲಿ ವಿಫಲರಾದ ರಹಾನೆ ವಿಕೆಟ್ ಚೆಲ್ಲಿದರು. ರಿಷಭ್ ಪಂತ್ ಕೇವಲ ಒಂದು ರನ್ ಗಳಿಸಿ ಔಟಾಗಲು ರಾಬಿನ್ಸನ್ ಕಾರಣರಾದರು.

ರಾಬಿನ್ಸನ್ ಎಸೆತಗಳ ಲೆಂಗ್ತ್ ಗುರುತಿಸುವಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾದ ರವೀಂದ್ರ ಜಡೇಜ (30; 25 ಎ) ಸೋಲಿನ ಅಂತರ ಕಡಿಮೆ ಮಾಡಿದರು. ಓವರ್ಟನ್ ಬೌಲಿಂಗ್‌ನಲ್ಲಿ ಅವರು ಬಟ್ಲರ್‌ಗೆ ಕ್ಯಾಚಿತ್ತರು.

ಕೆಳಕ್ರಮಾಂಕದ ಬ್ಯಾಟ್ಸ್‌ಮನ್‌ಗಳಿಂದ ಈ ಪಂದ್ಯದಲ್ಲಿ ಯಾವ ಜಾದೂ ಕೂಡ ನಡೆಯಲಿಲ್ಲ. ಲಾರ್ಡ್ಸ್‌ನಲ್ಲಿ ಅರ್ಧಶತಕ ಬಾರಿಸಿದ್ದ ಮೊಹಮ್ಮದ್ ಶಮಿಗೆ ಇಲ್ಲಿ ಇಲ್ಲಿ ಆರು ರನ್ ಗಳಿಸಲು ಮಾತ್ರ ಸಾಧ್ಯವಾಯಿತು. ಅವರಿಗೆ ಮೋಯಿನ್ ಅಲಿ ಪೆವಿಲಿಯನ್ ಹಾದಿ ತೋರಿಸಿದರು.

ಮೊದಲ ಇನಿಂಗ್ಸ್‌ನಲ್ಲಿ ಭಾರತ ತಂಡವು ಕೇವಲ 78 ರನ್‌ಗಳಿಗೆ ಆಲೌಟ್ ಆಗಿತ್ತು.

ಜಡೇಜಗೆ ಸ್ಕ್ಯಾನಿಂಗ್

ಭಾರತದ ಆಲ್‌ರೌಂಡರ್ ರವೀಂದ್ರ ಜಡೇಜ ಅವರ ಮೊಣಕಾಲಿಗೆ ಗಾಯವಾಗಿದ್ದು ಶನಿವಾರ ಸ್ಕ್ಯಾನಿಂಗ್‌ಗೆ ಒಳಪಡಿಸಲಾಗಿದೆ. ಮೂರನೇ ಟೆಸ್ಟ್‌ನ ಇಂಗ್ಲೆಂಡ್ ಇನಿಂಗ್ಸ್ ವೇಳೆ ಫೀಲ್ಡಿಂಗ್ ಮಾಡುತ್ತಿದ್ದಾಗ ಅವರು ಗಾಯಗೊಂಡಿದ್ದರು.

ವಿಕೆಟ್ ಗಳಿಸಿದ ಸಂಭ್ರಮದಲ್ಲಿ ಒಲಿ ರಾಬಿನ್ಸನ್ –ಎಪಿ/ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 78

ಇಂಗ್ಲೆಂಡ್ (ಮೊದಲ ಇನಿಂಗ್ಸ್) 432

ಭಾರತ (ಎರಡನೇ ಇನಿಂಗ್ಸ್) 278 (99.3 ಓವರ್)

(ಶುಕ್ರವಾರ 80 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 215)

ಪೂಜಾರ ಎಲ್‌ಬಿಡಬ್ಲ್ಯು ಬಿ ರಾಬಿನ್ಸನ್ 91 (189 ಎ, 4X15), ವಿರಾಟ್ ಸಿ ರೂಟ್ ಬಿ ರಾಬಿನ್ಸನ್ 55 (125 ಎ, 4X8), ಅಜಿಂಕ್ಯ ಸಿ ಬಟ್ಲರ್ ಬಿ ಆ್ಯಂಡರ್ಸನ್ 10 (25ಎ, 4X2), ರಿಷಭ್ ಸಿ ಓವರ್ಟನ್ ಬಿ ರಾಬಿನ್ಸನ್ 1 (7ಎ), ಜಡೇಜ ಸಿ ಬಟ್ಲರ್ ಬಿ ಓವರ್ಟನ್ 30 (25ಎ, 4X5, 6X1), ಶಮಿ ಬಿ ಅಲಿ 6 (8ಎ, 4X1), ಇಶಾಂತ್ ಸಿ ಬಟ್ಲರ್ ಬಿ ರಾಬಿನ್ಸನ್ 2 (5ಎ), ಬೂಮ್ರಾ ಔಟಾಗದೆ 1 (6ಎ), ಸಿರಾಜ್ ಸಿ ಬೇಸ್ಟೊ ಬಿ ಓವರ್ಟನ್ 0 (2ಎ).

ಇತರೆ (ಬೈ 4, ಲೆಗ್‌ಬೈ 4, ನೋಬಾಲ್ 5, ವೈಡ್ 2) 15

ವಿಕೆಟ್ ಪತನ: 3–215 (ಚೇತೇಶ್ವರ್ ಪೂಜಾರ, 83.3), 4–237 (ವಿರಾಟ್ ಕೊಹ್ಲಿ, 89.6), 5–239 (ಅಜಿಂಕ್ಯ ರಹಾನೆ, 90.6), 6–239 (ರಿಷಭ್ ಪಂತ್, 91.5), 7–254 (ಮೊಹಮ್ಮದ್ ಶಮಿ, 94.2), 8–257 (ಇಶಾಂತ್ ಶರ್ಮಾ, 95.5), 9–278 (ರವೀಂದ್ರ ಜಡೇಜ, 99.1), 10–278 (ಮೊಹಮ್ಮದ್ ಸಿರಾಜ್, 99.3)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 26–11–63–1, ಒಲಿ ರಾಬಿನ್ಸನ್ 26–6–65–5, ಕ್ರೇಗ್ ಓವರ್ಟನ್ 18.3–6–47–3, ಸ್ಯಾಮ್ ಕರನ್ 9–1–40–0, ಮೋಯಿನ್ ಅಲಿ 14–1–40–1, ಜೋ ರೂಟ್ 6–1–15–0

ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ ಇನಿಂಗ್ಸ್ ಮತ್ತು 76 ರನ್‌ಗಳ ಜಯ, ಸರಣಿ 1–1 ಸಮಬಲ.

ಸ್ನೂಕರ್: ಅಮೋಘ ಜಯ ಸಾಧಿಸಿದ ನಿಖಿಲ್, ಭರತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಖಿಲ್ ಪಿಸೆ ಅವರು ರಾಜ್ಯ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಟೂರ್ನಿಯ ಸೀನಿಯರ್ ಪುರುಷರ ನಾಕೌಟ್ ಹಂತದ ಎರಡೂ ಪಂದ್ಯಗಳನ್ನು ಗೆದ್ದುಕೊಂಡರು. ಬೆಳಗಾವಿಯ ಭರತ್ ತಪಾಡಿಯ ಜೂನಿಯರ್ ಬಾಲಕರ ವಿಭಾಗದಲ್ಲಿ ಜಯ ಸಾಧಿಸಿದರು.

ನಾಕೌಟ್ ಎರಡನೇ ಸುತ್ತಿನಲ್ಲಿ ನಿಖಿಲ್ ಪಿಸೆ 62-105, 100-88, 101-93, 91-100, 100-69ರಲ್ಲಿ ನಾಗರಾಜ್ ವಿರುದ್ಧ ಗೆದ್ದರು. ಮೈಕೆಲ್ ರೆಬೆಲೊ 100-83, 100-61, 53-101, 30-100, 100-48ರಲ್ಲಿ ಕುಶಲ್ ಅವರನ್ನು, ಪ್ರಭಾಕರ್ 84-102, 102-74, 50-100, 100-88, 100-96ರಲ್ಲಿ ಸುನಿಲ್ ಅವರನ್ನು, ಸಾಯಿರಾಮ್ 100-54, 100-70, 69-101, 102-48ರಲ್ಲಿ ಸೂಫಿಯಾನ್ ಅಹಮ್ಮದ್ ಅವರನ್ನು, ಕ್ಷಿತಿಜ್ 101-59, 100-37, 101-24ರಲ್ಲಿ ಕಿರಣ್ ರಾಜ್ ಅವರನ್ನು, ಯುಗಂಧರ್ 100-47, 68-100, 100-79, 100-69ರಲ್ಲಿ ಕೈಲಾಶ್ ಅವರನ್ನು, ನದೀಮ್ ಅಜೀಜ್ 102-37, 100-58, 100-56ರಲ್ಲಿ ವರುಣ್ ಅವರನ್ನು ಮಣಿಸಿದರು.

ಭರತ್ ತಪಾಡಿಯ ಮೊದಲ ಸುತ್ತಿನಲ್ಲಿ ಮೊಹಮ್ಮದ್ ದಸ್ತಗೀರ್ ವಿರುದ್ಧ 55-45, 54-43, 58-83, 55-30ರಲ್ಲಿ ಮತ್ತು ಎರಡನೇ ಸುತ್ತಿನಲ್ಲಿ ಅಜ್ಲಾನ್ ವಾಜಿದ್ ವಿರುದ್ಧ 64-21, 54-07, 44-16ರಲ್ಲಿ ಜಯ ಗಳಿಸಿದರು.

ಎರಡನೇ ಸುತ್ತಿನಲ್ಲಿ ಮಯಂಕ್ ಕಾರ್ತಿಕ್ 60-30, 66-52, 56-54 ರಲ್ಲಿ ಪ್ರಣವ್ ಆರ್ಥರ್ ವಿರುದ್ಧ, ಡ್ಯಾನಿಷ್ 63-19, 70-35, 61-13ರಲ್ಲಿ ಶಂಸ್ ಅಜರ್ ವಿರುದ್ಧ, ಫ್ಯಾಬಿನ್ 66-40, 63-50, 37-45, 56-07ರಲ್ಲಿ ರೋಹನ್ ನಾಯ್ಕರ್ ವಿರುದ್ಧ, ಶ್ರೀವಿಷ್ಣು 57-07, 59-16, 72-13ರಲ್ಲಿ ಲಕ್ಷ್ ಸಾಧ್ವಾನಿ ವಿರುದ್ಧ, ಜುಬಿನ್ ಜಹೀರ್ 63-13, 67-30, 50-25ರಲ್ಲಿ ಸಾಹಿಲ್ ಜಮಾದಾರ್ ವಿರುದ್ಧ ಗೆಲುವು ಸಾಧಿಸಿದರು.

ಈಕ್ವಿಟಿ ಎಫ್‌ಡಿಐ: ಕರ್ನಾಟಕಕ್ಕೆ ಮೊದಲ ಸ್ಥಾನ



ನವದೆಹಲಿ (ಪಿಟಿಐ): 2021–22ರ ಏಪ್ರಿಲ್–ಜೂನ್ ಅವಧಿಯಲ್ಲಿ ಈಕ್ವಿಟಿಗಳಲ್ಲಿ ಆಗಿರುವ ಒಟ್ಟಾರೆ ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ (ಎಫ್‌ಡಿಐ) ಕರ್ನಾಟಕವು ಮೊದಲ ಸ್ಥಾನದಲ್ಲಿದೆ. ಮಹಾರಾಷ್ಟ್ರ ಮತ್ತು ದೆಹಲಿ ನಂತರದ ಸ್ಥಾನದಲ್ಲಿವೆ.

ಏಪ್ರಿಲ್–ಜೂನ್ ಅವಧಿಯಲ್ಲಿ ಈಕ್ವಿಟಿ ಎಫ್‌ಡಿಐಗಳಲ್ಲಿ ಒಟ್ಟು ₹ 1.30 ಲಕ್ಷ ಕೋಟಿಗಳಷ್ಟಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ದೇಶದಲ್ಲಿ ಆಗಿದ್ದ ₹ 48,544 ಕೋಟಿ ಹೂಡಿಕೆಗೆ ಹೋಲಿಸಿದರೆ ಈ ಬಾರಿ ಹೂಡಿಕೆಯ ಪ್ರಮಾಣವು ಶೇ 168ರಷ್ಟು ಹೆಚ್ಚಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

ಜನಧನ ಯೋಜನೆಗೆ ಏಳು ವರ್ಷ

ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಜನಧನ ಯೋಜನೆಯು (ಪಿಎಂಜೆಡಿವೈ) ಜಾರಿಗೆ ಬಂದು ಏಳು ವರ್ಷಗಳಾಗಿದ್ದು, ಜನಧನ ಖಾತೆಗಳ ಸಂಖ್ಯೆಯು 43 ಕೋಟಿಗೆ ತಲುಪಿದೆ. ಒಟ್ಟು ಠೇವಣಿಯ ಮೊತ್ತ ₹ 1.46 ಲಕ್ಷ ಕೋಟಿಗೂ ಹೆಚ್ಚಿಗೆ ಇದೆ ಎಂದು ಹಣಕಾಸು ಸಚಿವಾಲಯ ಶನಿವಾರ ಮಾಹಿತಿ ನೀಡಿದೆ.

ಮಹಿಳೆಯರೇ ಹೆಚ್ಚು: 2021ರ ಆಗಸ್ಟ್ 18ರವರೆಗಿನ ಮಾಹಿತಿಯ ಪ್ರಕಾರ, ಒಟ್ಟು ಜನಧನ ಖಾತೆಗಳ ಸಂಖ್ಯೆಯು 43.04 ಕೋಟಿಗಳಷ್ಟಾಗಿದೆ. ಇದರಲ್ಲಿ ಶೇ 55.47ರಷ್ಟು (23.87 ಕೋಟಿ) ಖಾತೆಗಳನ್ನು ಮಹಿಳೆಯರೇ ಹೊಂದಿದ್ದಾರೆ.

‘ಅಸಂಖ್ಯಾತ ಜನರನ್ನು ಸಬಲರನ್ನಾಗಿಸಲು ಹಾಗೂ ಘನತೆಯ ಜೀವನ ನಡೆಸಲು ಈ ಯೋಜನೆ ಕಾರಣವಾಗಿದೆ’ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಬ್ಯಾಟರಿ ತಯಾರಿಕಾ ಕಂಪನಿಗಳೊಂದಿಗೂ ಒಪ್ಪಂದ

ಇ–ಸ್ಕೂಟರ್ ತಯಾರಿಕಾ ಕೇಂದ್ರವಾಗುತ್ತಿದೆ ಹೊಸೂರು

• ಇಟಿಬಿ ಶಿವಪ್ರಿಯನ್

ಚೆನ್ನೈ: ತಮಿಳುನಾಡಿನ ಹೊಸೂರು ಹಾಗೂ ಕೃಷ್ಣಗಿರಿ ಮತ್ತು ಧರ್ಮಪುರಿ ಜಿಲ್ಲೆಗಳ ಪಕ್ಕದ ಪ್ರದೇಶಗಳು ವಿದ್ಯುತ್ ಚಾಲಿತ ಸ್ಕೂಟರ್‌ಗಳು (ಇ–ಸ್ಕೂಟರ್) ಮತ್ತು ಬ್ಯಾಟರಿಗಳನ್ನು ತಯಾರಿಸುವ ಕೇಂದ್ರವಾಗಿ ಹೊರಹೊಮ್ಮುತ್ತಿವೆ.

ಹೊಸೂರು ಮತ್ತು ಸುತ್ತಲಿನ ಪ್ರದೇಶದಲ್ಲಿ ಇ–ಸ್ಕೂಟರ್ ತಯಾರಿಕಾ ಘಟಕಗಳನ್ನು ಸ್ಥಾಪಿಸುವುದಾಗಿ ಓಲಾ ಸೇರಿದಂತೆ ಐದು ಕಂಪನಿಗಳು ತಮಿಳುನಾಡು ಸರ್ಕಾರದ ಜೊತೆಗೆ ಒಪ್ಪಂದ ಮಾಡಿಕೊಂಡಿವೆ.

ಓಲಾ, ಏಥರ್, ಶ್ರೀವಾರು ಮೋಟರ್ಸ್ ಮತ್ತು ಸಿಂಪಲ್ ಎನರ್ಜಿ ಕಂಪನಿಗಳು ತಮ್ಮ ಹೊಸ ಘಟಕಗಳಲ್ಲಿ ಇ–ಸ್ಕೂಟರ್ ತಯಾರಿಸಲಿವೆ. ಟಿವಿಎಸ್ ಮೋಟರ್ ಕಂಪನಿಯು ಹೊಸೂರಿನಲ್ಲಿ ಇರುವ ತನ್ನ ತಯಾರಿಕಾ ಘಟಕದಲ್ಲಿಯೇ ಇ–ಸ್ಕೂಟರ್ ತಯಾರಿಸುತ್ತಿದೆ. ಆಂಪಿಯರ್ ಕಂಪನಿಯು ರಾಣಿಪೇಟೆಯಲ್ಲಿ ತಯಾರಿಕಾ ಘಟಕ ಸ್ಥಾಪನೆಗೆ ₹ 7 ಸಾವಿರ ಕೋಟಿ ಹೂಡಿಕೆ ಮಾಡುತ್ತಿದೆ.

ರಾಜ್ಯ ಸರ್ಕಾರವು ಇ–ಸ್ಕೂಟರ್ ತಯಾರಕರಿಗಷ್ಟೇ ಅಲ್ಲದೆ, ಅವುಗಳಿಗೆ ಬ್ಯಾಟರಿಗಳನ್ನು ತಯಾರಿಸುವ ಕಂಪನಿಗಳನ್ನೂ ಆಕರ್ಷಿಸುತ್ತಿದೆ. ಈ ಸಂಬಂಧ ಎಕ್ಸೈಡ್, ಅಮರ್ ರಾಜಾದಂತಹ ಪ್ರಮುಖ ಕಂಪನಿಗಳ ಜೊತೆ ತಮಿಳುನಾಡು ಸರ್ಕಾರವು ಮಾತುಕತೆ ನಡೆಸುತ್ತಿದೆ ಎಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

ಬ್ಯಾಟರಿ ತಯಾರಿಕಾ ಘಟಕ ಸ್ಥಾಪಿಸುವ ಕುರಿತು ಲುಕಾಸ್–ಟಿವಿಎಸ್, ಲಿ ಎನರ್ಜಿ ಮತ್ತು ಸ್ಟಾನಡಿನ್ ಕಂಪನಿಗಳು ಈಗಾಗಲೇ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿವೆ.

ಒಂದೇ ಪ್ರದೇಶದಲ್ಲಿ ಸ್ಕೂಟರ್ ಮತ್ತು ಅದರ ಬಿಡಿಭಾಗಗಳ ತಯಾರಕರ ಅಗತ್ಯ ಇದೆ. ಇ–ಸ್ಕೂಟರ್ ತಯಾರಿಸುವವರನ್ನು ಓಲೈಸುವ ಸಮಯದಲ್ಲಿಯೇ ಬ್ಯಾಟರಿ ತಯಾರಕರನ್ನೂ ಆಕರ್ಷಿಸುವತ್ತ ಗಮನ ಹರಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಹೊಸೂರು ಅಭಿವೃದ್ಧಿ ಹೊಂದಿದ ನಗರವಾಗಿದ್ದು, ಇದು ಬೆಂಗಳೂರಿಗೆ ಹತ್ತಿರದಲ್ಲಿ ಇರುವುದರಿಂದ ಹೂಡಿಕೆದಾರರ ನೆಚ್ಚಿನ ತಾಣಗಳಲ್ಲಿ ಒಂದಾಗಿದೆ. ಮತ್ತೊಂದು ಅನುಕೂಲವೆಂದರೆ ಕೃಷ್ಣಗಿರಿ ಮತ್ತು ಧರ್ಮಪುರಿ ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಭೂಮಿ ಲಭ್ಯವಿದೆ. ಹೀಗಾಗಿ ಹೆಚ್ಚಿನ ಹೊಸ ಘಟಕಗಳು ಇಲ್ಲಿಗೆ ಬರಲಿವೆ ಎಂದು ಅವರು ಹೇಳಿದರು.

ವಾಹನ ಸ್ಥಳಾಂತರ ಸುಲಭಕ್ಕೆ ‘ಬಿಎಚ್’ ನೋಂದಣಿ ಸರಣಿ

ನವದೆಹಲಿ (ಪಿಟಿಐ): ಹೊಸ ವಾಹನಗಳಿಗೆ ‘ಭಾರತ್ ಸರಣಿ’ (ಬಿಎಚ್–ಸಿರೀಸ್) ಎನ್ನುವ ಹೊಸ ನೋಂದಣಿ ವ್ಯವಸ್ಥೆಯನ್ನು ರೂಪಿಸಲಾಗಿದೆ. ಇದನ್ನು ಹೊಂದಿರುವ ವಾಹನ ಮಾಲೀಕರು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸ್ಥಳಾಂತರಗೊಂಡಾಗ ಅಲ್ಲಿ ಮರು ನೋಂದಣಿ ಮಾಡುವ ಅಗತ್ಯ ಇರುವುದಿಲ್ಲ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಶನಿವಾರ ತಿಳಿಸಿದೆ.

ರಕ್ಷಣಾ ಸಿಬ್ಬಂದಿ, ಕೇಂದ್ರ ಮತ್ತು ರಾಜ್ಯ ಸರ್ಕಾರಿ ಉದ್ಯೋಗಿಗಳು, ಸರ್ಕಾರಿ ಸ್ವಾಮ್ಯದ ಕಂಪನಿಗಳು ಹಾಗೂ ನಾಲ್ಕು ಅಥವಾ ಅದಕ್ಕಿಂತ ಹೆಚ್ಚಿನ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಚೇರಿಗಳನ್ನು ಹೊಂದಿರುವ ಖಾಸಗಿ ಕಂಪನಿಗಳ ಉದ್ಯೋಗಿಗಳಿಗೆ ಈ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ. ಸ್ವಯಂ ಪ್ರೇರಿತವಾಗಿ ಈ ಸೌಲಭ್ಯ ಬಳಸಿಕೊಳ್ಳಬಹುದು ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಕೇಂದ್ರ ಮೋಟಾರು ವಾಹನಗಳ (12ನೇ ತಿದ್ದುಪಡಿ) ನಿಯಮವು ಸೆಪ್ಟೆಂಬರ್ 15ರಿಂದ ಜಾರಿಗೆ ಬರಲಿದೆ. ಬಿಎಚ್–ಸರಣಿಯ ವಾಹನಗಳಿಗೆ ನೋಂದಣಿಯನ್ನು ಜಾಲತಾಣದ ಮೂಲಕ ಮಾಡಲಾಗುತ್ತದೆ ಎಂದು ತಿಳಿಸಿದೆ.

ಸದ್ಯ ಇರುವ ನಿಯಮದ ಪ್ರಕಾರ, ಯಾವುದೇ ವಾಹನ ಮಾಲೀಕರು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸ್ಥಳಾಂತರಗೊಂಡಾಗ ಸ್ಥಳಾಂತರಗೊಂಡ ರಾಜ್ಯದಲ್ಲಿ 12 ತಿಂಗಳ ಒಳಗಾಗಿ ಮರು ನೋಂದಣಿ ಮಾಡಿಕೊಳ್ಳಬೇಕು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೊಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	395-400

ರಾಮನಗರ ರೇಷ್ಮೆ

ಮಿಶ್ರತಳಿ	263-442
ದ್ವಿತಳಿ	289-541

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	---	13000	--- ಸೆಂಟ್ಸ್
ಎಸಿ	---	---	5200	
ಆರ್‌ಪಿ	---	---	6250	ಲಂಡನ್
ಆರ್‌ಸಿ	---	---	3625	--- ಡಾಲರ್ಸ್

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹420
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹421

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1610)
ಸೋಯಾ (ರಿಫೈನ್ಡ್)	₹1400(1400)
ಸೂರ್ಯಕಾಂತಿ (ರಿಫೈನ್ಡ್)	₹1490(1490)
ಪಾಮೋಲಿನ್	₹1270 (1270)

ಮುಂಬೈ ಧಾರಣೆ

ಶೇಂಗಾ

28-8-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9550-9600
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1800 (1620)
ಒಂದು ವಾರದ ಡೆಲಿವರಿ	1595 (1615)
ಸೋಯಾ ಕಚ್ಚಾ	1365 (1370)
ಪಾಮ್ ವಾರದ ಡೆಲಿವರಿ	1268 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1440 (1440)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,700 (46,900)

ಬೆಳ್ಳಿ ಕೆ.ಜಿ 64,000 (62,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ